ಶ್ರೀರಸ್ತು.

ಶ್ರೀಮನ್ಮಹಾರಾಜ... ರಾಜ

ಶ್ರೀಕೃಷ್ಣರಾಜ ಒಡೆಯರ್ ಬಹದರವರಿಂದ

ರಚಿಸಲ್ಪಟ್ಟ

ಶ್ರೀ ಕೃಷ್ಣರಾಜ ವಾಣೀವಿಲಾಸ

ಎಂಬ

ಯಯಾತಿರಾಯನ ಚರಿತ್ರೆ.

ಶ್ರೀಮನ್ಮಹಾರಾಜಾಧಿರಾಜ ಚಾಮರಾಜೇಂದ್ರ ಒಡಯರ್
ಬಹದ್ದೂರ ಜಿ. ಸಿ. ಎಸ್. ಐ. ಅವರುಗಳ ಅಪ್ಪಣೆಯಂಪಡದು

ಯಂ. ರುದ್ರಪ್ಪ ಆಂಡ್ ಸನ್ ಅವರುಗಳಿಂದ
ಸ್ವಕೀಯ "ಶ್ರೀಚಾಮುಂಡೇಶ್ವರ" ಮುದ್ರಾಕ್ಷರಶಾಲೆಯಲ್ಲಿ
ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಬೆಂಗಳೂರು;

೧೮೯೦.

ಮೊದಲನೇ ಛಾಪೆ—೧೫೦ ಪ್ರತಿಗಳು.

ಪೀಠಿಕೆ.

೧೮೯೦ನೇ ಇಸವಿ ಜೂಲೈ ತಿಂಗಳು ೨೮ನೇ ತಾರೀಖಿನಲ್ಲಿ ಮೈಸೂರು ಶ್ರೀಮನ್ ಮಹಾರಾಜರವರಿಗೆ ಜನಕ ಸಂತತಿಯಲ್ಲಿ ಜೇಷ್ಠ ಭ್ರಾತೃಗಳಾದ ಸುಬ್ರಹ್ಮಣ್ಯ ರಾಜ ಅರಸಿನವರು ಪರಲೋಕಪ್ರಾಪ್ತಿ ಹೊಂದಿದರು. ಅದರಿಂದ ಈ ಸೀಮೆಯಲ್ಲಿರುವವರಿಗೆಲ್ಲಾ ಮಹತ್ತಾದ ದುಃಖವುಂಟಾಗಿರುವದು. ಇವರು ಪಿಙ್ಗಳ ವರುಷ ಕಾರ್ತೀಕ ಬಹುಳ ಸಪ್ತಮಿಯ ದಿವಸ ಜನಿಸಿ ಗ್ರೀಸ್ ದೇಶದ ಅರಸನಾದ ಅಲೆಗ್ಸಾಂಡರ್ ನಂತೆಯೂ ೩೨ ವರುಷಗಳು ಮಾತ್ರವೇ ಈ ಭೂಮಿಯಲ್ಲಿ ಜೀವಿಸಿದ್ದರು.

ಸುಬ್ರಹ್ಮಣ್ಯರಾಜ ಅರಸಿನವರು ಮಹಾರಾಜರವರೊಡನೆ ವಿದ್ಯಾಭ್ಯಾಸವನ್ನು ಮಾಡಿ ಅವರಿಗೆ ಕಾಲೋಚಿತವಾಗಿ ಆಲೋಚನೆಗಳನ್ನೇಳುತ ಎಲ್ಲರಿಗೂ ಪ್ರೀತಿಪಾತ್ರರಾಗಿದ್ದರು. ದೊಡ್ಡವರಲ್ಲಿ ವಿನಯವೂ ಬಂಧುಗಳಲ್ಲಿ ವಾತ್ಸಲ್ಯವೂ ಪ್ರಜೆಗಳಲ್ಲಿ ಆದರಣೆಯೂ ಉಳ್ಳವರಾಗಿ ನಿಷ್ಪಕ್ಷಪಾತರಾಗಿಯೂ ಮೃದುಭಾಷಣೆಯುಳ್ಳವರಾಗಿಯೂ ಇದ್ದರು. ವಿಶೇಷವಾಗಿ ಇವರಿಂದ ನಾವು ಬಹುಮಾನಗಳನ್ನು ಪಡೆದವರಾದ್ದರಿಂದ ಈ ಸಂಭವದಿಂದ ನಮಗೆ ಬಹಳವಾಗಿ ವಿಷಾದವುಂಟಾಗಿದೆ. ಪ್ರಚಂಡಮಾರುತವು ಗಿಡವನ್ನು ಕಿತ್ತು ಹಾಕಿದರೀತಿಯಲ್ಲಿ ಮೃತ್ಯುವು ಇವರನ್ನು ಅಕಾಲದಲ್ಲಿ ಕೊಂಡು ಹೋಯಿತು !

ಇಂತಾ ಮಹಾನು ಭಾವರ ಜ್ಞಾಪಕಾರ್ಥವಾಗಿ ನಾವು ಯಯಾತಿ ರಾಯನ ಚರಿತ್ರವನ್ನು ಪ್ರಕಟಿಸುತ್ತೇವೆ. ಈ ಚರಿತ್ರವು ಬಹಳ ಪುಣ್ಯಪ್ರದವಾದ್ದರಿಂದ ಇದನ್ನು ಅಮಾವಾಸ್ಯೆಯಲ್ಲಿಯೂ ಪಿತೃಯಜ್ಞ ದಿವಸಗಳಲ್ಲಿಯೂ ಓದಿದಂಥಾವರೂ ಓದಿಸಿ ಕೇಳಿದಂಥಾವರೂ ಸಕಲ ಪಾಪಗಳಿಂದಲೂ ವಿಮುಕ್ತರಾಗುವರೆಂದು ಹೇಳಲ್ಪಟ್ಟಿದೆ.

ಈ ಪ್ರಕಟನೆಗಳಲ್ಲಿ ಶ್ರೀಮನ್ ಮಹಾರಾಜರಾಜಾ ಸಾಹೇಬ್ಬಹದ್ದರವರ ದರಬಾರ್ ಬಕ್ಷಿಯವರಾದ ವಿದ್ಯಾಭಿಮಾನಿಗಳಾದ ಅಂಬಿಲ್ ನರಸಿಂಹೈಯ್ಯಂಗಾರ್ರವರು ಬಹಳವಾಗಿ ನಮ್ಮನ್ನು ಶೀಕ್ಷಿಸುತ್ತಲು ಉತ್ಸಾಹಪಡಿಸುತ್ತಲು ಆದರಿಸುತ್ತಲಿದ್ದಾರೆಂದು ಬರದಿಡಲು ಕೃತಜ್ಞರಾಗಿರುವ,

ಯಂ. ರುದ್ರಪ್ಪ ಅನ್ಡ್ ಸನ್,
ಪ್ರೊಪ್ರೈಟರ್ಸ ಶ್ರೀಚಾಮುಂಡೇಶ್ವರಿ ಪ್ರೆಸ್,
ಲಾಲ್‌ಬಾಗ್ ರೋಡ್, ಬೆಂಗಳೂರು.

ತಾ॥ ೨೮ನೇ ಆಗಸ್ಟ
೧೮೯೦.

PREFACE.

Prince Subrahmanya Raj Urs, elder brother of His Highness the Maha Raja of Mysore, died on 29th July 1890, deeply regretted by all who knew him. He was born in 1857, and died at the age of 33 years like Alexander the Great and Jesus Christ.

The Prince was educated in the Royal College of Mysore by the late Mr. Porter and was always a sound and impartial counselor to His Highness the Maharaja. He was very amiable and liked by all who came in contact with him. We have been indebted to the Prince for many favors and as a token of our sincere feeling we publish this sacred history as a memorial of his reverred name May Prince Subrahmanyaraj Urs find peace in Heaven!

Bangalore, 28th August 1890. M. RUDRAPPA & SON, *Proprietors Sri Chamundeswari Press.*

M. R. & S.

ವಿ ಷ ಯ ಸೂ ಚಿ ಕೆ .

ಶ್ರೀಕೃಷ್ಣರಾಜವಾಣೀವಿಲಾಸವೆಂಬ

ಯಯಾತಿರಾಯನ ಚರಿತ್ರೆ.

೧ನೇ ಅಧ್ಯಾಯ.

ಮೊದಲು ಸುರಾಸುರರಿಗೆ ತ್ರಿಲೋಕಾಧಿಪತ್ಯದ ನಿಮಿತ್ಯದಿಂದ ಅನ್ಯೋನ್ಯ ವೈರಗಳು ಹುಟ್ಟಲು ಸುರರು ಯುದ್ಧ ಮಾಡುವದಕ್ಕೆ ಜೊತೆಗೂಡಿ ಬೃಹಸ್ಪತಿಯನ್ನು ಪುರೋಹಿತ ಕೃತ್ಯಕ್ಕೆ ವರಿಸಿದರು; ಅಸುರರು ಶುಕ್ರನನ್ನು ತಮ್ಮ ಪುರೋಹಿತ ಕೃತ್ಯಕ್ಕೆ ವರಿಸಿದರು. ಆ ಬಳಿಕ ಬೃಹಸ್ಪತಿ ಶುಕ್ರರಿಗೆ ಅನ್ಯೋನ್ಯ ವೈರಹುಟ್ಟಿ ಹೆಚ್ಚುತ್ತಿತ್ತು. ದೇವತೆಗಳಿಂದ ಯುದ್ಧದಲ್ಲಿ ಬಿದ್ದಂಥಾ ಅಸುರರನ್ನು ಶುಕ್ರನು ಮೃತಸಂಜೀವಿನೀ ಎಂಬ ವಿದ್ಯಾವಿಶೇಷದಿಂದ ಜೀವಿಸುವಹಾಗೆ ಮಾಡುತ್ತಿರಲು ಅಸುರರು ದೇವತೆಗಳ ಮೇಲೆ ತಿರಿಗಿಬಿದ್ದು ಜಗಳವನ್ನು ಮಾಡುವದಕ್ಕೆ ಆರಂಭಿಸಿದರು. ಆ ವಿದ್ಯ ತನಗೆ ಬಾರದ್ದರಿಂದ ಬೃಹಸ್ಪತಿಯು ದೇವತೆಗಳನ್ನು ತಿರಿಗಿ ಬದುಕಿಸುವದಕ್ಕೆ ಸಮರ್ಥನಲ್ಲದೆ ಸುಮ್ಮನಿರಲು ದೇವತೆಗಳು ಕ್ಲೇಶಪಟ್ಟು ಶುಕ್ರನ ಮಹಿಮೆಗೆ ಭಯಪಟ್ಟು ಬೃಹಸ್ಪತಿಗೆ ಜ್ಯೇಷ್ಠಪುತ್ರನಾದ ಕಚನನ್ನು ಕಂಡು "ಎಲೈ ಗುರುಕುಮಾರನೆ, ನೀನು ನಮ್ಮನ್ನು ರಕ್ಷಿಸುವದಕ್ಕೆ ಇಚ್ಛೈಸಿದವನಾದರೆ ಶುಕ್ರನಲ್ಲಿರುವ ಮೃತಸಂಜೀವಿನೀ ಎಂಬ ವಿದ್ಯಾವಿಶೇಷವನ್ನು ಯಾವಪ್ರಕಾರದಿಂದಲಾದರೂ ಆತನ ದೆಸೆಯಿಂದ ಗ್ರಹಿಸಿ ನಮ್ಮನ್ನು ಬದುಕಿಸಬೇಕು; ಈಗ ಶುಕ್ರನು ವೃಷಪರ್ವನ ಸಮೀಪದಲ್ಲಿದ್ದುಕೊಂಡು ದಾನವರನ್ನು ಸಂರಕ್ಷಣೆ ಮಾಡಿಕೊಂಡಿದ್ದಾನೆ; ಆತನಿಗೆ ಸೇವೆಯನ್ನು ಮಾಡುವ ಉಪಾಯವು ನಿನಗೆ ತಿಳಿದಿರುವದು ಸರಿಯಷ್ಟೆ; ಆದರೂ ಆ ಉಪಾಯವನ್ನು ಹೇಳುತಲಿದ್ದೇವೆ: ಆತನಿಗೆ ದೇವಯಾನೆಯೆಂಬ ಒಂದು ಕನ್ಯಕೆಯುಂಟು; ಅವಳನ್ನು ಅನೇಕ ಉಪಾಯಗಳಿಂದ ಸಂತೋಷಪಡಿಸಿದರೆ ಅವಳ ದೆಸೆಯಿಂದ ನಿನಗೆ ಅವಶ್ಯಕವಾಗಿ ಆ ವಿದ್ಯವು ಲಭಿಸುತಲಿದೆ" ಅಂದರು.

ಕಚನು "ಹಾಗೇ ಆಗಲಿ" ಎಂದು ಹೊರಟು ಸುಮುಹೂರ್ತದಲ್ಲಿ ವೃಷಪರ್ವನ ಪಟ್ಟಣವನ್ನು ಹೊಕ್ಕು ಶುಕ್ರನನ್ನು ಕಂಡು ನಮಸ್ಕರಿಸಿ "ಎಲೈ ಮಹಾತ್ಮನೇ, ನಾನು ಬೃಹಸ್ಪತಿಯ ಮಗನಾದ ಕಚನೆಂಬವನು; ನಿಮಗೆ ಸಾವರ ವರ್ಷಂಗಳು ಬ್ರಹ್ಮಚರ್ಯ ವ್ರತದಿಂದ ಸೇವೆಯನ್ನುಮಾಡಬೇಕೆಂದು ಬಯಸಿದ್ದೇನೆ; ನನ್ನನ್ನು ಶಿಷ್ಯನಾಗಿ ಪರಿಗ್ರಹಿಸಿ ದಯಮಾಡಬೇಕು" ಅಂದನು.

ಶುಕ್ರನು "ಎಲೈ ಮುನಿಕುಮಾರನೆ, ನೀನು ಹೇಳಿದ ರೀತಿಯಲ್ಲಿ ನಿನ್ನನ್ನು ಪರಿಗ್ರಹಿಸಿ ನಿನ್ನ ಮನೋರಥವನ್ನು ಸಫಲಮಾಡಿದರೆ ಅದು ಬೃಹಸ್ಪತಿಯನ್ನು ಪೂಜಿಸಿದ್ದಲ್ಲವೆ!" ಎಂದು ಅಂಗೀಕರಿಸಿದನು.

ಕಚನು "ಧನ್ಯನಾದೆ" ಎಂದು ಗುರು ಶುಶ್ರೂಷವ್ರತವನ್ನು ಹಿಡಿದು ಆತನ ಸೇವೆಯನ್ನುಮಾಡುತ್ತ, ದೇವಯಾನೆಯ ಮನಸ್ಸಿಗೆ ಸಂತೋಷವಾಗುವರೀತಿಗೆ ನಾನಾಪ್ರಕಾರೋಪಾಯಗಳಿಂದ ಉಪಚರಿಸುತ್ತ, ಶುಕ್ರನ ಗೋಸಹಸ್ರವನ್ನು ಪ್ರತಿದಿನವು ಸಂರಕ್ಷಿಸುತ್ತ, ರೂಪ ಯವ್ವನ ಸಂಪನ್ನೆಯಾದ ದೇವಯಾನೆಗೆ ಪತ್ರಪುಷ್ಪಫಲಂಗಳು ತಂದುಕೊಡುತ್ತ, ಅವಳೇನುಕಾರ್ಯ ಹೇಳಿದರೂ ಆ ಕಾರ್ಯವನ್ನು ತಡವುಮಾಡದೆ ನಿರ್ವಹಿಸುತ್ತ, ಗೀತ ನೃತ್ಯಗಳಿಂದ ಅವಳಿಗೆ ಬಂದೊಂದು ವೇಳೆಯಲ್ಲಿ ಮನಸ್ಸಿಗೆ ಸಂತೋಷವನ್ನು ಕಲ್ಪಿಸುತ್ತ ಉಪಚರಿಸುತ್ತಿದ್ದನು. ದೇವಯಾನೆಯು ಬ್ರಹ್ಮಚರ್ಯವ್ರತನಿಷ್ಠನಾದ ಆ ಕಚನೊಡನೆ ಆಡುತ್ತ ಪಾಡುತ್ತ ಮರುಕದಿಂದ ಆತನೊಡನೆ ಸ್ನೇಹವನ್ನುಬಿಡದೆ ಪ್ರೀತಿ ಮಾಡುತ್ತಲಿದ್ದಳು. ಲೋಕದಲ್ಲಿ ಪ್ರಾಯದ ಸ್ತ್ರೀಯರು ಸಂಗೀತವನ್ನು ಹಾಡುವಂಥಾವನನ್ನೂ ಕಪಟವಿಲ್ಲದವನನ್ನೂ ಕೊಡಗೈಯುಳ್ಳಂಥಾವನನ್ನೂ ಪ್ರಿಯವಾಗಿ ಮಾತಾಡುವಂಥಾವನನ್ನೂ ರೂಪವಂತನನ್ನೂ ಒಡವೆಗಳನ್ನು ಧರಿಸಿರುವಂಥಾವನನ್ನೂ ಪುಷ್ಪಮಾಲ್ಯ ಪರಿಮಳಗಳನ್ನು ಧರಿಸಿರುವಂಥಾವನನ್ನೂ ನೋಡಿ ಮೋಹಪಡುವರೆಂಬುವದು ಸಿದ್ಧವಲ್ಲವೆ!

ಈಪ್ರಕಾರದಿಂದ ಕಚನು ದೇವಯಾನೆಗೆ ಹೃದಯರಂಜನವನ್ನು ಮಾಡುತ್ತ ಗುರು ಶುಶ್ರೂಷೆಯನ್ನುಮಾಡುತ್ತಿರಲು ಐನೂರು ವರ್ಷಂಗಳು ಅತಿಕ್ರಮಿಸಿದವು. ಆ ಬಳಿಕ ದಾನವರು ಕಚನ ವಂಚನೋಪಾಯವನ್ನು ತಿಳಿದು ಬೃಹಸ್ಪತಿಯಮೇಲೆ ದ್ವೇಷದಿಂದಲೂ ತಮ್ಮ ವಿದ್ಯಾಸಂರಕ್ಷಣಾದಿಂ

ದಲೂ ಅವನು ಗೋವುಗಳನ್ನು ಕಾಯುತ್ತಿದ್ದಾಗ ತುಂಡು ತುಂಡಾಗಿ ಕಡದು ತೋಳಗಳಿಗೆ ಹಾಕಿದರು. ಆ ಗೋಸಹಸ್ರವು ತಮಗೆ ರಕ್ಷಕನಿಲ್ಲದಿದ್ದರೂ ಅಭ್ಯಾಸದಿಂದ ತಮಗೆ ತಾವೆ ಶುಕ್ರನಮನೆಗೆ ಬಂಗವು. ಕಚನು ಬರದೆ ಗೋವುಗಳು ಮಾತ್ರ ಬಂಗದ್ದನ್ನು ಕಂಡು ದೇವಯಾನೆಯು ತನ್ನ ತಂದೆಯಾದ ಶುಕ್ರನನ್ನು ನೋಡಿ "ಸೂರ್ಯಾಸ್ತಮಸಮಯುವಾಯಿತು; ನಿಮ್ಮ ಅಗ್ನಿಹೋತ್ರವು ಹುತವಾಗಲಿಲ್ಲ; ಹಸುಗಳಾದರೆ ತಮಗೆ ತಾವೇ ಬಂದವು; ಕಚನು ಕಾಣಲಿಲ್ಲ; ಇದರಿಂದ ಕಚನು ಪರಲೋಕಕ್ಕೆ ಹೋದನೊ ಏನೋ ತಿಳಿಯಲಿಲ್ಲ; ಕಚನನ್ನು ಕಾಣದೆ ಪ್ರಾಣದೊಡನೆ ನಿಮಿಷವಾದರೂ ನಿಲ್ಲಲಾರೆನು" ಅಂದಳು.

ಶುಕ್ರನು "ಎಲೇ ಮಗಳೇ, ಕಚನನ್ನು ಕರತಂದು ಕೊಟ್ಟೇನು; ನೀನು ಮನಸ್ಸಿನಲ್ಲಿ ಕ್ಲೇಶಪಡಬೇಡಾ" ಎಂದು ಸಂತವಿಟ್ಟು ತನ್ನ ಸಂಜೀವಿನೀ ವಿದ್ಯವನ್ನು ಜಪಿಸಿ "ಬಾರೋ ಕಚನೇ" ಎಂದು ಕರೆಯಲು ಕಚನು ತೋಳಗಳ ಹೃದಯುಗಳನ್ನು ಭೇದಿಸಿಕೊಂಡು ಸಂಜೀವಿನೀ ವಿದ್ಯಾಮಹಿಮೆಯಿಂದ ಯಥಾಪ್ರಕಾರವಾದ ಶರೀರದೊಡನೆ ಬಂದನು. ದೇವಯಾನೆಯು ಆತನನ್ನು ಕಂಡು "ಬರುವದಕ್ಕೆ ಇಷ್ಟು ತಡವ್ಯಾತಕೆ?" ಎಂದು ಕೇಳಿದಳು.

ಕಚನು "ಸಮಿತ್ತುಗಳನ್ನೂ ಪುಷ್ಪಗಳನ್ನೂ ದರ್ಭೆಗಳನ್ನೂ ಸಾದೇಹೊರೆಗಳನ್ನೂ ತೆಗದುಕೊಂಡು ಬರುತ್ತ ಶ್ರಮದಿಂದ ಬಂದಾಲದ ಮರದ ಕೆಳಗೆ ನಿಂತೆನು; ಗೋವುಗಳು ನನ್ನ ಬೆನ್ನು ಹಿಡದು ಬಂದು ಆ ವೃಕ್ಷದ ನೆಳಲಲ್ಲಿ ನಿಂತವು; ಅಲ್ಲಿ ಕೆಲವು ಅಸುರರು ನನ್ನ ಸಮೀಪಕ್ಕೆ ಬಂದು 'ನೀನು ಯಾರು?' ಎಂದು ಕೇಳಿದರು. 'ಬೃಹಸ್ಪತಿಯ ಮಗನಾದ ಕಚನು ನಾನು' ಎಂದು ಇರುವ ಅರ್ಥವನ್ನು ಹೇಳಿದೆನು; ಅವರು ನನ್ನನ್ನು ಕಂಡಕಂಡವಾಗಿ ಕಡದು ಅದಷ್ಟನ್ನು ಬಂದು ದಂಡೆಯು ಮಾಡಿ ತೋಳಗಳಿಗೆ ಹಾಕಿ ಸುಖವಾಗಿ ಹೋದರು; ಆ ಬಳಿಕ ಈ ಮಹಾನುಭಾವನು ತನ್ನ ವಿದ್ಯಾಮಹತ್ವದಿಂದ ನನ್ನ ಕರೆಯಲು ನಾನೊಂದುವಿಧದಿಂದ ಜೀವಿಸಿ ನಿಮ್ಮ ಸಮೀಪಕ್ಕೆ ಬಂದೆನು" ಎಂದು ತಿಳುಹಿಸಿ ಯಥಾಪ್ರಕಾರವಾಗಿ ತನ್ನ ವ್ಯಾಪಾರದಲ್ಲಿ ತಿರುಗುತ್ತಿದ್ದನು.

ಮತ್ತೊಂದು ದಿವಸದಲ್ಲಿ ಕಚನನ್ನು ದೇವಯಾನಿಯು ಪುಷ್ಪಗಳ ನ್ನು ತರಬೇಕೆಂದು ಕಳುಹಿಸಲು ಆತನು ವನಕ್ಕೆ ಹೋಗಿ ಪುಷ್ಪಗಳನ್ನೆ ತ್ತುವ ಸಮಯದಲ್ಲಿ ದಾನವರು ಬಂದು ಆತನನ್ನು ಕೊಂದು ಅರದು ಸಮು ದ್ರದಲ್ಲಿ ಕಲಸಿಬಿಟ್ಟರು. ದೇವಯಾನಿಯು ಕಚನು ಬರದಿದ್ದದ್ದನ್ನು ಕಂಡು ಕ್ಲೇಶಪಟ್ಟು ತಂದೆಗೆ ಹೇಳಲು ಆತನು "ಕಚನನ್ನು ಕರದುಕೊಂಡು ಬಾ" ಎಂದು ಸಂಜೀವಿನೀ ವಿದ್ಯವನ್ನು ಪ್ರಯೋಗಿಸಿದನು; ಕಚನು ಆ ವಿದ್ಯಾನುಹತ್ವದಿಂದ ಜೀವಿಸಿ ಶೀಘ್ರದಲ್ಲಿ ಬಂದು ತನಗೆ ದಾನವರು ಮಾಡಿದ ಅಪಕಾರವನ್ನು ಶುಕ್ರನಿಗೆ ತಿಳುಹಿಸಿ ಯಥಾಪ್ರಕಾರವಾಗಿ ಗೋವುಗಳನ್ನು ಕಾಯುತ್ತಿದ್ದನು.

ಮತ್ತೊಂದುದಿವಸದಲ್ಲಿ ಶುಕ್ರನಮಗಳು ಆತನ ತಪೋವನದಲ್ಲಿರುವ ಪುಷ್ಪಫಲಂಗಳನ್ನು ತರಬೇಕೆಂದು ಕಳುಹಿಸಲು ಕಚನು ವನಕ್ಕೆ ಹೋಗಿ ತಿರಿಗಿ ಬರುವ ಸಮಯದಲ್ಲಿ ದಾನವರು ಕಂಡು ಹಿಡದು ಕೊಂದು ಭಸ್ಮವ ನ್ನು ಮಾಡಿ ಶುಕ್ರನು ಮಾಡುವಂಥಾ ಮದ್ಯಪಾನದೊಡನೇ ಕೂಡಿಸಿ ಕೊಡಲು ಶುಕ್ರನು ಅದನ್ನು ಪಾನಮಾಡಿದನು. ಆ ಬಳಕ ಸಾಯಂಕಾ ಲ ಸಮಯವಾಗಲೂ ಹಸುಗಳು ಬಂದು ಕಚನು ಬರದಿರಲು ದೇವಯಾ ನಿಯು ತನ್ನ ಮನಸ್ಸಿನಲ್ಲಿ ಸಂಶಯಪಟ್ಟು ಕಚನು ಬರಲಿಲ್ಲವೆಂದು ತಂದೆ ಗೆ ಅರಿಕೇ ಮಾಡಿದಳು. ಶುಕ್ರನು ಕಚನು ಬರುವದಕ್ಕೆ ತನ್ನ ಸಂಜೀ ವಿನೀ ವಿದ್ಯವನ್ನು ಜಪಿಸುತ್ತ ಲೋಕತ್ರಯದಲ್ಲಿಯೂ ಕಾಣದೆ ತನ್ನ ಹೊಟ್ಟೆಯಲ್ಲಿರುವದನ್ನು ತಿಳಿಯದೆ ಮಗಳನ್ನು ಕಂಡು "ನನ್ನ ವಿದ್ಯಾವಿ ಶೇಷದಿಂದ ಕಚನು ಬರಲಿಲ್ಲ; ಅವನೇನಾದನೊ ತಿಳಿಯದು; ಸಂಜೀವಿನೀ ವಿದ್ಯೆಯಿಂದ ಪುನಹ ಬದುಕಿದವನಾದರೂ ತಿರಿಗೂ ಹೀಗಾಗುತಲಿದ್ಧಾನೆ; ನಾನು ಮಾಡತಕ್ಕಂಥಾದ್ದೇನದೆ! ನಿನ್ನ ಮನಸ್ಸಿನಲ್ಲಿ ಕ್ಲೇಶಪಡಬೇಡ; ಮರಣವಿಲ್ಲದಿರುವಂಥಾವನು ಒಬ್ಬನೂ ಇಲ್ಲ; ಆ ಕಚನಿಗಾಗಿ ಚಿಂತಿಸ ಬೇಡ" ಎಂದು ಹೇಳಿದನು.

ದೇವಯಾನಿಯು "ತಪೋಬಲಶಾಲಿಯಾಗಿ ಸಕಲ ಕಾರ್ಯನಿರ್ವಾ ಣ ಚತುರನಾಗಿರುವ ಕಚನು ಬರದಿರುವದ್ದರಿಂದ ನಾನು ಕ್ಲೇಶಪಡುತ ಲಿದ್ಧೇನೆ; ರೂಪ ಯವ್ವನ ಸಂಪನ್ನನಾಗಿರುವ ಆ ಕಚನು ಬರದಿದ್ದರೆ

ನನ್ನ ಪ್ರಾಣಗಳನ್ನು ತೊರದು ಆತನ ಸಂಗಡಲೇ ಹೋಗತಕ್ಕಂಥಾವಳು ”
ಅಂದಳು.

ಶುಕ್ರನು “ ನನನೆ ಪ್ರಿಯಶಿಷ್ಯನಾಗಿ ನಿರಾಪರಾಧಿಯಾದ ಬೃಹ
ಸ್ಪತಿಯ ಕುಮಾರನನ್ನು ನಿಷ್ಕಾರಣವಾಗಿ ಅಸುರರು ಕೊಂದದ್ದು ನನಗೆ
ದ್ರೋಹವನ್ನು ಮಾಡಿದ್ದಲ್ಲವೇ ! ಈ ಅಸುರರ ಅಕೃತ್ಯಗಳನ್ನು ಸಹಿಸಿದರೆ
ಲೋಕದಲ್ಲಿರುವ ಬ್ರಾಹ್ಮರ ಕುಲಕ್ಕೆ ಹಿಂಸೆ ಮಾಡ್ಯಾರು ಎಂದು ತೋರು
ತ್ತಲಿದೆ ; ಕಟಕಟಾ ! ಈ ಮಹಾಪಾತಕವು ತ್ರಿಲೋಕಾಧಿಪತಿಯಾದ ಇಂ
ದ್ರನನ್ನಾದರೂ ದಹಿಸದೆ ಯಾಕೆ ಹೋದೀತು ! ” ಎಂದು ಮನಸ್ಸಿನಲ್ಲಿ
ಕೆಲವುಕಾಲ ಚಿಂತಿಸಿ ದೇವಯಾನೆಯ ಪ್ರೇರಣೆಯಿಂದ ಪ್ರಯತ್ನಪೂರ್ವ
ಕವಾಗಿ ಸಂಜೀವಿನೀ ವಿದ್ಯವನ್ನು ಪ್ರಯೋಗಿಸಿದನು.

ಆ ವಿದ್ಯದ ಮಹಿಮೆಯಿಂದ ಪುನಹಾ ಜೀವಿಸಿ ಆತನ ಹೊಟ್ಟೆಯಲ್ಲಿ
ದ್ದ ಕಚನು ಆಚಾರ್ಯನಿಗೆ ನಮಸ್ಕರಿಸಿ ತನ್ನ ಸ್ಥಿತಿಯ ತಿಳುಹಿಸಿ “ ಎಲೈ
ದೇವತೋತ್ತಮನೆ, ನನ್ನನ್ನು ನಿನ್ನ ಕುಮಾರನಾಗಿ ಭಾವಿಸು ” ಅಂದನು.

ಭಾರ್ಗವನು “ ನನ್ನ ಹೊಟ್ಟೆಯಲ್ಲಿ ನೀನು ಯಾವಪ್ರಕಾರದಿಂದ
ಪ್ರವೇಶವನ್ನು ಮಾಡಿದೆ ? ನನಗೆ ಅಭಿಮತವಲ್ಲವೆಂದು ತಿಳಿದೂ ಬಾರಿ
ಬಾರಿಗೂ ನಿನಗಿಂಥಾ ದ್ರೋಹವನ್ನು ಮಾಡುವ ದುರಾತ್ಮಕರನ್ನು ಬಿ
ಟ್ಟು ನಾನು ದೇವತೆಗಳೊಡನೆ ಕೂಡುತಲಿದ್ದೇನೆ ” ಅಂದನು.

ಆ ಕುಮಾರಕನು “ ಎಲೈ ಸ್ವಾಮಿಯೇ, ಈಗ ಅಸುರರು ಮಾ
ಡುವ ಅಪಕಾರಗಳಷ್ಟು ನನ್ನ ಮನಸ್ಸಿನಲ್ಲಿ ತೋರುತ್ತಲಿವೆ ; ಹೇಳಿದರೆ
ದೋಷ ಬಂದೀತು—ತಪಸ್ಸು ಕೆಟ್ಟೀತು ಎಂದು ಭಯಪಟ್ಟು ಅವರು ಎ
ಷ್ಟು ಕ್ಲೇಶಪಡಿಸಿದರೂ ಸಹಿಸಿದ್ದೇನೆ ; ಬ್ರಹ್ಮತೇಜೋಧನಶಾಲಿಯಾದ ನಿ
ನ್ನ ಮಹತ್ವದಮುಂದೆ ಅಸುರರ ಸಾಮರ್ಥ್ಯ ನಿಲ್ಲುವದೇ ! ಈಗ ನಿಮ್ಮ ಅನು
ಗ್ರಹ ವಿಶೇಷದಿಂದ ಪುನಹ ಬದುಕಿದೆನು ” ಅಂದನು.

ಆ ಬಳಿಕ ಅಸುರ ಗುರುವಾದ ಶುಕ್ರನು ದೇವಯಾನೆಯನ್ನು ಕಂಡು
“ಕಚನು ನನ್ನ ಹೊಟ್ಟೆಯಲ್ಲಿದ್ದಾನೆ ; ನನ್ನ ವಧೆಯ ಹೊರತಾಗಿ ಈತನು
ಹೊಟ್ಟೆ ದೆಸೆಯಿಂದ ಹೊರಡಲಾರನು ; ನಿನಗೆ ಪ್ರಿಯವಾದ ಅರ್ಥವನ್ನು
ತಿಳುಹಿಸು ” ಎಂದು ಕೇಳಿದನು.

ದೇವಯಾನೆಯು "ಈ ರೀತಿಯಲ್ಲಿ ಕೇಳದರೆ ನಾನೇನನ್ನಲಿ; ಕಚನು ಬದುಕಿ ಬರದಿದ್ದರೂ ನಿಮಗೆ ಬಾಧಕವಾದರೂ ನನ್ನ ಮನಸ್ಸಿಗೆ ಕ್ಲೇಶವು ಸರಿಯುಷ್ಟೆ; ಆದರೂ ಕಚನು ಬದುಕಿ ಬರದಿದ್ದರೆ ನನಗೆ ಸೌಖ್ಯವಾಗಲಾರದು; ನಿಮಗೊಂದು ಅಪಾಯವಾದರೆ ನನಗೆ ಪ್ರಾಣಗಳು ನಿಲ್ಲುವದೇ ದುರ್ಲಭ; ಹೀಗೆ ಉಭಯಸಂಕಟಬಂದದ್ದರಿಂದ ನಿಮಗೆ ತೋರಿದ ರೀತಿಗೆ ದಯಮಾಡಬೇಕು" ಅಂದಳು.

ಶುಕ್ರನು ತನ್ನ ಹೊಟ್ಟೆಯಲ್ಲಿದ್ದ ಕಚನನ್ನು ಕುರಿತು "ಎಲೈ ಕುಮಾರನೇ, ದೇವಯಾನೆಯು ನಿನ್ನಲ್ಲಿ ಬಹುಸ್ನೇಹವಾಗಿರುವದ್ದರಿಂದ ನಿನ್ನ ಮನೋರಥವು ಸಫಲವಾದೀತು; ನೀನು ನಿಜವಾಗಿ ಬೃಹಸ್ಪತಿಯ ಕುಮಾರನಾದರೆ ಈ ವಿದ್ಯವನ್ನು ನಿನಗೆ ಹೇಳುತಲಿದ್ಧೇನೆ; ವಂಚನಾರೂಪದಿಂದ ಬಂದ ಇಂದ್ರನಾದರೆ ಅದಕ್ಕೆ ತಕ್ಕ ಫಲವನ್ನೈಗುತಿದ್ಧೀ; ಬ್ರಾಹ್ಮಣನು ಹೊರತಾಗಿ ಕಪಟದಿಂದ ನನ್ನ ಉದರವನ್ನು ಹೊಕ್ಕಂಥಾವನು ಭಸ್ಮವಾಗುವದೇ ಹೊರತಾಗಿ ಪುನಹ ಬರಲರಿಯನಾದ್ದರಿಂದ ನಿನಗೆ ಸಂಜೀವಿನೀ ವಿದ್ಯವನ್ನು ಉಪದೇಶಿಸುತಲಿದ್ಧೇನೆ; ನೀನು ನನ್ನ ಹೊಟ್ಟೆಯನ್ನು ಭೇದಿಸಿಕೊಂಡು ಹೊರಟು ನಾನು ಮಾಡಿದ ಉಪಕಾರವನ್ನು ನಿನ್ನ ಮನಸ್ಸಿನಲ್ಲಿರಿಸಿ ಪುತ್ರನಾದ್ದರಿಂದ ಧರ್ಮವನ್ನು ವಿಚಾರಿಸಿ ನನ್ನನ್ನು ತಿರಿಗಿ ಬದುಕಿಸು" ಎಂದು ಆ ಸಂಜೀವಿನೀ ವಿದ್ಯವನ್ನು ಉಪದೇಶಮಾಡಿದನು.

ಆ ಬಳಿಕ ಬೃಹಸ್ಪತಿ ಕುಮಾರನಾದ ಕಚನು ತನ್ನ ಗುರುವಾದ ಶುಕ್ರನ ಉಪದೇಶದ ಮಹಿಮೆಯಿಂದ ಆ ವಿದ್ಯಾವಿಶೇಷವನ್ನು ಪಡದು ಆತನ ಹೊಟ್ಟೆಯನ್ನು ಭೇದಿಸಿಕೊಂಡು ಹುಣ್ಣಿಮೆಯಲ್ಲಿ ಹುಟ್ಟಿದ ಚಂದ್ರನೋಪಾದಿಯಲ್ಲಿ ಬೈಲಿಗೆ ಹೊರಟು ವೇದರಾಸಿಯಾಗಿ ನಷ್ಟಪ್ರಾಣನಾಗಿ ಬಿದ್ದಿದ್ದ ಶುಕ್ರಾಚಾರ್ಯನಂ ಕಂಡು ತನಗೆ ಶಿದ್ಧವಾದ ಸಂಜೀವಿನೀ ವಿದ್ಯಾಮಹಿಮೆಯಿಂದ ಆತನನ್ನು ಬದುಕಿಸಿ ನಮಸ್ಕರಿಸಿ "ಎಲೈ ಮಹಾನುಭಾವನೇ, ಕಿವಿಗಳಿಗೆ ಅಮೃತದಚಂದದಿಂದ ತೋರುವಹಾಗೆ ವಿದ್ಯಾವಿಹೀನನಿಗೆ ವಿದ್ಯೋಪದೇಶವನ್ನು ಮಾಡುವಂಥಾ ಪುರುಷನನ್ನು ಧರ್ಮಮಾರ್ಗದಿಂದ ತಂದೆತಾಯಿಗಳೆಂದು ಮಹಾತ್ಮರು ಹೇಳುವರು; ನನ್ನನ್ನು ಹೊಟ್ಟೆಯಲ್ಲಿ ಧರಿಸಿ ವಿಧ್ಯೋಪದೇಶವನ್ನು ಮಾಡಿ ರಕ್ಷಿಸಿದ್ದರಿಂದ ನಿನ್ನನ್ನು ತಂದೆತಾಯಿಗಳಾಗಿ ಭಾವಿಸುತಲಿದ್ಧೇನೆ; ಹೀಗೆ ನಿನ್ನಂಥಾ ಮಹಾ

ನುಭಾವರಿಗೆ ಕೃತಜ್ಞನಾದವನು ಯಾಕೆ ದ್ರೋಹವನ್ನು ಮಾಡುವನು! ಬ್ರಹ್ಮವಿದ್ಯವನ್ನು ಹೇಳಿ ನಾಲ್ಕು ವಿಧವಾದ ಭೂತಂಗಳಿಗೆ ಆಶ್ರಯುವಾಗಿ ಸಕಲ ಲೋಕಪೂಜ್ಯನಾಗಿರುವ ನಿನ್ನಂಥಾ ಗುರುಗಳಿಗೆ ಪೂಜೆಮಾಡದಿರುವಂಥಾವರು ಶಾಶ್ವತವಾದ ನರಕಗಳಲ್ಲಿ ಬೀಳುವರು'' ಎಂದು ಬಿನ್ನವಿಸಿದನು.

ಆ ಬಳಿಕ ಪರಮತಪೋಧನನಾದ ಭಾರ್ಗವನು ವಂಚನೋಪಾಯದಿಂದ ತನಗೆ ಸುರಾಪಾನವನ್ನು ಕಲ್ಪಿಸಿ ಪ್ರಜ್ಞಾವಿಶೇಷವನ್ನು ಕೆಡಿಸಿದ್ದಕ್ಕೆ ಕ್ಲೇಶಪಟ್ಟು ಎದ್ದು ಕುಳಿತುಕೊಂಡು ಮನಸ್ಸಿನಲ್ಲಿ ಕ್ಲೇಶದಿಂದ ಕೋಪಿಸಿಕೊಂಡು ಬ್ರಾಹ್ಮಣ ಕುಲಕ್ಕೆ ಹಿತವನ್ನಾಚರಿಸುವದಕ್ಕೋಸಿ ಸಕಲ ಭೂತಂಗಳೂ ಕೇಳುವಹಾಗೆ "ಲೋಕದಲ್ಲಿ ಈ ಹೊತ್ತು ಮೊದಲು ಬ್ರಾಹ್ಮಣನಾದವನು ಸುರಾಪಾನವನ್ನು ಮಾಡಿದರೆ ಆತನು ತನ್ನ ಬ್ರಾಹ್ಮಣಕರ್ಮದಲ್ಲಿ ಬಹಿಷ್ಕೃತನಾಗಿ ಬ್ರಹ್ಮಹತ್ಯ ಮಾಡಿದವನೋಪಾದಿಯಲ್ಲಿ ಇಹಪರಗಳಲ್ಲಿ ನಿಂದಿತನಾಗಿರತಕ್ಕಂಥಾವನು! ನಾನು ಮಾಡಿದಂಥಾ ಪ್ರತಿಜ್ಞೆಯನ್ನು ಸತ್ಪುರುಷರೂ ದೇವತೆಗಳೂ ಗುರುಜನಗಳೂ ಅಂಗೀಕರಿಸಲಿ!" ಎಂದು ನುಡಿದು ದಾನವರನ್ನು ಕರದು "ಎಲೈ ಮೂಢಮತಿಗಳಿರಾ, ಬೃಹಸ್ಪತಿಯ ಮಗನಾದ ಈ ಕಚನೆಡೆಯಲ್ಲಿ ಎಷ್ಟು ದ್ರೋಹವನ್ನು ಮಾಡಿದಿರಿ! ಅದರಿಂದ ಕಚನು ಮೃತಸಂಜೀವಿನೀ ವಿದ್ಯವನ್ನು ಕೈಕೊಂಡು ಬ್ರಹ್ಮದೇವನಿಗೆ ಸಮಾನನಾಗಿ ಅಮರಾವತಿಗೆ ಹೋಗುತಲಿದ್ದಾನೆ!" ಅಂದನು. ಮತ್ತು ಆ ಕಚನನ್ನು ನೋಡಿ "ನೀನು ದೇವಕಾರ್ಯವನ್ನು ನಿರ್ವಹಿಸುವದಕ್ಕೋಸಿ ಇಷ್ಟು ಕ್ಲೇಶವನ್ನು ಸಹಿಸಿ ಈ ವಿದ್ಯವನ್ನು ಸಾಧಿಸಿದೆ; ನಿನ್ನ ಕೀರ್ತಿಯು ಶಾಶ್ವತವಾಗಿ ನಿಲ್ಲಲಿ! ಇನ್ನೂ ನೀನು ಗ್ರಹಸ್ಥಾಶ್ರಮದಿಂದ ಸಕಲ ಯಜ್ಞಗಳನ್ನೂ ಮಾಡತಕ್ಕಂಥಾವನು" ಎಂದು ಸ್ತುತಿಸಿದನು.

೨ ನೇ ಅಧ್ಯಾಯ.

ಈ ರೀತಿಯಲ್ಲಿ ವಿದ್ಯಾವ್ರತವನ್ನು ನೆರವೇರಿಸಿ ಮೃತಸಂಜೀವಿನೀ ವಿದ್ಯವನ್ನು ಕೈಕೊಂಡು ಗುರುವಿನ ಅಪ್ಪಣೆಯಿಂದ ಸ್ವರ್ಗಲೋಕಕ್ಕೆ ಹೋಗುವದಕ್ಕೋಸಿದ್ದ ಕಚನಂಕಂಡು ದೇವಯಾನೆ ಇಂತೆಂದಳು:

"ಕೇಳು ಗುರುಕುಮಾರನೇ, ಅಂಗೀರಸನಿಗೆ ಮೊಮ್ಮಗನಾಗಿ ಸದಾ
ಚಾರ ಸಂಪನ್ನನಾಗಿ ವಿದ್ಯೆಯಿಂದಲು ಇಂದ್ರಿಯನಿಗ್ರಹದಿಂದಲು ತಪಸ್ಸಿನವೃ
ದ್ಧಿಯಿಂದಲು ಮೃತಸಂಜೀವಿನೀ ವಿದ್ಯಾಲಾಭದಿಂದಲೂ ಪ್ರಕಾಶಿಸುತ್ತಲಿದ್ದೀ;
ನನ್ನ ತಂದೆಯಾದ ಶುಕ್ರಾಚಾರ್ಯನಿಗೆ ತಪೋಮಹತ್ವವುಳ್ಳಂಥಾ ಅಂಗೀರಸ
ಮುನೀಂದ್ರನು ಪೂಜ್ಯನಾದ ತೆರದಿಂದ ನನಗೆ ನಿನ್ನ ತಂದೆಯಾದ ಬೃಹಸ್ಪತಿ
ಯು ಅಧಿಕವಾಗಿ ಪೂಜ್ಯನಲ್ಲವೇ! ಈ ಅರ್ಥವನ್ನು ನೀನು ತಿಳಿದಿದ್ದರೂ ನಾ
ನು ಹೇಳುವಂಥಾ ಮಾತನ್ನಂಗೀಕರಿಸಬೇಕು; ಈ ವಿದ್ಯಾನಿಮಿತ್ತವಾಗಿ ಬ್ರ
ಹ್ಮಚರ್ಯವನ್ನೈದಿ ನೇಮಸ್ಥನಾಗಿದ್ದ ನಿನ್ನನ್ನು ಈವರಿವಿಗೆ ಏನೂ ಹೇಳದೇ
ಸಹಿಸಿಕೊಂಡಿದ್ದೆನು; ಈಗ ವ್ರತ ಸಮಾಪ್ತಿಯನ್ನು ಮಾಡಿ ಸಂಜೀವಿನೀ
ವಿದ್ಯವನ್ನು ಪಡೆದವನಾದ್ದರಿಂದ ನಿನ್ನಲ್ಲಿ ನೆರೆ ನಂಬಿರುವ ನನ್ನನ್ನು ಶಾ
ಸ್ತ್ರೋಕ್ತಪ್ರಕಾರದಿಂದ ಮದುವೆಯಾಗಿ ಮನ್ನಿಸಬೇಕು" ಅಂದಳು.

ಕಚನು "ಓ ದೇವಯಾನೆಯೇ, ನಿನ್ನ ತಂದೆಯಾದ ಶುಕ್ರಾಚಾ
ರ್ಯನೋಪಾದಿಯಲ್ಲಿ ನೀನೂ ನನಗೆ ಪೂಜ್ಯಳು; ಆಚಾರ್ಯನಾಗಿರುವ ಶು
ಕ್ರನಿಗೆ ಪ್ರಾಣದೋಪಾದಿಯಲ್ಲಿ ಪ್ರೀತಿವಿಷಯವಾದ ಮಗಳಾದ್ದರಿಂದ
ನನಗೆ ಗುರುಭಾವನೆಯಿಂದ ಪೂಜೆಮಾಡತಕ್ಕಂಥಾ ಅರ್ಥದಲ್ಲಿ ನೀನು ಹೀ
ಗನ್ನಬಹುದೆ!" ಅಂದನು.

ದೇವಯಾನೆಯು "ನನ್ನ ತಂದೆಯಾದ ಶುಕ್ರನಿಗೆ ಗುರುವಾದ ಅಂ
ಗೀರಸನಿಗೆ ಮೊಮ್ಮಗನಾದ್ದರಿಂದ ನನಗೆ ನೀನು ಪೂಜ್ಯನು; ಅದಲ್ಲದೆ ಅಸು
ರರು ನಿನ್ನನ್ನೆಷ್ಟುಪ್ರಕಾರವಾಗಿ ಹಿಂಸೆಮಾಡಿದರೂ ಯಾವ ಅಭಿಲಾಷೆ
ಯಿಂದ ತಿರಿಗಿ ಬದುಕಿಸಿಕೊಂಡೆನೋ ಆ ಅನುರಾಗವನ್ನೆಣಿಸಿ ನನ್ನನ್ನು
ಮದುವೇ ಮಾಡಿಕೊಳ್ಳುವದೇ ಯುಕ್ತವು; ನಿನ್ನಲ್ಲಿ ವಿಶ್ವಾಸವಿರುವಂಥಾ
ನನ್ನನ್ನು ಬಿಟ್ಟುಬಿಡುವದು ಯುಕ್ತವಲ್ಲ" ಅಂದಳು.

ಕಚನು "ಇಂಥಾ ಕಾರ್ಯದಲ್ಲಿ ನನ್ನನ್ನು ನಿಯೋಗಿಸುವದು ನಿನಗೆ
ವುಚಿತವಲ್ಲಾ; ನನಗೆ ಗುರುವಚನವನ್ನು ದಾಟುವದಕ್ಕೆ ಹ್ಯಾಗೆಶಕ್ಯವೋ
ಹಾಗೆ ನಿನ್ನ ವಾಕ್ಯವನ್ನು ಮೀರುವದಕ್ಕೆ ಕೂಡದು; ಆದರೂ ನೀನು ಹು
ಟ್ಟಿರುವಂಥಾ ಹೊಟ್ಟೆಯಲ್ಲಿ ನಾನೂ ಕೆಲವು ಕಾಲವಿದ್ದದ್ದರಿಂದ ಧರ್ಮಮಾ
ರ್ಗದಿಂದ ನೀನು ನನಗೆ ಒಡಹುಟ್ಟಿದವಳಾಗಬೇಕು; ಇದು ಯಥಾರ್ಥವು;

ನಾನು ಹೋಗಿಬರುತಲಿದ್ದೇನೆ ; ನನಗೆ ಮಾರ್ಗದಲ್ಲಿ ಶುಭವಾಗಲೆಂದು ಅಂತಃಕರಣದಲ್ಲೆಣಿಸು ; ಇನ್ನುಮೇಲೆ ಸಖೀಜನಗಳೂ ನೀನೂ ಸರಸ ಕಥಾಪ್ರಸಂಗಗಳನ್ನು ಮಾಡುವಲ್ಲಿ ನಾನು ಧರ್ಮಕ್ಕೆ ವಿರೋಧವಿಲ್ಲದಿದ್ದದ್ದನ್ನೆಣಿಸು ; ಆಚಾರ್ಯನಾದ ಶುಕ್ರನಿಗೆ ನಿತ್ಯವು ಭಕ್ತಿ ವಿಶ್ವಾಸಪೂರ್ವಕವಾಗಿ ಪೂಜೆಯನ್ನು ಮಾಡು ” ಅಂದನು.

ದೇವಯಾನಿಯು ಬಹಳವಾಗಿ ಕೋಪಿಸಿಕೊಂಡು “ನಾನು ಧರ್ಮಕಾಮಗಳನ್ನು ಬಯಸಿ ನಿನ್ನನ್ನು ಕುರಿತು ಈ ಪ್ರಕಾರದಿಂದ ಹೇಳಿಕೊಂಡರೂ ಒಡಂಬಡದೆ ತುಂಬಿದ ಯೌವನವುಳ್ಳಂಥಾ ನನ್ನನ್ನು ನಿರಾಕರಿಸಿದ ದೋಷದಿಂದ ನಿನಗೆ ಮೃತಸಂಜೀವಿನೀ ವಿದ್ಯೆಯು ಫಲಿಸದೆ ಹೋಗಲೀ ” ಎಂದು ಶಪಿಸಿದಳು.

ಕಚನು “ ಓ ದೇವಯಾನಿಯೇ, ಗುರುಪುತ್ರಿಯಾದ್ದರಿಂದ ಗುರುಗಳ ಅನುಜ್ಞೆಯಿಲ್ಲವೆಂದು ನಿನ್ನಮಾತನ್ನು ಅತಿಕ್ರಮಿಸಿದೆ ; ನೀನು ಅಕಾರ್ಯವನ್ನು ಹೇಳಿದ್ದಕ್ಕೆ ನಿನಗೆ ಧರ್ಮ ಮಾರ್ಗದಿಂದಇದು ಅಕಾರ್ಯವೆಂದು ತಿಳಿಹಿಸಿದ ನನ್ನಲ್ಲಿ ಅಪರಾಧವಿಲ್ಲದೆ ನೀನು ಸುಮ್ಮನೆಶಪಿಸಿದೀ ; ಆದ್ದರಿಂದ ಒಬ್ಬ ಋಷಿ ಕುಮಾರಕನಾದರೂ ನಿನ್ನನ್ನು ಮದುವೆಯಾಗದೆ ಹೋಗಲಿ ! ಈ ವಿದ್ಯವು ಫಲಿಸದೆ ಹೋಗಲಿಯೆಂದು ಶಪಿಸಿದೀ ; ನೀನು ಹೇಳಿದರೀತಿಗೆ ನನಗೆ ಫಲಿಸದಿದ್ದರೂ ನಾನುಪದೇಶವನ್ನುಮಾಡಿದವನಿಗೆ ಫಲಿಸಲಿ !’’ಎಂದು ಆ ಸ್ಥಳವನ್ನು ಬಿಟ್ಟು ಅತಿತ್ವರಿತದಿಂದಸ್ವರ್ಗಕ್ಕೆ ಹೋದನು.

ಅಲ್ಲಿ ಕಚನನ್ನು ಕಂಡು ಇಂದ್ರನು ಮೊದಲಾದ ದೇವತೆಗಳು ಬೃಹಸ್ಪತಿಯೋಪಾದಿಯಲ್ಲಿ ಪೂಜಿಸಿ ಆತನನ್ನು ಕುರಿತು “ ಎಲೈ ಗುರುಕುಮಾರಕನೇ, ನಮಗೆ ಹಿತವನ್ನು ಮಾಡುವದಕ್ಕೆಣಿಸಿ ಬಹು ಕ್ಲೇಶವನ್ನು ಸಹಿಸಿ ಈ ಕಾರ್ಯವನ್ನು ನಿರ್ವಹಿಸಿದೆ ; ಈ ಉಪಕಾರದಿಂದ ನಿನ್ನ ಕೀರ್ತಿಯು ಲೋಕಗಳಲ್ಲಿ ಶಾಶ್ವತವಾಗಿರಲಿ !” ಎಂದು ಬಹುಮಾನದಿಂದ ಸ್ತುತಿಸಿದರು.

೩ ನೇ ಅಧ್ಯಾಯ .

ಈ ರೀತಿಯಲ್ಲಿ ದೇವತೆಗಳು ಗುರುಪುತ್ರನಾದ ಕಚನನ್ನು ಬಹುಪ್ರಕಾರವಾಗಿ ಸ್ತುತಿಸಿ ಆತನ ದೆಸೆಯಿಂದ ಮೃತಸಂಜೀವಿನೀ ವಿದ್ಯೆಯನ್ನು

ಗ್ರಹಿಸಿ ಇಂದ್ರನ ಸಮೀಪಕ್ಕೆ ಹೋಗಿ "ಎಲೈ ದೇವೇಂದ್ರನೇ, ನಿನ್ನ ಪರಾಕ್ರಮವನ್ನು ತೋರಿಸುವದಕ್ಕೆ ಇದೀಗ ಸಮಯ; ಸಕಲರಾದ ಶತ್ರುಗಳನ್ನು ಸಂಹರಿಸುವದಕ್ಕೋಸ್ಕರ ಉದ್ಯೋಗಿಸು" ಎಂದೆಚ್ಚರಿಸಿದರು.

ಆತನು "ಹಾಗೇ ಆಗಲೀ" ಎಂದು ದೇವಸೇನೆಯೊಡನೆ ಕೂಡಿ ತನ್ನ ಪಟ್ಟಣದ್ದೆಶೆಯಿಂದ ಹೊರಟು ಕೆಲವು ಪಯಣಗಳು ಹೋಗಿ ಅಲ್ಲಿ ಒಂದು ಉದ್ಯಾನವನದಲ್ಲಿ ಜಲಕ್ರೀಡೆಯನ್ನು ಮಾಡುತ್ತಿದ್ದ ಅಸುರ ಕನ್ಯೆಯರನ್ನು ಕಂಡು ಅವರು ಧಡದಲ್ಲಿಟ್ಟಿದ್ದ ವಿಚಿತ್ರ ವಸ್ತ್ರಗಳನ್ನು ವಾಯುರೂಪದಿಂದ ಏಕವಾಗಿ ಕೂಡಿಸಿದನು. ಆ ಕನ್ಯೆಯರು ಉದಕದ್ದೆಶೆಯಿಂದ ಹೊರಟು ತಮ್ಮ ವಸ್ತ್ರಗಳು ಬೆರದಿದ್ದದ್ದರಿಂದ ಒಬ್ಬರದೊಬ್ಬರು ವ್ಯತ್ಯಸ್ತವಾಗಿ ತೆಗೆದುಕೊಂಡರು. ಅದರಲ್ಲಿ ದೇವಯಾನೆಯ ವಸ್ತ್ರವನ್ನು ಶರ್ಮಿಷ್ಠೆಯು ತನ್ನ ಶೀರೆಯೆಂದೆತ್ತಿಕೊಂಡು ಉಟ್ಟುಕೊಳ್ಳಲು ಅದರಿಂದ ಅವರಿಗೆ ಪರಸ್ಪರವಾಗಿ ಕಲಹ ಹುಟ್ಟಿತು.

ದೇವಯಾನೆಯು ಶರ್ಮಿಷ್ಠೆಯನ್ನು ಕರದು "ಆಚಾರ್ಯನ ಮಗಳಾದ ನನ್ನ ಶೀರೆಯನ್ನು ಅತಿಕ್ರಮದಿಂದ ದುಡಿಕಿ ಉಟ್ಟುಕೊಳ್ಳುವದುಚಿತವಲ್ಲ" ಅಂದಳು.

ಶರ್ಮಿಷ್ಠೆಯು "ಸಕಲ ದಾನವರಿಗೂ ಧೊರೆಯಾಗಿರುವ ನನ್ನ ತಂದೆಯಾದ ವೃಷಪರ್ವನು ಉನ್ನತಾಸನದಲ್ಲಿ ಕುಳಿತಿರುವಾಗ ಕೆಳಗಿದ್ದುಕೊಂಡು ನಿನ್ನ ತಂದೆಯಾದ ಶುಕ್ರಾಚಾರ್ಯನು ಭಂಟನಚಂದದಿಂದ ಹೊಗುಳುತ ಅಂಜಲಿಯಂ ಮಾಡಿ ಕೈಮುಗಿದು ಯಾಚಿಸಿ ಪ್ರತಿಗ್ರಹಪರನಾಗಿರುವನು; ಅಂಥಾವನ ಮಗಳು ನೀನು; ಕೇಳಲ್ಪಡತಕ್ಕಂಥಾವನಾಗಿ ಕೊಡಗೈಯುಳ್ಳವನಾಗಿ ಸ್ತೋತ್ರರೂಪನಾಗಿರುವ ಮಹಾರಾಯನ ಮಗಳು ನಾನು; ತಾರತಮ್ಯವಿಲ್ಲದೆ ಭಿಕ್ಷಕನ ಮಗಳಾದ ನೀನು ಇಷ್ಟು ಗರ್ವದಿಂದ ಮೆರೆಯುತ್ತಲಿದ್ದೀ; ನಿನ್ನ ಕೋಪದಿಂದ ಆಗುವದೇನು! ನೀನೂ ಸರಿ ತೃಣವೂ ಸರಿ! ಇನ್ನುಮೇಲೆ ಈ ದುರ್ಭಾಷೆಗಳನ್ನು ಬಿಡು; ಬಿಡದಿದ್ದರೆ ದಾಸೀಜನರಿಂದ ಹೆಕ್ಕತ್ತಿನಮೇಲೆ ತಿವಿದು ಹೊರಡಿಸುತಲಿದ್ದೇನೆ" ಅಂದಳು.

ಆ ಬಳಿಕ ದೇವಯಾನೆಯು ಬಹುಪ್ರಕಾರವಲ್ಲಿ ಕೋಪಿಸಿ ತನ್ನ ಶೀರೆಯನ್ನು ಎಳೆಯಲು ಶರ್ಮಿಷ್ಠೆಯು ದೇವಯಾನೆಯನ್ನು ಒಂದು ಭಾ

ವಿಯಲ್ಲೆತ್ತಿ ಹಾಕಿ ಅವಳು ಪ್ರಾಣರಹಿತೆಯಾದಳೆಂದು ನಿಶ್ಚೈಸಿ ಅವಳ ವೃತ್ತಾಂತವನ್ನು ವಿಚಾರಿಸದೆ ತನ್ನ ಸಖಿಗಳೊಂದಿಗೆ ಮನೆಗೆ ಹೋಗಿ ಅಸುರ ಕನ್ಯೆಯಾದ್ದರಿಂದ ತಾನುಮಾಡಿದ ಅಧರ್ಮಕ್ಕೆ ಮನಸ್ಸಿನಲ್ಲಿ ಕಲಕದೇ ಸುಖದಿಂದಿದ್ದಳು.

ಆ ಬಳಿಕ ಕೆಲವುಹೊತ್ತಿಗೆ ನಹುಷನ ಮಗನಾದ ಯಯಾತಿರಾಯನು ಬೇಟೆಯ ವಿನೋದದಿಂದ ಮೃಗಗಳನ್ನು ಹುಡುಕುತ ವನಕ್ಕೆ ಬಂದು ರಥದಲ್ಲಿ ಕಟ್ಟಿದ್ದ ಕುದುರೆಗಳು ಕಂಗೆಡಲು ಒಂದುಕಡೆಯಲ್ಲಿ ರಥವನ್ನು ನಿಲ್ಲಿಸಿ ಪಾದಚಾರಿಯಾಗಿ ಆ ಹಾಳುಭಾವಿಯ ಸಮೀಪಕ್ಕೆ ಬಂದು ಅದರಲ್ಲಿ ಅಗ್ನಿಜ್ವಾಲೆಯೋಪಾದಿಯಲ್ಲಿ ಪ್ರಕಾಶಿಸುತ್ತಲಿರುವಂಥಾವಳಾಗಿ ಸರ್ವಾಭರಣಭೂಷಿತೆಯಾಗಿ ಸಕಲಲಕ್ಷಣ ಸಂಪನ್ನೆಯಾಗಿ ದೇವಕನ್ಯೆಯೋಪಾದಿಯಲ್ಲಿರುವ ದೇವಯಾನಿಯನ್ನು ಕಂಡು ಮೃದು ಮಧುರ ಭಾಷಣಗಳಿಂದ "ಓ ಲತಾಂಗಿಯೇ, ಕೆಂಪಿನ ಉಗುರುಗಳುಳ್ಳಂಥಾವಳಾಗಿ ತುಂಬಿದ ಜವ್ವನವುಳ್ಳಂಥಾ ಹರಳೋಲೆಗಳನ್ನು ಧರಿಸಿ ಸರ್ವಾಲಂಕಾರ ಭೂಷಿತೆಯಾದ ನೀನು ಯಾರಮಗಳು? ಈ ಹಾಳುಭಾವಿಯಲ್ಲಿ ನಿಟ್ಟುಸುರುಗಳನ್ನು ಬಿಡುತ ಚಿಂತೆಯಿಂದಿರುವ ಕಾರಣವೇನು? ನಿಜವಾಗಿ ಹೇಳು" ಎಂದು ಕೇಳಿದನು.

ದೇವಯಾನಿಯು "ಕೇಳೈ ರಾಯನೇ, ದೇವತೆಗಳಿಂದ ಯುದ್ಧದಲ್ಲಿ ಹತವಾಗುವ ಅಸುರರನ್ನು ತಿರಿಗಿ ಬದುಕಿಸುವದಕ್ಕೆ ಸಮರ್ಥನಾದ ವಿದ್ಯಾಮಹಿಮೆಯುಳ್ಳ ಶುಕ್ರಾಚಾರ್ಯನ ಮೋಹದ ಮಗಳು ನಾನು; ಒಂದು ನಿಮಿತ್ತದಿಂದ ಈ ದುರಾವಸ್ಥೆಯನ್ನೈದಿದೆನು; ಇಂಥಾ ನನ್ನಲ್ಲಿ ದಯಮಾಡಿ ನನ್ನ ವೃತ್ತಾಂತವನ್ನು ಕೇಳುವಂಥಾ ಮಹಾನುಭಾವನು ನೀನ್ಯಾರು? ನಿನ್ನ ರೂಪುಲಾವಣ್ಯಗಳನ್ನು ಕಂಡು ಮನಸ್ಸಿನಲ್ಲಿ ಸಂತೋಷಪಡುತ್ತಲಿದ್ದೇನೆ; ನೀನಿಲ್ಲಿ ಬಂದಕಾರಣವೇನು? ತಿಳುಹಿಸಬೇಕು" ಅಂದಳು.

ಯಯಾತಿರಾಯನು "ನಾನು ನಹುಷನ ಮಗನಾದ ಯಯಾತಿರಾಯನು; ಬೇಟೆಯ ವಿನೋದದಿಂದ ಈ ವನಕ್ಕೆ ಬಂದು ಹುಲ್ಲಿನಿಂದ ಮುಚ್ಚಲ್ಪಟ್ಟ ಈ ಹಾಳುಭಾವಿಯಲ್ಲಿ ನಿನ್ನನ್ನು ಕಂಡೆನು" ಅಂದನು.

ದೇವಯಾನಿಯು "ಎಲೈ ರಾಯನೇ, ನೀನು ಮಹಾಕುಲದಲ್ಲಿ ಹುಟ್ಟಿದವನು; ಕೆಂಪಿನ ಉಗುರುಗಳುಳ್ಳ ಬೆರಳುಗಳಿಂದ ಒಪ್ಪುತ್ತಲಿರುವ

ನನ್ನ ದಕ್ಷಿಣ ಹಸ್ತವನ್ನು ಚಾಚುತಲಿದ್ದೇನೆ; ಆ ಹಸ್ತವನ್ನು ಹಿಡಿದು ಈ ಹಾಳುಭಾವಿಯಿಂದ ಮೇಲಕ್ಕೆ ತೆಗದು ಈ ದುರಾವಸ್ಥೆಯನ್ನು ಪರಿಹರಿಸು; ಆ ಬಳಿಕ ನಿನ್ನನ್ನು ಮದುವೆಯಾಗುತ್ತೇನೆ" ಅಂದಳು.

ಯಯಾತಿರಾಯನು ಅವಳು ಬ್ರಾಹ್ಮಣಕನ್ಯೆಯೆಂದು ತಿಳಿದು ಅವಳನ್ನು ಸಂರಕ್ಷಿಸದಿದ್ದರೆ ದೋಷ ಬರುವದು ಎಂದು ಅವಳ ದಕ್ಷಿಣ ಹಸ್ತವನ್ನುಹಿಡಿದು ಭಾವಿಯಿಂದ ಮೇಲಕ್ಕೆ ತೆಗದುಬಿಟ್ಟು "ಸುಖವಾಗಿ ಹೋಗು" ಅಂದನು.

ದೇವಯಾನಿಯು "ಎಲೈ ರಾಯನೇ, ನನ್ನಕೈಹಿಡಿದದ್ದರಿಂದ ನನಗೆ ನೀನು ಗಂಡನು; ನಿನ್ನ ಪಟ್ಟಣಕ್ಕೆ ಕರದುಕೊಂಡು ಹೋಗಿ ಮದುವೆಯಾಗು" ಅಂದಳು.

ಯಯಾತಿಯು "ನಾನು ಕ್ಷತ್ರಿಯಕುಲವಲ್ಲಿ ಹುಟ್ಟಿದವನು; ನೀನು ಬ್ರಾಹ್ಮಣಶ್ರೇಷ್ಠನಾದ ಶುಕ್ರಾಚಾರ್ಯನಮಗಳು; ಹೀಗೆ ಹೇಳುವದು ಚಿತವಲ್ಲ; ನಾನು ಆ ಮಹಾತ್ಮನಿಗೆ ಭಯಪಡುತ್ತೇನೆ" ಅಂದನು.

ದೇವಯಾನಿಯು "ಎಲೈ ರಾಯನೇ, ನನ್ನಮಾತು ಕೇಳದಿದ್ದರೂ ನನ್ನ ತಂದೆಯಾದ ಶುಕ್ರನಿಗೆಹೇಳಿ ಯಾವರೀತಿಯಿಂದಲಾದರು ನಿನ್ನನ್ನು ಮದುವೇ ಆಗದೇ ಬಿಡುವದಿಲ್ಲ" ಎಂದು ಆತನನ್ನು ಕಳುಹಿಸಲು ಆತನು ತನ್ನ ಪಟ್ಟಣಕ್ಕೆ ಹೋದನು.

ಆ ಬಳಿಕ ದೇವಯಾನಿಯು ಆ ಯಯಾತಿರಾಯನ ರೂಪುಲಾವಣ್ಯಗಳನ್ನೆನದು ವಿರಹದಿಂದ ಕಂಬನಿಗಳನ್ನು ತುಂಬಿ, ಬಳಲಿ, ಕಂಗೆಟ್ಟು ಒಂದು ಮರದಕೆಳಗೆ ಕುಳಿತುಕೊಂಡು ಚಿಂತಿಸುತ್ತಲಿದ್ದಳು. ಶುಕ್ರನು ದೇವಯಾನಿಯು ಮನೆಗೆ ಬಾರದೇ ತಡವುಮಾಡಲು ಅವಳ ದಾದಿಯನ್ನು ಕರದು "ನನ್ನ ಮಗಳನ್ನು ಕರದುಕೊಂಡು ಬಾ" ಅಂದನು.

ಆ ದಾದಿಯು ಆ ವನದಲ್ಲಿ ನಾಲ್ಕು ದಿಕ್ಕುಗಳಲ್ಲಿಯೂ ಹುಡುಕುತ ದೇವಯಾನಿಯು ನಡದ ಮಾರ್ಗದ ಜಾಡೆಯನ್ನು ಹಿಡಿದುಹೋಗಿ ವೃಕ್ಷಮೂಲದಲ್ಲಿ ಚಿಂತಿಸುತ್ತಲಿದ್ದ ದೇವಯಾನಿಯನ್ನುಕಂಡು "ಇಷ್ಟುಹೊತ್ತು ಮನೆಗೆ ಬರದೆ ಈ ವನದಲ್ಲಿರಬಹುದೆ! ನಿನ್ನ ತಂದೆಯು ನಿನ್ನನ್ನುಕರದುಕೊಂಡು ಬರಲು ಕಟ್ಟುಮಾಡಿದನು; ಶೀಘ್ರವಾಗಿ ಮನೆಗೆ ಬಾರಮ್ಮಾ" ಅಂದಳು.

ದೇವಯಾನೆಯು ಶರ್ಮಿಷ್ಠೆಯು ಮಾಡಿದ ಅಪಕಾರವನ್ನು ತನ್ನ ದಾಸಿಯೊಡನೆ ಹೇಳಿ "ನೀನು ಶೀಘ್ರವಾಗಿ ಪಟ್ಟಣಕ್ಕೆಹೋಗಿ ನನ್ನ ತಂದೆಗೆ 'ದೇವಯಾನೆಯು ಗತಪ್ರಾಣಿಯಾದಳು' ಎಂದು ತಿಳಿಹಿಸು ; ನಾನು ವೃಷಪರ್ವನ ಪಟ್ಟಣಕ್ಕೆ ಬರುವದಿಲ್ಲ" ಅಂದಳು.

ದಾದಿಯು ಭಯಪಟ್ಟು ಶೀಘ್ರವಾಗಿ ಹೋಗಿ ಶುಕ್ರನನ್ನು ಕಂಡು "ಶರ್ಮಿಷ್ಠೆಯು ಮಾಡಿತ ಅಪಕಾರದಿಂಗ ನಿನ್ನ ಮಗಳಾದ ದೇವಯಾನೆಯು ವನದಲ್ಲಿ ಪ್ರಾಣಗಳನ್ನು ಬಿಟ್ಟಳು" ಎಂದು ಅರಿಕೆಮಾಡಿದಳು.

ಶುಕ್ರಾಚಾರ್ಯನು ಆ ವಾಕ್ಯವನ್ನು ಕೇಳಿ ದುಃಖಾವೇಶದಿಂದ ಪಟ್ಟಣವನ್ನು ಬಿಟ್ಟು ತನ್ನ ಮಗಳನ್ನು ಹುಡುಕುತ ಬಂದು ಅಲ್ಲಿ ಹಂಬಲಿಸುತ್ತಿದ್ದ ದೇವಯಾನೆಯನ್ನು ಕಂಡು ಸಮೀಪಕ್ಕೆಹೋಗಿ ತಬ್ಬಿಕೊಂಡು ಶಿರಸ್ಸನ್ನು ಅಘ್ರಾಣಿಸಿ ಕ್ಲೇಶಪಟ್ಟು "ಎಲೆ ತಾಯೆ, ಲೋಕದಲ್ಲಿ ಜನರು ತಮ್ಮತಮ್ಮ ಸುಕೃತ ದುಷ್ಕೃತಗಳಿಂದ ಸುಖದುಃಖಗಳ ಪಡುವರಾದ್ದರಿಂದ ನೀನು ಪೂರ್ವಜನ್ಮದಲ್ಲಿ ಮಾಡಿದ ದುಷ್ಕೃತಗಳಿಗೆ ಈ ಅವಮಾನವು ಪ್ರಾಯಶ್ಚಿತ್ತವಾಯಿತು ; ಕ್ಲೇಶಪಡಬೇಡ" ಅಂದನು.

ದೇವಯಾನೆಯು "ಎಲೈ ಮಹಾತ್ಮನೇ, ನೀನು ಎಷ್ಟುಹೇಳಿದರೂ ಹೇಳು ; ಇದು ಪ್ರಾಯಶ್ಚಿತ್ತವಾಗಲಿ ಆಗದೆ ಹೋಗಲಿ; ಇಲ್ಲಿನಡದ ವೃತ್ತಾಂತವನ್ನು ಕೇಳು ; ವೃಷಪರ್ವನಮಗಳಾದ ಶರ್ಮಿಷ್ಠೆಯು ನನ್ನ ತಂದೆಯಾದ ನೀನು ಅವಳ ತಂದೆಯಾದ ವೃಷಪರ್ವನಿಗೆ ಪಾಠಕನೆಂತಲೂ ಸ್ತುತಿಪರನೆಂತಲೂ ಯಾಚಕನೆಂತಲೂ ಪ್ರತಿಗ್ರಹಪರನೆಂತಲೂ ಭಿಕ್ಷುಕನೆಂತಲೂ ಬಹುಪ್ರಕಾರವಾಗಿ ರೋಷದ್ವೇಷಗಳಿಂದ ನೀಚ ವಾಕ್ಯಗಳನ್ನಾಡಿದ್ದಲ್ಲದೇ ನನ್ನನ್ನು ತನ್ನ ಸಖೀಜನಗಳಿಂದ ಹಾಳುಭಾವಿಯಲ್ಲೆತ್ತಿ ಹಾಕಿಸಿ ಮನೆಗೆ ಹೋದಳು" ಅಂದಳು.

ಶುಕ್ರನು "ಎಲೆ ತಾಯಿಯೇ ನೀನು ಸ್ತುತಿಮಾಡಿ ಜೀವಿಸುವಂಥಾವನ ಮಗಳಲ್ಲ; ಸಕಲ ಜನಂಗಳಿಂದಲು ಹೊಗಳಿಸಿಕೊಳ್ಳುವಂಥಾವನ ಮಗಳಾದ ದೇವಯಾನೆಯೆಂದು ತಿಳುಕೊ ; ಶುಕ್ರಾಚಾರ್ಯನು ಇಂಥಾವನೆಂದು ವೃಷಪರ್ವನು ದೇವೇಂದ್ರನು ನಹುಷನಮಗನಾದ ಯಯಾತಿಯು ಮೊದಲಾದವರು ಬಲ್ಲರು ; ನೀನು ತಿಳಿಯಕೂಡದಿರುವ ಮಹಿಮೆ

ಯುಳ್ಳ ವೇದವಿದ್ಯಾ ವಿಶೇಷಗಳನ್ನು ತಿಳಿದಿರುವಂಥಾವನ ಮಗಳು; ಅಲ್ಲದೆ ನಾನು ಸ್ತೋತ್ರವನ್ನು ಮಾಡುವದಕ್ಕೆ ವೇದಗಳೇ ಹೊರ್ತಾಗಿ ಮತ್ತೊಂದು ಸ್ತುತಿಸಲ್ಪಡಲಾರದು ; ನಾನು ಒಬ್ಬನಿಗೆ ನಮಸ್ಕರಿಸುವದಿಲ್ಲ; ಬ್ರಾಹ್ಮರಿಗೆ ಐಶ್ವರ್ಯವು ಲೋಕಗಲ್ಲಿ ಶಾಶ್ವಿತವಾದ್ದರಿಂದ ಅಧೈರ್ಯವು ಕಪಟವು ಮೂಢತ್ವವು ನನ್ನಲ್ಲಿ ಬರಲಾರವು.

"ಯಾರು ಅನ್ಯರಿಂದ ಹೇಳಲ್ಪಟ್ಟ ಗರ್ವೋಕ್ತಿಗಳನ್ನು ಸಹಿಸುವರೋ ಅವರು ಸಕಲ ಲೋಕಂಗಳನ್ನು ಜಯಿಸುವರು ; ಕೋಪವು ಬಂದ ಸಮಯದಲ್ಲಿ ಉಪಶಾಂತಿಯನ್ನು ಸಂಪಾದಿಸಿ ಸರ್ಪವು ಪೊರೆಯನ್ನು ಬಿಡುವ ಚಂದದಿಂದ ಯಾವ ಪುರುಷನು ಕೋಪವನ್ನು ಬಿಡುವನೋ ಆತನು ಪುರುಷಶ್ರೇಷ್ಠನೆನಿಸಿಕೊಳ್ಳುವನು ; ಕರಾಳಿಗಳಾದ ಕುದುರೆಗಳು ಹಾರಿ ಓಡುವ ರೀತಿಯಿಂದ ಓಡಿಬರುವ ಕೋಪಗಳನ್ನು ತಡದವನು ಶೀಕ್ಷಕನೆನಿಸಿಕೊಳ್ಳುವನೇ ಹೊರ್ತಾಗಿ ಸುಮ್ಮನೇ ಕುದುರೆಗಳನ್ನು ಹಗ್ಗಗಳಿಂದ ಬಿಗಿದು ಹಿಡಿಯುವ್ರೋಪಾದಿಯಲ್ಲಿ ತಡದವನು ಶೀಕ್ಷಕನೆನಿಸಿಕೊಳ್ಳನು ; ಕೋಪವನ್ನು ಜಯಿಸಿದವನು, ಪರರ ದುರ್ಭಾಷೆಗಳನ್ನು ಸಹಿಸಿದವನು, ಒಬ್ಬರಿಂದ ಪೀಡಿತನಾಗಿ ಕ್ಲೇಶಪಡದೆ ಇರುವಂಥಾ ಪುರುಷನು, ಇವರಷ್ಟು ಸಕಲ ಪುರುಷಾರ್ಥಗಳನ್ನು ಪಡೆಯುವರೆಂದು ಶಾಸ್ತ್ರಜ್ಞರು ಹೇಳುವರು; ನೂರ ವರ್ಷಂಗಳು ವಸಂತಕಾಲದಲ್ಲಿ ಅಶ್ವಮೇಧಯಾಗಗಳನ್ನು ಮಾಡಿದಂಥಾ ಪುರುಷನಿಗಿಂತಲು ಕೋಪವನ್ನು ಜಯಿಸಿದಂಥಾ ಪುರುಷನೇ ಪೂಜ್ಯನೆಂದು ಹೇಳುವರು ; ಕಾಮ ಕ್ರೋಧಂಗಳು ಲೋಕದಲ್ಲಿ ನಿಂದಿತಗಳಾದ್ದರಿಂದ ಕೋಪವುಳ್ಳ ಪುರುಷನ ಯಜ್ಞ ದಾನ ತಪಸ್ಸುಗಳು ನಿಷ್ಫಲವಾಗುವವು ; ಕೋಪವನ್ನು ತಡೆಯುವಂಥಾ ಪುರುಷನಿಗೆ ಯಜ್ಞ ದಾನ ತಪಸ್ಸುಗಳು ಬಹು ಫಲಂಗಳನ್ನು ಕೊಡುವವು ; ಕೋಪವುಳ್ಳ ಪುರುಷನು ಏನು ಸತ್ಕರ್ಮಗಳನ್ನು ಮಾಡಿದರೂ ಚಿತ್ತಶುದ್ಧಿ ಇಲ್ಲದ್ದರಿಂದ ಇಹಪರಗಳಲ್ಲಿ ಸೌಖ್ಯವನ್ನು ಪಡೆಯಲಾರನು ; ಮಕ್ಕಳು ಹೆಂಡತಿ ಸ್ನೇಹಿತರು ತಮ್ಮಂದಿರು ಭೃತ್ಯರು ಮೊದಲಾದವರು ಎಷ್ಟು ಬಹುಮಾನವನ್ನು ಪಡದಿದ್ದರೂ ಕೋಪವುಳ್ಳವನನ್ನು ಬಿಟ್ಟು ಬಿಡುವದಕ್ಕೆ ಯೋಚಿಸುವರು. ಮತ್ತು ಹೆಂಡತಿ ಮಕ್ಕಳು ಮೊದಲಾದವರ ಮಾತನ್ನು ಕೇಳಿ ಅವರನ್ನು

ಸಂತೋಷಪಡಿಸಬೇಕಲ್ಲದೆ ಅವರಲ್ಲಿ ಕೋಪಿಸಿಕೊಳ್ಳುವದು ನಿಷ್ಫಲವಾ
ದ್ದರಿಂದ ಅವರ ಕೂಡೆ ವೈರವು ಮಾಡಬಾರದು " ಅಂದನು.

ದೇವಯಾನಿಯು " ಎಲೈ ತಂದೆಯೇ, ನಾನು ಚಿಕ್ಕವಳಾದರೂ ಸ
ಕಲ ಧರ್ಮಂಗಳ ತಾರತಮ್ಯವನ್ನು ಬಲ್ಲೆನು ; ಉಪಶಾಂತಿಯಲ್ಲಿಯೂ ಅ
ನ್ಯರನ್ನು ದೂಷಿಸುವದರಲ್ಲಿಯೂ ಹೆಚ್ಚು ಕಡಮೆಯನ್ನು ಬಲ್ಲೆನು ; ಲೋ
ಕದಲ್ಲಿ ಶಿಷ್ಯಧರ್ಮವನ್ನು ವಿಾರಿ ನಡಿಯುವ ಶಿಷ್ಯನ ದುಶ್ಚರಿತ್ರವನ್ನು
ಸಹಿಸಬಾರದು ; ನಿನಗೆ ಶಿಷ್ಯರಾಗಿ ಶಿಷ್ಯಧರ್ಮಗಳನ್ನು ಬಿಟ್ಟು ನಮಗೆ
ದ್ರೋಹವನ್ನು ಮಾಡಿದ ಈ ದಾನವರ ಪಟ್ಟಣದಲ್ಲಿ ವಾಸಿಸಿರಲಾರೆನು ; ನೀ
ಚರಾದ ಪುರುಷರು ಮತ್ತೊಬ್ಬರ ಕೀರ್ತಿಯೆಂಬ ಅಗ್ನಿಯಿಂದ ದಹಿಸಲ್ಪ
ಟ್ಟಂಥಾವರಾಗಿ ಅವರ ನಡತೆಯಂತೆ ತಮ್ಮಿಂದ ನಡೆಯುವದಕ್ಕೆ ತೀರದೇ
ಅವರನ್ನು ದೂಷಿಸುತ್ತಲಿರುವರು ; ಪರರ ಕುಲ ಮಹತ್ವಗಳನ್ನೂ ಸಚ್ಚರಿ
ತ್ರಗಳನ್ನೂ ಕಂಡು ಸಂತೋಷಪಡದೆ ಅಸೂಯೆಪಟ್ಟು, ದೂಷಿಸುವ ಪಾಪ
ಬುದ್ಧಿಗಳೊಡನೆ ಸಹವಾಸವು ಮಾಡಬಾರದು ; ಸಚ್ಚರಿತ್ರಗಳಂ ಕಂಡು
ಸಂತೋಷಪಡುತ್ತಲಿರುವ ಮಹಾತ್ಮರೊಡನೆ ಸಹವಾಸವು ಸಕಲ ಫಲಂಗಳ
ನ್ನು ಕೊಡುವದು ; ಎಷ್ಟು ಧನವಿಲ್ಲದಿದ್ದವರಾದರು ಮರ್ಯಾದೆಯನ್ನು ತಿಳಿದು
ನಡೆಯುವಂಥಾವರು ಮನುಷ್ಯಶ್ರೇಷ್ಠರೆನ್ನಿಸಿಕೊಳ್ಳುವರು ; ಧನಿಕರಾದ
ರೂ ದುರಾಚಾರಗಳನ್ನು ಮಾಡಿ ಪಾಪಕರ್ಮಗಳನ್ನು ಚರಿಸುವಂಥಾವರು
ಚಂಡಾಲರೆಂದು ತಿಳಿಯಬೇಕು ; ಧನದಿಂದಲೂ, ಕುಲಮಹತ್ವದಿಂದಲೂ, ವಿ
ದ್ಯಾ ವಿಶೇಷದಿಂದಲೂ ಅಹಂಕರಿಸಿರುವಂಥಾವನೇ ಚಂಡಾಲನಲ್ಲದೆ ಜಾತಿಯಿಂ
ದ ಚಂಡಾಲನಾದವನು ಚಂಡಾಲನಲ್ಲವೆಂದು ತಿಳುಕೊಳ್ಳಬೇಕು ; ನಿಷ್ಕಾರಣ
ವಾಗಿ ದ್ವೇಷವನ್ನು ಮಾಡಿ ಇಲ್ಲದೆ ಇರುವಂಥಾ ಅಪಕೀರ್ತಿಯನ್ನು ಕಲ್ಪಿಸಿ
ಪಾಪಕರ್ಮಂಗಳಿಗೆ ಭಯಪಡದೆ ಇರುವವರ ಕೂಡೆ ಸಹವಾಸವು ಪಾಪಂ
ಗಳಿಗೆ ಕಾರಣವಾಗಿರುವದು ; ಸುಕೃತ ದುಷ್ಕೃತಗಳಲ್ಲಿ ಯಾರಿಗೆ ಯಾವ
ದು ಪ್ರಿಯವಾಗಿರುವದೋ ಅವರಿಗೆ ಮತ್ತೊಂದು ಅಪ್ರಿಯವಾಗಿರುವದ್ದ
ರಿಂದ ಇಂಥಾ ಪಾಪಕರ್ಮವನ್ನು ಮಾಡಿದವರೊಡನೆ ಸಹವಾಸವು ನನಗೆ
ಬೇಡ. ಶರ್ಮಿಷ್ಠೆಯು ಹೇಳಿದ ದುರ್ಭಾಷೆಗಳನ್ನು ಕೇಳಿ ನನ್ನ ಮನ
ಸ್ಸು ತಲ್ಲಣಿಸುತ್ತಲಿದೆ ; ಇದಕ್ಕಿಂತಲೂ ದುಃಖಕರವಾದದ್ದು ಮೂರುಲೋ
ಕಂಗಳಲ್ಲೆಲ್ಲಾದರುಂಟೆ ! ಶರ್ಮಿಷ್ಠೆಯು ಆಡಿದ ಮರ್ಮೋದ್ಘಾಟನಂಗಳಾ

ದ ವಾಕ್ಯಂಗಳು ನನ್ನ ಮನಸ್ಸನ್ನು ಭೇದಿಸುತ್ತಲಿಧೆ; ಇಂಥಾ ಪಾಪಕ ರ್ಮಿಗಳಿಗೆ ಮಿತ್ರರುಂಟೆ! ಎಷ್ಟು ಅಧಿಕನಾದರು ಧನವನ್ನು ಬಯಸಿ ವಿ ರೋಧಿಯ ಸಮೀಪಕ್ಕೆ ಬಂದರೆ ಆತನು ಸಕಲಾವಮಾನಂಗಳಿಗೆ ಪಾತ್ರನಾ ಗುವನು; ಕಠಿಣವಾದ ಮಾತುಗಳೆಂಬ ಬಾಣಗಳು ಮುಖದ್ದೆಶೆಯಿಂಗ ಹೊರಟು ಎದುರಾಗಿ ಬಂದವರ ಹೃದಯದ ಮರ್ಮಂಗಳಲ್ಲಿ ನಾಟಿ ಯಾವಾ ಗಲು ನೋಯಿಸದೆ ಬಿಡುವದೆ! ಶಸ್ತ್ರವಿಷಾಗ್ನಿಯಿಂದಾದ ಘಾಯಗಳು ಕೆ ಲವು ದಿವಸಗಳಲ್ಲಿ ಹೋಗುವವು; ಆದರೆ ದುರ್ಭಾಷಣೆಗಳಿಂದ ಬಂದ ಘಾ ಯಗಳು ಎಷ್ಟು ದಿವಸಕ್ಕೂ ಮಾಯಲಾರವು; ಕೊಡ್ಲಿಪೆಟ್ಟಿನಿಂದ ಕಡಿಯ ಲ್ಪಟ್ಟ ವನವು ಕ್ರಮವಾಗಿ ತಿರಿಗಿ ಚಿಗುರುವದೇ ಹೊರ್ತಾಗಿ ದುರ್ಭಾಷೆ ಗಳಿಂದ ಕಡಿಯಲ್ಪಟ್ಟ ಮನಸ್ಸು ತಿರಿಗಿ ಚಿಗುರುವದಿಲ್ಲ" ಎಂದು ಹೇಳಿದಳು.

---

೪ ನೇ ಅಧ್ಯಾಯ.

ಆ ಬಳಿಕ ಶುಕ್ರಾಚಾರ್ಯನು ದೇವಯಾನೆಯ ವಾಕ್ಯವನ್ನು ಕೇಳಿ ಅತ್ಯಂತ ಕೋಪದಿಂದ ವೃಷಪರ್ವನ ಅರಮನೆಗೆ ಹೋಗಿ ಆ ದಾನವೇಂದ್ರ ನು ಸಮುಚಿತ ಪ್ರಕಾರವಾಗಿ ಎದುರಾಗಿ ಬಂದು ನಮಸ್ಕರಿಸಲು ಉಚಿತಾ ಸನದಲ್ಲಿ ಕುಳಿತುಕೊಂಡು ತುಟಿಗಳನ್ನಲ್ಲಾಡಿಸುತ್ತ ಆತನನ್ನು ಸಡ್ಡೆ ಮಾಡದೆ "ಎಲೈ ದಾನವೇಂದ್ರನೆ, ಲೋಕದಲ್ಲಿ ಮನುಷ್ಯನು ಮಾಡಿದ ದುಷ್ಕರ್ಮವು ಹುಲ್ಲುಮೇದ ಹಸುವು ಸಧ್ಯ ಹಾಲನ್ನು ಕೊಡುವ ರೀತಿಗೆ ಸಧ್ಯ ಫಲವನ್ನು ಕೊಡದೆ ಹೋದರೂ ಕೆಲವು ದಿವಸಗಳಾದಮೇಲೆ ಫಲಿಸು ವದೆಂಬುವದು ಯಥಾರ್ಥವು; ತನ್ನಲ್ಲಿ ಫಲಿಸದಿದ್ದರು ತನ್ನ ಮಕ್ಕಳು ಮೊಮ್ಮಕ್ಕಳು ಮೊದಲಾದ ವಂಶಸ್ಥರಲ್ಲಾದರು ಫಲಿಸದೆ ಬಿಡದು; ಅದು ಹ್ಯಾಗೆಂದರೆ: ಗುರುತ್ವ ಪದಾರ್ಥಗಳನ್ನು ಭಕ್ಷಿಸಿದರೆ ಅದು ಹೊಟ್ಟೆಗೆ ಬಾಧಕವಾಗುವ ತೆರದಿಂದ ಕರ್ಮಂಗಳು ಬಾಧಿಸದೆ ಬಿಡವು; ಅಧ್ಯಾಯ ನವನ್ನು ಓದಿ ನನಗೆ ಹಿತನಾಗಿ ಜಿತೇಂದ್ರಿಯನಾಗಿ ಶಮದಮಾದಿ ಗುಣಂ ಗಳುಳ್ಳವನಾಗಿ ಧರ್ಮಜ್ಞನಾಗಿ ಗುರು ಶುಶ್ರೂಷಾ ಪರಾಯಣನಾಗಿ ಪಾಪ ರಹಿತನಾಗಿದ್ದ ಬೃಹಸ್ಪತಿ ಕುಮಾರನಾದ ಕಚನನ್ನು ಕೊಂದೆ; ಅದಲ್ಲದೆ ನಿನ್ನ ಮಗಳಾದ ಶರ್ಮಿಷ್ಠೆಯು ಅನೇಕ ದುರ್ಭಾಷೆಗಳನ್ನಾಡಿ ಅವ ಮಾನಮಾಡಿ ಕೋಪಿಸಿಕೊಂಡು ದೇವಯಾನೆಯನ್ನು ಹಾಳುಭಾವಿಯಲ್ಲಿ

ನೂಕಿಸಿಬಿಟ್ಟಳು; ದೇವಯಾನಿಯು ಆ ಅವಮಾನವನ್ನು ಸಹಿಸಲಾರದೆ ನಿನ್ನ ದೇಶದಲ್ಲಿರುವದಿಲ್ಲವೆಂದು ನಿಶ್ಚಯಿಸಿದ್ದಾಳೆ; ಅವಳನ್ನು ಬಿಟ್ಟು ನಾನು ಒಂದು ಕ್ಷಣಮಾತ್ರವೂ ನಿಲ್ಲಲಾರದಿರುವದ್ದರಿಂದ ನಿನ್ನ ಪಟ್ಟಣವನ್ನೂ ನಿನ್ನ ದೇಶವನ್ನೂ ನಿನ್ನ ಬಂಧುಜನಗಳನ್ನೂ ನಿನ್ನನ್ನೂ ಬಿಟ್ಟು ಹೋಗುತಲಿದ್ದೇನೆ; ಯಾಕಂದರೆ: ಮಗಳಲ್ಲಿ ಮೋಹದಿಂದ ಹೀಗೆ ಮಾಡಬೇಕಾಯಿತು; ನಿನ್ನ ಮನಸ್ಸಿನಲ್ಲಿ ಕೋಪವು ಬೇಡ; ಕ್ಲೇಶಪಡಬೇಡ" ಅಂದನು.

ವೃಷಪರ್ವನು ಭಯಪಟ್ಟು "ಎಲೈ ಭೃಗುಶ್ರೇಷ್ಠನೇ, ಶರ್ಮಿಷ್ಠೆಯು ದೇವಯಾನಿಯಲ್ಲಿ ಮಾಡಿದ ಅವಮಾನವನ್ನು ನಾನು ತಿಳಿದವನಲ್ಲ; ತಿಳಿದಿದ್ದರೆ ಅಧೋಗತಿಯಲ್ಲಿ ಬೀಳುವೆನು" ಅಂದನು.

ಶುಕ್ರಾಚಾರ್ಯನು ಸಿಟ್ಟುಪಟ್ಟು "ನಿನ್ನಲ್ಲಿರುವ ದೋಷಗಳನ್ನು ನನ್ನಲ್ಲಿರುವಹಾಗೆಣಿಸಿ ನನ್ನನ್ನು ಸಟೆಹೇಳುವವನ ಹಾಗೆ ಎಣಿಸುತ್ತಿದ್ದೀ" ಅಂದನು.

ವೃಷಪರ್ವನು "ನಿಮ್ಮಲ್ಲಿ ಸತ್ಯವೂ ಧರ್ಮವೇ ಹೊರತಾಗಿ ಅಧರ್ಮವೂ ಅಸತ್ಯವೂ ನಾನು ಕಂಡದ್ದಿಲ್ಲ; ನೀವು ಈ ರೀತಿಯಲ್ಲಿ ನನ್ನನ್ನು ಬಿಟ್ಟು ಎಲ್ಲಿಗಾದರು ಹೋಗುವದಾದರೆ ನಾನು ನಿಮಗಿಂತಲು ಮೊದಲೇ ಸಮುದ್ರಮಾರ್ಗದಿಂದ ಪಾತಾಳ ಲೋಕಕ್ಕೆ ಹೋಗುತಲಿದ್ದೇನೆ; ಇಲ್ಲದಿದ್ದರೆ ಅಗ್ನಿಪ್ರವೇಶವನ್ನು ಮಾಡುತಲಿದ್ದೇನೆ; ನೀವು ಅಮರಾವತಿಗೆ ಹೋಗಿ ದೇವತೆಗಳೊಡನೆ ಬೆರದರೆ—ಸತ್ಯವಾಗಿ ಹೇಳುತಲಿದ್ದೇನೆ—ಪುತ್ರ ಮಿತ್ರ ಕಳತ್ರರನ್ನು ತೊರದು ಅಗ್ನಿಪ್ರವೇಶವನ್ನು ಮಾಡುತಲಿದ್ದೇನೆ" ಅಂದನು.

ಶುಕ್ರನು "ನೀನು ಸಮುದ್ರದಲ್ಲಾದರೂ ಬೀಳು—ಅಗ್ನಿಪ್ರವೇಶವನ್ನಾದರೂ ಮಾಡು; ನನ್ನ ಮೋಹದ ಮಗಳಾದ ದೇವಯಾನಿಯನ್ನು ಬಿಟ್ಟು ನಿಮಿಷವಾದರೂ ನಿಲ್ಲಲಾರೆನು; ನಾನು ಬೇಕೆಂದು ಎಣಿಸಿದರೆ ದೇವಯಾನಿಯನ್ನು ಒಡಂಬಡಿಸು; ಅವಳಿಗಿಂತಲು ಪ್ರಿಯವಾದದ್ದಿಲ್ಲದೆ ಇರುವದ್ದರಿಂದ ನೀನು ಅವಳಿಗೆ ಸಮಾಧಾನವನ್ನು ಮಾಡಿದರೆ ಆಗ ನಿನ್ನ ಯೋಗಕ್ಷೇಮವನ್ನು ನಿರ್ವಹಿಸಿ ಇಂದ್ರನ ಸಮೀಪದಲ್ಲಿ ಬೃಹಸ್ಪತಿಯು ಇರುವ ರೀತಿಗೆ ನಿನ್ನ ಸಮೀಪದಲ್ಲಿರುತ್ತೇನೆ" ಅಂದನು.

ವೃಷಪರ್ವನು "ಈ ದಾನವ ವಂಶದಲ್ಲಿರುವಂಥಾ ಧನವು ರಥಗಳು ಆನೆಗಳು ಕುದುರೆಗಳು ದಿವ್ಯಭೂಷಣಗಳು ಮೊದಲಾದ ಸಮಸ್ತ ವಸ್ತುಗಳನ್ನು ನಿಮ್ಮ ಅಧೀನವಾಗಿ ಮಾಡುತಲಿದ್ದೇನೆ; ನನ್ನನ್ನು ಅನುಗ್ರಹಿಸಬೇಕು" ಅಂದನು.

ಶುಕ್ರಾಚಾರ್ಯನು "ಈ ಅರ್ಥವು ನಿನ್ನ ಮನಸ್ಸಿನಲ್ಲಿ ನಿಶ್ಚಯವಾಗಿದ್ದರೆ ದೇವಯಾನಿಯ ಕೋಪವನ್ನು ಪರಿಹರಿಸು" ಅಂದನು.

ಆ ಬಳಿಕ ಗುರುವಿನ ವಾಕ್ಯ ಪ್ರಕಾರ ವೃಷಪರ್ವನು ಶುಕ್ರನೊಡನೆ ಕೂಡಿ ಆ ಕ್ಷಣದಲ್ಲೇ ಹೊರಟು ದೇವಯಾನಿಯು ಇರುವ ಉದ್ಯಾನವನಕ್ಕೆ ಹೋಗಿ ಆ ಗುರುಪುತ್ರಿಯ ಪಾದಂಗಳಿಗೆ ನಮಸ್ಕರಿಸಿ "ನಮ್ಮ ಅಪರಾಧವನ್ನು ಕ್ಷಮಿಸಬೇಕು" ಎಂದು ಪ್ರಾರ್ಥಿಸಿದನು.

ಶುಕ್ರನು ವೃಷಪರ್ವನು ತನ್ನ ಕೂಡೆ ಮೊದಲು ಹೇಳಿದ ಪ್ರಿಯವಾಕ್ಯಗಳನ್ನು ತನ್ನ ಮಗಳಿಗೆ ತಿಳುಹಿಸಲು ದೇವಯಾನಿಯು "ಈ ಮಹಾರಾಯನ ಧನವಷ್ಟೂ ನಿನ್ನ ಅಧೀನವಾದರೆ ಈ ಅರ್ಥಕ್ಕೆ ಈತನಿಂದ ಹೇಳಿಸು" ಅಂದಳು.

ವೃಷಪರ್ವನು "ನಿಮ್ಮ ತಂದೆಯಾದ ಶುಕ್ರನು ನನಗೆ ನಮಸ್ಕಾರ ಯೋಗ್ಯನು—ಸ್ತೋತ್ರಾರ್ಹನು; ನನ್ನಲ್ಲಿರುವ ಧನವು ನನಗೆ ಮಾತ್ರವಲ್ಲ; ನಾನು ಈ ಶುಕ್ರಾಚಾರ್ಯರಿಗೆ ಒಡೆಯನಾದ್ದರಿಂದ ಅವು ಇವರ ಅಧೀನವೇ ಸರಿ; ಆದ್ದರಿಂದ ನೀವೇನು ಒದುಸಿದರೂ ಆ ಕಾರ್ಯವು ಅಕಾರ್ಯವಾದರೂ ಅವಶ್ಯವಾಗಿ ಮಾಡುತಲಿದ್ದೇನೆ" ಅಂದನು.

ದೇವಯಾನಿಯು "ಎಲೈ ವೃಷಪರ್ವನೇ, ನಿನ್ನ ಮಗಳಾದ ಶರ್ಮಿಷ್ಠೆಯು ಸಾವಿರಮಂದಿ ದಾಸಿಗಳೊಡನೆ ಕೂಡಿ ನನ್ನ ದಾಸಿಯಾಗಿ ನಾನು ಮದುವೆಯಾಗಿ ಗಂಡನ ಮನೆಗೆ ಹೋಗುವಾಗಲೂ ನನ್ನ ಸಂಗಡ ಬರುವ ಹಾಗೆ ಮಾಡಬೇಕು" ಅಂದಳು.

ವೃಷಪರ್ವನು ಸಂಗತಿಕೆಯೆಂಬ ದಾದಿಯನ್ನು ಕರೆದು "ನೀನು ಶೀಘ್ರವಾಗಿ ಹೋಗಿ ಶರ್ಮಿಷ್ಠೆಯನ್ನು ಇಲ್ಲಿಗೆ ಕರೆತಾ; ಆಕೆಯು ಈ ದೇವಯಾನಿಗೆ ದಾಸಿಯಾಗಿ ಗುರುವಿನ ಮಗಳು ಯೇನು ಕಾರ್ಯವನ್ನು ಹೇಳುತಲಿದ್ದಾಳೋ ಆ ಕಾರ್ಯವನ್ನು ಒಡಂಬಟ್ಟು ಮಾಡತಕ್ಕಂಥಾವಳು. ಕುಲಕ್ಕೆ ಹಾನಿ ಬಂದಾಗ ಒಬ್ಬನನ್ನು ಬಿಡಬೇಕು, ಗ್ರಾಮಕ್ಕೆ ಹಾನಿಬಂದಾಗ ಒಂ

ದು ಕುಲದವರನ್ನು ಬಿಡಬೇಕು, ದೇಶಕ್ಕೆ ಬಾಧೆಬಂದಾಗ ಬಂದು ಗ್ರಾಮವನ್ನು ಬಿಡಬೇಕು, ತನಗೆ ಬಾಧೆ ಬಂದಾಗ ತನ್ನ ದೇಶವನ್ನೂ ಬಿಡಬೇಕು' ಎಂಬ ನೀತಿ ಮಾರ್ಗವನ್ನನುಸರಿಸುತಲಿದ್ದೇನೆ" ಅಂದಳು.

ಸಂಗತಿಕೆಯು ಅಂತಃಪುರಕ್ಕೆ ಹೋಗಿ ಶರ್ಮಿಷ್ಠೆಯಂ ಕಂಡು "ನಿನ್ನ ನಿಮಿತ್ತವಾಗಿ ಶುಕ್ರನು ದೇವಯಾನೆಯ ಬೋಧನೆಯಿಂದ ದಾನವಕುಲವನ್ನು ಬಿಟ್ಟು ಹೋಗುವವನಾಗಿರುವದ್ದರಿಂದ ಆತನ ಮಗಳಾದ ದೇವಯಾನೆಗೆ ನೀನು ದಾಸಿಯಾಗಿ ಅವಳು ಹೇಳಿದ ಕಾರ್ಯಗಳನ್ನು ಮಾಡಿದರೆ ನಿನ್ನ ಬಂದುಜನಕ್ಕೆ ಕ್ಷೇಮವಾದೀತು ; ನಿನ್ನ ತಂದೆಯಾದ ವೃಷಪರ್ವನು ನಿನಗೆ ಈ ಅರ್ಥವನ್ನು ತಿಳುಹಿಸಿ ನಿನ್ನನ್ನು ಕರದುಕೊಂಡುಬರಲು ಹೇಳಿದನು ; ಏಳು" ಅಂದಳು.

ಶರ್ಮಿಷ್ಠೆಯು "ದೇವಯಾನೆಯ ಬೋಧನೆಯಿಂದ ಶುಕ್ರನು ದನುಜಕುಲವನ್ನು ಬಿಟ್ಟು ಹೋಗದಿದ್ದರೆ ಸಾಕು ; ಹಾಗೆಯಾಗಲಿ" ಎಂದು ಒಪ್ಪಿಕೊಂಡು ಪಲ್ಲಕ್ಕಿಯನ್ನೇರಿ ಸಾವಿರಮಂದಿ ದಾಸಿಗಳೊಡನೆ ಕೂಡಿ ತಂದೆಯ ಸಮೀಪಕ್ಕೆ ಬಂದು ಆತನ ಅಪ್ಪಣೆಯಿಂದ ದೇವಯಾನೆಯನ್ನು ಕಂಡು "ಈ ಸಾವಿರಮಂದಿ ದಾಸಿಗಳೊಡನೆ ಕೂಡಿ ನಾನು ನಿನಗೆ ದಾಸಿಯಾಗಿ ನೀನು ಯೇನು ಅನುಚಿತಕಾರ್ಯಗಳನ್ನು ಕಟ್ಟುಮಾಡಿದರೂ ಆ ರೀತಿಗೆ ದಾಸೀ ಧರ್ಮವನ್ನು ತಪ್ಪದೆ ಸಕಲ ಕಾರ್ಯಗಳನ್ನೂ ಮಾಡುತ ನೀನು ಗಂಡನ ಮನೆಗೆ ಹೋಗುವಾಗ ನಿನ್ನ ಸಂಗಡಲೇ ಬಂದು ಊಳಿಗವನ್ನು ಮಾಡುತಲಿದ್ದೇನೆ" ಅಂದಳು.

ದೇವಯಾನೆಯು "ನೀನು ಹೀಗೆ ಹೇಳುವದುಚಿತವೆ! ಸ್ತುತಿಸಿ ನಮಸ್ಕರಿಸಿ ಯಾಚಕ ಧರ್ಮದಿಂದ ಜೀವನವನ್ನು ಮಾಡುವಂಥಾ ವೈದಿಕನ ಮಗಳಿಗೆ ನಿನ್ನಂಥಾ ಅರಸನ ಮಗಳು ದಾಸಿಯಾಗುವಳೆ!" ಅಂದಳು.

ಶರ್ಮಿಷ್ಠೆಯು "ಈ ದಾಸ್ಯವು ನೀಚ ಕೃತ್ಯವಾದರೂ ಇದನ್ನು ಮಾಡಿ ನನ್ನ ಬಂಧುಜನರನ್ನು ಸಂರಕ್ಷಿಸುವದೇ ಪರಮ ಧರ್ಮವಾದ್ದರಿಂದ ಅವಶ್ಯವು ನಿನಗೆ ದಾಸಿಯಾಗುತಲಿದ್ದೇನೆ" ಅಂದಳು.

ದೇವಯಾನೆಯು ಶುಕ್ರನನ್ನು ನೋಡಿ ಸಂತೋಷಪಟ್ಟು "ಏನಪ್ಪಯ್ಯಾ, ನನ್ನ ಮನೋರಥವು ಸಫಲವಾಯಿತು ; ಇನ್ನುಮೇಲೆ ವೃಷಪರ್ವ

ನ ಪಟ್ಟಣಕ್ಕೆ ಬರುತಲಿದ್ದೇನೆ; ನಿನ್ನ ಮಹಿಮೆಯನ್ನು ತಿಳಿಯುವದಕ್ಕೆ ಯಾರಿಗೂ ಶಕ್ಯವಲ್ಲ" ಅಂದಳು.

ಆ ಬಳಿಕ ಶುಕ್ರನು ದೇವಯಾನಿಯನ್ನು ಕರದುಕೊಂಡು ಸಕಲ ದಾನವರಿಂದಲೂ ಪೂಜಿಸಲ್ಪಟ್ಟವನಾಗಿ ಪಟ್ಟಣವನ್ನು ಪ್ರವೇಶಿಸಿದನು.

೫ನೇ ಅಧ್ಯಾಯ.

ಆ ಬಳಿಕ ಕೆಲವು ಕಾಲಕ್ಕೆ ಸಾವಿರಮಂದಿ ದಾಸಿಗಳೊಡನೆ ಕೂಡಿ ಶರ್ಮಿಷ್ಠೆಯು ಊಳಿಗವಂ ಮಾಡುತ್ತಿರಲು ದೇವಯಾನಿಯು ವಿನೋದಾರ್ಥವಾಗಿ ಪಟ್ಟಣವನ್ನು ಬಿಟ್ಟು ವನಕ್ಕೆ ಬಂದು ಯಥೇಚ್ಛವಾಗಿ ಕ್ರೀಡಿಸುತ್ತಾ ಸಂತೋಷದಿಂದಿರುವ ಸಮಯದಲ್ಲಿ ಅವಳ ಸಖೀಜನಂಗಳು ಮಧುಪಾನವಂ ಮಾಡುವಂಥಾವರಾಗಿಯೂ ಅನೇಕವಾದ ಕಜ್ಜಾಯಗಳನ್ನು ಭಕ್ಷಿಸುವಂಥಾವರಾಗಿಯೂ ಮಧುರವಾದ ಫಲಗಳನ್ನು ತಿನ್ನುವಂಥಾವರಾಗಿಯೂ ನಾನಾಪ್ರಕಾರವಾಗಿ ಕ್ರೀಡಿಸುತ್ತಿದ್ದರು. ಆ ಸಮಯದಲ್ಲಿ ನಹುಷನ ಮಗನಾದ ಯಯಾತಿರಾಯನು ಬೇಟೆಯ ವಿನೋದದಿಂದ ಸಂಚರಿಸಿ ಶ್ರಮಪಟ್ಟು ಉದಕಗಳನ್ನು ಹುಡುಕುತ ಆ ವನಕ್ಕೆ ಬಂದು ಅಲ್ಲಿ ಕನಕರತ್ನಮಯವಾದ ಪೀಠದಲ್ಲಿ ಕುಳಿತು ಮುಗುಳುನಗೆಯೊಡನೆ ಕೂಡಿ ಮಿಂಚುತ್ತಲಿರುವ ವದನಾರವಿಂದವುಳ್ಳಂಥಾವಳಾಗಿ ಸಮಾನವಿಲ್ಲದಿರುವ ರೂಪುಲಾವಣ್ಯ ಕಾರುಣ್ಯಾದಿಗಳೊಡನೆ ಕೂಡಿರುವಂಥಾವಳಾಗಿ ನುಣುಪಾಗಿ ಕುಟಿಲವಾಗಿ ಹಿಮ್ಮಡಿಗಳಲ್ಲಿ ಬೀಳುವ ಮುಂಡೇಕೂದಲುಳ್ಳಂಥಾವಳಾಗಿ ನಾನಾಭರಣಭೂಷಿತೆಯಾಗಿ ಸಕಲ ಶ್ರೇಷ್ಠೆಯಾಗಿದ್ದ ದೇವಯಾನಿಯನ್ನೂ ಆವಳ ಸಮೀಪದಲ್ಲಿ ಚಿಕ್ಕ ಆಸನದಲ್ಲಿ ಕುಳಿತು ದೇವಯಾನಿಯ ಪಾದಗಳನ್ನು ತನ್ನ ತೊಡೆಯಮೇಲಿರಿಸಿಕೊಂಡು ಶ್ರೀ ಪಾದಸೇವೆಯನ್ನು ಮಾಡುತ್ತಲಿದ್ದ ಶರ್ಮಿಷ್ಠೆಯನ್ನೂ ಅವರ ಉಭಯಪಾರ್ಶ್ವಗಳಲ್ಲಿಯೂ ಮನೋಹರವಾಗಿ ಮಧುರಗಾನಗಳನ್ನು ಮಾಡುವಂಥಾವರನ್ನೂ ನಾಟ್ಯವಾಡುತ್ತಿದ್ದಂಥಾವರನ್ನೂ ಕಾಣಲು ಆ ಸ್ತ್ರೀಯರು ನಾಚಿಕೆಯಿಂದ ಸ್ವಲ್ಪವಾಗಿ ಮುಖಗಳನ್ನು ಬಾಗಿಸಿದರು. ಯಯಾತಿರಾಯನು ದೇವಯಾನಿ ಶರ್ಮಿಷ್ಠೆಯರಂ ಕಂಡು "ಸಾವಿರಮಂದಿಯು ಓಲಗಿಸಲು ಈ ವನದಲ್ಲಿ ಕ್ರೀಡಿ

ಸುತ್ತಲಿರುವ ನೀವಿಬ್ಬರು ಯಾರು ? ನಿಮ್ಮ ಕುಲವೇನು ? ನಿಮ್ಮ ಹೆಸರುಗಳೇನು ?" ಎಂದು ಕೇಳಿದನು.

ದೇವಯಾನಿಯು "ನಾನು ಅಸುರರಿಗೆ ಗುರುವಾದ ಶುಕ್ರನ ಮಗಳೆಂದು ತಿಳುಕೋ; ಇವಳು ವೃಷಪರ್ವನ ಮಗಳಾದ ಶರ್ಮಿಷ್ಠೆಯೆಂಬು ನನ್ನ ಊಳಿಗ ಮಾಡುವಂಥಾವಳು; ಇವಳು ನಾನು ಮದುವೆಯಾಗಿ ಗಂಡನಮನೆಗೆ ಹೋಗುವಾಗ ನನ್ನ ಸಂಗಡಲೇ ಬರಲುಳ್ಳವಳು" ಅಂದಳು.

ಯಯಾತಿರಾಯನು "ಗಂಧರ್ವ ಯಕ್ಷ ಕಿನ್ನರ ಸ್ತ್ರೀಯರೊಳಗೆ ಇಂಥಾ ರೂಪು ಲಾವಣ್ಯಗಳು ಎಲ್ಲಿಯೂ ಕಂಡದ್ದಿಲ್ಲ; ಮಹಾಲಕ್ಷ್ಮಿಯು ಚಂದದಿಂದ ಸಕಲಲಕ್ಷಣ ಸಂಪನ್ನೆಯಾಗಿ ಸರ್ವಾಲಂಕಾರ ಭೂಷಿತೆಯಾಗಿ ತಾವರೆ ಎಸಳುಗಳೋಪಾದಿಯಲ್ಲಿರುವ ಕಣ್ಣುಗಳುಳ್ಳಂಥಾ ಈ ಕನ್ಯಾರತ್ನವು ಯಾವಕಾರಣದಿಂದ ನಿನಗೆ ದಾಸಿಯಾದಳು ? ನಿನಗೆ ದಾಸಿಯಾಗುವದಕ್ಕೆ ಏನು ಭಾಗ್ಯವನ್ನು ಪಡದಿದ್ದೇಯೋ ! ಏನು ತಪಸ್ಸನ್ನು ಮಾಡಿದೆಯೋ! ಆ ತಪೋಭಾಗವ ಹೊರ್ತಾಗಿ ಇವಳು ನಿನಗೆ ದಾಸಿಯಾಗಲಾರಳು" ಅಂದನು.

ದೇವಯಾನಿಯು "ದೈವಸಂಕಲ್ಪವಿದ್ದರೆ ಯಾವದುತಾನೆ ಲಭಿಸದು ! ಆ ವಿಚಾರವು ಹಾಗಿರಲಿ; ನಿನ್ನ ಅಂದಚಂದಗಳ ಕಂಡರೆ ಅರಸನಾಗಿ ತೋರುತ್ತಿದ್ದೀ; ವಾಕ್ಯ ಚಾತುರ್ಯಗಳನ್ನು ಕಂಡರೆ ಬ್ರಾಹ್ಮಣನಾಗಿ ತೋರುತ್ತಿದ್ದೀ; ನೀನ್ಯಾರು ? ನಿನ್ನ ಹೆಸರೇನು ? ಎಲ್ಲಿಂದ ಬಂದೆ ? ನೀನು ಯಾರ ಕುಮಾರನು ? ಈ ಅರ್ಥವಷ್ಟು ನನಗೆ ತಿಳುಹಿಸಬೇಕು" ಅಂದಳು.

ಯಯಾತಿರಾಯನು "ನಾನು ನಹುಷರಾಯನಮಗನಾದ ಯಯಾತಿಯೆಂಬವನು; ಬ್ರಹ್ಮಚರ್ಯದಿಂದ ಸಾಂಗವಾಗಿ ಸಕಲ ವೇದಗಳನ್ನೋದಿದವನು" ಅಂದನು.

ದೇವಯಾನಿಯು "ಅಂಥಾ ಮಹಾರಾಯನಾದ ನೀನು ಶತ್ರುಜನಗಳ ನಿಗ್ರಹಿಸದೆ ಬೇಟೆಯ ವಿನೋದದಿಂದ ಈ ವನಕ್ಕೆ ಬರುವದಕ್ಕೆ ಕಾರಣವೇನು ?" ಅಂದಳು.

ಯಯಾತಿರಾಯನು "ಬೇಟೆಯ ವಿನೋದದಿಂದ ಬಂದು ಶ್ರಮಪಟ್ಟು ಬಾಯಾರಿಕೆಯಿಂದ ಉದಕವಬಯಸಿ ಇಲ್ಲಿಗೆ ಬಂದೆನು ; ನೀನು ನ

ನ್ನನನ್ನು ಬಹುಪ್ರಕಾರವಾಗಿ ಕೇಳಿದ್ದಕ್ಕೆಲ್ಲಾ ಉತ್ತರಗಳನ್ನು ಕೊಟ್ಟೆನು; ಹೋಗಿ ಬರುತ್ತೇನೆ; ಅಪ್ಪಣೆಯ ಕೊಡಬೇಕು" ಅಂದನು.

ದೇವಯಾನೆಯು "ಸಾವಿರಮಂದಿ ದಾಸಿಯರೊಡನೆ ಕೂಡಿರುವ ಶರ್ಮಿಷ್ಠೆಯೆಂಬ ಊಳಿಗದವಳೊಡನೆ ಕೂಡಿ ನಾನು ನಿನ್ನ ವಶವಾಗುತಲಿದ್ದೇನೆ; ನೀನು ನನ್ನನ್ನು ಮದುವೆಯಾಗಿ ನನಗೆ ಗಂಡನಾಗಬೇಕು" ಅಂದಳು.

ಆ ಬಳಿಕ ಯಯಾತಿರಾಯನು ವೃಷಪರ್ವನ ಮಗಳಾದ ಶರ್ಮಿಷ್ಠೆಯಲ್ಲಿ ಮೋಹಿಂತನಾಗಿ ಅವಳು ತನಗೆ ಯಾವರೀತಿಯಿಂದ ಪಟ್ಟದ ಮಹಿಷಿಯಾಗುವಳೆಂದು ಯೋಚಿಸಿ ದೇವಯಾನೆಯನ್ನು ಕಂಡು "ಸಕಲ ಲೋಕಪೂಜ್ಯನಾದ ಭಾರ್ಗವನ ಮಗಳಾದ ನಿನ್ನನ್ನು ಕ್ಷತ್ರಿಯ ಕುಮಾರನಾದ ನಾನು ಯಾವರೀತಿಯಿಂದ ಮದುವೆಯಾಗುವೆನು! ಲೋಕದಲ್ಲಿ ಕ್ಷತ್ರಿಯರು ಬ್ರಾಹ್ಮರ ಕನ್ಯೆಯನ್ನು ಮದುವೆಯಾಗುವದುಂಟೆ! ಪರನ ಹೆಂಡತಿಯು ಒಡಹುಟ್ಟಿದವಳು ಉತ್ತಮಕುಲದಲ್ಲಿ ಹುಟ್ಟಿದವಳು ಸಮಾನಗೋತ್ರದಲ್ಲಿ ಹುಟ್ಟಿದವಳು ಪತಿತೆಯು ಸೊಸೆಯು ನೀಚ ಕುಲದಲ್ಲಿ ಹುಟ್ಟಿದವಳು ತನ್ನಲ್ಲಿ ಪ್ರೀತಿಯಿಲ್ಲದೆ ಇರುವಂಥಾವಳು ರೋಗದಿಂದ ಪೀಡಿತೆಯಾಗಿರುವವಳು—ಇವರು ಮೊದಲಾದವರು ಮದುವೆಗೆ ಯೋಗ್ಯರಲ್ಲವೆಂದು ಮಹಾತ್ಮರು ಹೇಳುವರು" ಅಂದನು.

ದೇವಯಾನೆಯು "ಎಲೈ ರಾಯನೇ, ಬ್ರಾಹ್ಮಣರೊಡನೆ ಕೂಡ ಸಂಬಂಧವು ಕ್ಷತ್ರಿಯರಿಗೂ ಕ್ಷತ್ರಿಯರೊಡನೆ ಕೂಡ ಸಂಬಂಧವು ಬ್ರಾಹ್ಮಣರಿಗೂ ಉಂಟಾಗವೆ; ಈರ್ವರಿಗೂ ಅತ್ಯಂತ ಭೇಧವಿಲ್ಲ; ಇವರಿಗೆ ಜಾತಿಯಲ್ಲೇ ಬೇಧ ಹೊರ್ತಾಗಿ ಆಚಾರಂಗಳು ಅಧಿಕವಾಗಿ ಬೆರದಿರುವವು; ನೀನು ರಾಜರುಷೀ ಪುತ್ರನಾಗಿ ರಾಜರುಷಿಯಾದ್ದರಿಂದ ಅವಶ್ಯವಾಗಿ ನನ್ನನ್ನು ಮದುವೆಯಾಗಬೇಕು" ಅಂದಳು.

ಯಯಾತಿರಾಯನು "ಲೋಕದಲ್ಲಿ ನಾಲ್ಕುಜಾತಿಯವರೂ ಒಬ್ಬ ವಿರಾಟ ಪುರುಷನ ದೇಹದಲ್ಲಿ ಹುಟ್ಟಿದವರು; ಆದರೂಧರ್ಮಾಚಾರಂಗಳು ಅನೇಕ ಬೇಧಗಳಾಗಿರುವವು; ಇಂಥಾ ನಾಲ್ಕು ವರ್ಣಂಗಳಲ್ಲಿ ಬ್ರಾಹ್ಮಣನು ಶ್ರೇಷ್ಟನು" ಅಂದನು.

ದೇವಯಾನೆಯು "ನನ್ನಹಸ್ತವನ್ನು ಒಬ್ಬ ಪುರುಷನೂ ಮುಟ್ಟಲಿಲ್ಲ; ಹಾಗಿರುವಲ್ಲಿ ರಾಜರುಷಿಪುತ್ರನಾದ ನೀನು ಮೊದಲು ಹಿಡಿದೆ; ಅಂ

ಥಾ ನಿನ್ನ ಕೈಯಿಂದ ಹಿಡಿಯಲ್ಪಟ್ಟ ನನ್ನ ಹಸ್ತವನ್ನು ಮತ್ತೊಬ್ಬನು ಹ್ಯಾಗೆ ಹಿಡಿಯತಕ್ಕಂಥಾವನು ?” ಎಂದು ಕೇಳಿದಳು.

ಯಯಾತಿರಾಯನು “ರೋಷಾವೇಶದಿಂದ ಕೋಪಿಸಿಕೊಂಡಿರುವ ಸರ್ಪವನ್ನಾದರೂ ಉರಿಯುತಲಿರುವ ಬೆಂಕಿಯನ್ನಾದರೂ ಹದವಾದ ಅಂಚುಳ್ಳ ಶಸ್ತ್ರವನ್ನಾದರೂ ಕೆಣಕಬಹುದು ; ದುರಾರಾಧ್ಯನಾದ ಬ್ರಾಹ್ಮಣನನ್ನು ಕೆಣಕುವದು ಬಹು ಸಾಹಸವು” ಅಂದನು.

ದೇವಯಾನಿಯು “ಸರ್ಪಅಗ್ನಿ ಶಸ್ತ್ರಗಳಿಗಿಂತಲೂ ಬ್ರಾಹ್ಮಣನು ಯಾವ ರೀತಿಯಿಂದ ದುರಾರಾಧ್ಯನು ?” ಎಂದು ಕೇಳಿದಳು.

ಯಯಾತಿರಾಯನು “ಸರ್ಪವು ಕಚ್ಚಿದರೂ ಅಗ್ನಿ ಸುಟ್ಟರೂ ಶಸ್ತ್ರವು ಸೋಂಕಿದರೂ ಒಬ್ಬನೇ ಹೋಗುವನು ; ಬ್ರಾಹ್ಮಣನು ಕೋಪಿಸಿಕೊಂಡರೆ ರಾಷ್ಟ್ರ ಬಲ ಸಮೇತವಾಗಿ ದಹಿಸಲ್ಪಡುವನು ; ಆದ್ದರಿಂದ ನಿನ್ನ ತಂದೆಯಾದ ಶುಕ್ರನು ಕೊಡದೆ ನಾನು ಮದುವೆಯಾಗುವದಕ್ಕೆ ಭಯಪಡುತಲಿದ್ದೇನೆ” ಅಂದನು.

ದೇವಯಾನಿಯು “ಹಾಗೆ ಆಗಲಿ ; ಬ್ರಾಹ್ಮಣಶ್ರೇಷ್ಠನಾದ ನನ್ನ ತಂದೆಯು ನಿನಗೆ ಕೊಟ್ಟಬಳಿಕ ಅಂಗೀಕರಿಸು ; ನೀನು ಕೇಳುವದಕ್ಕೆ ಮೊದಲೇ ಆತನೇ ನಿನಗೆಕೊಟ್ಟರೆ ಇದರಿಂದ ನಿನಗೆ ಭಯವು ಬರಲಾರದು ; ಒಂದು ಮುಹೂರ್ತವು ಇಲ್ಲಿ ನಿಲ್ಲು ; ಬ್ರಹ್ಮದೇವನಿಗೆ ಸಮಾನನಾದ ಶುಕ್ರಾಚಾರ್ಯನನ್ನು ಇಲ್ಲಿಗೆ ಕರೆಯಿಸುತಲಿದ್ದೇನೆ” ಎಂದು ತನ್ನ ದಾದಿಯನ್ನುಕರೆದು “ನಾನು ನಹುಷನಮಗನಾದ ಯಯಾತಿರಾಯನನ್ನು ಸ್ವಯಂವರದಿಂದ ವರಿಶಿದ್ದೇನೆಯೆಂದು ಅರಿಕೆಮಾಡಿ ಆ ಮಹಾತ್ಮನನ್ನು ಇಲ್ಲಿಗೆ ಕರೆದು ಬಾ” ಅಂದಳು.

ಆ ದಾದಿಯು ಅದೇ ಪ್ರಕಾರಕ್ಕೆ ತ್ವರಿತಗಮನದಿಂದ ಶುಕ್ರನಸನ್ನಿಧಿಗೆ ಹೋಗಿ ಆ ವೃತ್ತಾಂತವನ್ನು ಹೇಳಲು ಶುಕ್ರಾಚಾರ್ಯನು ಆ ಕ್ಷಣದಲ್ಲೇ ಆ ವನಕ್ಕೆ ಬಂದನು. ಯಯಾತಿರಾಯನು ಆ ಮಹಾನುಭಾವನನ್ನು ಕಂಡು ಆತನ ಪಾದಂಗಳಿಗೆ ನಮಸ್ಕರಿಸಿ ಕೈಮುಗಿದು ನಿಂತಿದ್ದನು. ಆ ಸಮಯದಲ್ಲಿ ದೇವಯಾನಿಯು ತನ್ನ ತಂದೆಯನ್ನು ಕಂಡು “ಈ ರಾ

ಯೂ ನಹುಷನ ಮಗನಾದ ಯಯಾತಿ ನರೇಂದ್ರನು ; ಈತನು ಮೊದಲೊಂದು ದಿವಸದಲ್ಲಿ ನಾನು ಹಾಳುಭಾವಿಯಲ್ಲಿ ಬಿದ್ದಿದ್ದಲ್ಲಿ ನನ್ನ ಹಸ್ತವನ್ನು ಹಿಡಿದು ತೆಗದು ಧಡದಲ್ಲಿರಿಸಿ ನನ್ನ ದುರ್ದಶೆಯನ್ನು ಪರಿಹರಿಸಿದವನಾದ್ದರಿಂದ ಈತನೇ ನನಗೆ ಪತಿಯೆಂದೆಣಿಸಿದ್ದೇನೆ; ಈ ಅರ್ಥಕ್ಕೆ ಸಮ್ಮತಿಸಬೇಕು ” ಎಂದು ಆತನ ಚರಣಗಳಿಗೆ ನಮಸ್ಕರಿಸಿದಳು.

ಶುಕ್ರಾಚಾರ್ಯನು “ಧರ್ಮಮಾರ್ಗವು ಬೇರೊಂದು ತೆರದಿಂದಿರುವಾಗೆ ನಿನ್ನ ಮನೋರಥವು ಪ್ರತ್ಯೇಕ ಮಾರ್ಗದಲ್ಲಿ ಪ್ರವರ್ತಿಸುತಲಿದೆ ; ಬೃಹಸ್ಪತಿ ಕುಮಾರನಾದ ಕಚನ ಶಾಪವು ಯಾಕೆ ನಟಿಯಾದೀತು ! ಈತನನ್ನು ವರಿಸುವದಕ್ಕೆ ನಾನೂ ಸಮ್ಮತಿಸಿದ್ದೇನೆ” ಎಂದು ಯಯಾತಿಯನ್ನು ಕರದು “ಈ ಕನ್ನಿಕೆಯು ನಿನ್ನಲ್ಲಿ ಪ್ರೀತಿಪಟ್ಟು ನಿನ್ನನ್ನೇ ವರಿಸಿದವಳಾದಕಾರಣ ಇವಳನ್ನು ಪಟ್ಟಮಹಿಷಿಯಾಗಿ ಮಾಡಿ ಮನ್ನಿಸು ; ಕ್ಷತ್ರಿಯನು ಬ್ರಾಹ್ಮಣನ ಕನ್ಯೆಯನ್ನು ಬಲವಂತದಿಂದ ಬಯಸಿದರೆ ಅದರಿಂದ ವರ್ಣಸಂಕರದೋಷವು ಸಂಭವಿಸುವದು ; ನಾವೇ ಒಡಂಬಟ್ಟು ಕೊಟ್ಟದ್ದರಿಂದ ನಿನಗೆ ದೋಷವಿಲ್ಲಾ ” ಅಂದನು.

ಯಯಾತಿಯು “ವರ್ಣಸಂಕರ ದೋಷ ಬರುತ್ತದೆಂದು ಮದುವೆಯಾಗುವದಕ್ಕೆ ಭಯಪಡುತಲಿದ್ದೇನೆ ” ಅಂದನು.

ಶುಕ್ರನು “ಅಂಥಾ ಅಧರ್ಮವು ನಿನಗೆ ಬರದಿರುವರೀತಿಗೆ ನಾನು ಅನುಗ್ರಹಿಸುತಲಿದ್ದೇನೆ; ನನ್ನ ಅನುಗ್ರಹದಿಂದ ನಿನಗೆ ವರ್ಣಸಂಕರ ದೋಷವು ಆಗಲಾರದು ; ಈ ಕಾರ್ಯದಿಂದ ನಿನಗೆ ಸಂತೋಷವಾದೀತು ; ವೃಷಪರ್ವನ ಮಗಳಾದ ಈ ಶರ್ಮಿಷ್ಠೆಯಲ್ಲಿ ರತಿಭೋಗ ಬಿಂದು ಹೊರ್ತಾಗಿ ದಾನಸನ್ಮಾನಾದಿಗಳಲ್ಲಿ ತಿಲಾಂಶವಾದರೂ ಕಡಮೆಯಿಲ್ಲದ ರೀತಿಗೆ ನಡಸು ” ಎಂದು ಕಟ್ಟುಮಾಡಿದನು.

ಯಯಾತಿಯು ಹಾಗೇ ಆಗಲೆಂದೊಪ್ಪಿಕೊಂಡು ಶಾಸ್ತ್ರೋಕ್ತಪ್ರಕಾರದಿಂದ ದೇವಯಾನಿಯನ್ನು ಮದುವೆಯಾಗಿ ಅಗ್ನಿಪುರುಷನಿಗೆ ಪ್ರದಕ್ಷಣ ನಮಸ್ಕಾರವನ್ನು ಮಾಡಿ ಶುಕ್ರನ ಅಪ್ಪಣೆಯಂ ತೆಗದುಕೊಂಡು ದೇವಯಾನಿಯೊಡನೆ ಸರ್ವಾಲಂಕಾರವಾದ ತನ್ನ ಪಟ್ಟಣಕ್ಕೆ ಹೋದನು.

೬ ನೇ ಅಧ್ಯಾಯ.

ಆ ಬಳಿಕ ಯಯಾತಿರಾಯನು ದೇವಯಾನಿಯನ್ನು ಅಂತಃಪುರದಲ್ಲಿರಿಸಿ ಅವಳ ಅನುಮತಿಯಿಂದ ಅಶೋಕ ವನಮಧ್ಯದಲ್ಲಿ ಒಂದು ಮನೆಯನ್ನು ಕಟ್ಟಿಸಿ ಸಾವಿರಮಂದಿ ದಾಸಿಯರೊಡನೆ ಶರ್ಮಿಷ್ಠೆಯನ್ನು ಅದರಲ್ಲಿರಿಸಿ ಅನ್ನಪಾನ ವಸ್ತ್ರಾಭರಣಗಳಲ್ಲಿ ತಿಲಾಂಶವಾದರು ಕಡಮೆಯಿಲ್ಲದ ರೀತಿಗೆ ಸಜ್ಜಿಟ್ಟು ದೇವಯಾನಿಯೊಡನೆ ಅನೇಕ ಸಂವತ್ಸರಗಳು ಕ್ರೀಡಿಸುತ್ತಿದ್ದನು. ದೇವಯಾನಿಯು ಯಯಾತಿರಾಯನೊಡನೆ ಕೂಡಿ ಅಶೋಕ ವನಕ್ಕೆ ಬಂದು ಆ ಶರ್ಮಿಷ್ಠೆಯೊಡನೆ ಕೂಡಿ ಬಹು ಪ್ರಕಾರವಾಗಿ ಸರಸ ಸಲ್ಲಾಪಗಳಿಂದ ಕಾಲವನ್ನು ಕಳದು ಶರ್ಮಿಷ್ಠೆಯನ್ನು ಅಲ್ಲೇ ಇರುವ ಹಾಗೆ ಕಟ್ಟುಮಾಡಿ ಆ ರಾಯನೊಡನೆ ಕೂಡಿ ತಿರಿಗಿ ಅಂತಃಪುರಕ್ಕೆ ಬರುತ್ತಿರುವಳು. ಈ ಪ್ರಕಾರದಿಂದ ಬಹುಕಾಲವು ದೇವತೆಗಳೋಪಾದಿಯಲ್ಲಿ ಅನೇಕ ಭೋಗಂಗಳನ್ನು ಪಡೆಯುತ್ತಿರಲು ಕೆಲವುಕಾಲಕ್ಕೆ ದೇವಯಾನಿಯು ಗರ್ಭವನ್ನು ಧರಿಸಿ ಒಬ್ಬ ಮಗನನ್ನು ಹೆತ್ತಳು.

ಆ ಬಳಿಕ ಒಂದು ದಿವಸದಲ್ಲಿ ಶರ್ಮಿಷ್ಠೆಯು ಋತು ಸ್ನಾನವನ್ನು ಮಾಡಿ ಸರ್ವಾಲಂಕಾರ ಭೂಷಿತೆಯಾಗಿ ಅಶೋಕ ವೃಕ್ಷದ ಕೆಳಗೆ ನಿಂತು ಪುಷ್ಪಿಸಿರುವ ಆ ಅಶೋಕ ವೃಕ್ಷದ ಒಂದು ಕೊಂಬನ್ನು ಕೈಯಿಂದ ಹಿಡಿದು ನಿಲುಗನ್ನಡಿಯಲ್ಲಿ ತನ್ನ ರೂಪ ಸೌಂದರ್ಯವನ್ನು ನೋಡುತ ಗಂಡನ ಸುಖವನ್ನು ಬಯಸಿ ದುಃಖದಿಂದಲೂ ಮೋಹದಿಂದಲೂ ಮನಸ್ಸಿನಲ್ಲಿ ತಲ್ಲಣಿಸಿ ಆ ಅಶೋಕ ವೃಕ್ಷವನ್ನು ಕರದು "ಎಲೈ ಅಶೋಕ ವೃಕ್ಷವೇ, ಶೋಕದಿಂದ ದಹಿಸಲ್ಪಟ್ಟ ಮನಸ್ಸುಳ್ಳ ನನಗೆ ಮನಸ್ಸಿನಲ್ಲಿ ಪ್ರೀತಿಯನ್ನು ಕಲ್ಪಿಸಿ ಶೋಕವನ್ನು ಪರಿಹರಿಸಿ ನಿನಗೆ ಅಶೋಕ ವೃಕ್ಷವೆಂಬ ನಾಮಧೇಯವನ್ನು ಯತಾರ್ಥವಾಗಿ ಮಾಡಿಕೋ" ಎಂದು ತನ್ನ ಮನಸ್ಸಿನಲ್ಲಿ "ನನಗೆ ಋತುಕಾಲವು ವದಗಿ ಯಿದೆ ; ಗಂಡನು ಯಿಲ್ಲದೆ ಹೋದನು ; ನಾನು ಎಲ್ಲಿ ಹೋಗಲಿ ! ಏನು ಮಾಡಲಿ ! ಯಾರಿಗೆ ಹೇಳಿಕೊಳ್ಳಲಿ ! ನನ್ನ ಜೊತೆಯವಳಾದ ದೇವಯಾನಿಯು ತನ್ನ ಸುಕೃತ ವಿಶೇಷದಿಂದ ಯಯಾತಿರಾಯನೊಡನೆ ಕೂಡಿ ಬಸುರಾಗಿ ಮಗನನ್ನು ಹೆತ್ತಳು ; ನನಗೂ ಆ ರೀತಿಯಲ್ಲಿ ಯಯಾತಿರಾಯನು ಗಂಡನಾದರೆ ನನ್ನ ಯವ್ವನವೂ ಮನೋರಥವೂ ಸಫಲವಾದಾವು; ಮಕ್ಕಳನ್ನು ಪಡೆಯಬ

ಹುದು ; ಈ ಸಮಯದಲ್ಲಿ ಆ ಯಯಾತಿರಾಯನು ನನ್ನ ಕಣ್ಣುಮುಂದೆ ನಿಂತರೆ ನನ್ನ ಮಂಡೆ ಕೂದಲುಗಳಿಂದ ಬಿಗಿದು ನನಗೆ ಗಂಡನಾಗಬೇಕೆಂದು ನಾನು ಪ್ರಾರ್ಥಿಸತಕ್ಕಂಥಾವಳು ” ಎಂದು ಮನಸ್ಸಿನಲ್ಲಿ ಚಿಂತಿಸುತಿದ್ದಳು.

ಆ ಸಮಯದಲ್ಲಿ ದೇವಯಾನೆಯು ಪುತ್ರಮೋಹದ ವ್ಯಾಸಂಗದಿಂದ ಅಂತಃಪುರದಲ್ಲಿರಲು ಯಯಾತಿರಾಯನು ಸ್ವೇಚ್ಛಾವಿಹಾರದಿಂದ ಆ ಅಶೋಕ ವನಮಧ್ಯಕ್ಕೆ ಬರಲು ಶರ್ಮಿಷ್ಠೆಯು ಆತನನ್ನು ಕಂಡು ಮುಗುಳು ನಗೆಯಿಂದ ಆ ರಾಯನ ಸನ್ನಿಧಿಗೆ ಬಂದು ಅಡ್ಡಬಿದ್ದು ಕೈಮುಗಿದು ನಿಂತು “ ಎಲೈ ರಾಯನೆ, ಚಂದ್ರನ ಮನೆಯೂ ಇಂದ್ರನ ಮನೆಯೂ ವಿಷ್ಣುವಿನ ಮನೆಯೂ ಯಮನ ಮನೆಯೂ ಕುಬೇರನ ಮನೆಯೂ ನಿನ್ನ ಮನೆಯೂ ಇತರಜನಗಳಿಗೆ ಹೋಗುವದಕ್ಕೆ ಅಶಕ್ಯವಾದ್ದರಿಂದ ನಿನ್ನನ್ನೇ ಬಯಸಿದ್ದೇನೆ ; ಅಂದ ಚಂದಗಳಲ್ಲಿಯೂ ಸೊಬಗುಗಳಲ್ಲಿಯೂ ನನ್ನ ಸ್ವರೂಪವು ನಿನಗೆ ತಿಳಿದಿರುವದ್ದರಿಂದ ಇಂಥಾ ಋತುಕಾಲವನ್ನು ಸಫಲವಾಗಿ ಮಾಡೆಂದು ಪ್ರಾರ್ಥಿಸುತ್ತಲಿದ್ದೇನೆ ” ಅಂದಳು.

ಯಯಾತಿರಾಯನು “ ನಿನ್ನ ಸೌಂದರ್ಯವನ್ನೂ ಅಂದ ಚಂದಗಳನ್ನೂ ನಡೆಯನ್ನೂ ಕುಲವನ್ನೂ ನಿನ್ನ ಶುಭಲಕ್ಷಣಗಳನ್ನೂ ತಿಳಿದಿದ್ದೇನೆ ; ನಿನ್ನ ಸೌಂದರ್ಯದಲ್ಲಿ ಸೂಜಿಮೊನೆಯಷ್ಟಾದರೂ ದೋಷವಿಲ್ಲೆಂದು ತಿಳಿದಿದ್ದೇನೆ ; ಮೊದಲು ನಿನ್ನನ್ನು ಕಂಡಾಗಲಿಂದ ನಿನ್ನಲ್ಲಿ ಮೋಹದಿಂದ ನಿನ್ನನ್ನೇ ಮನಸ್ಸಿನಲ್ಲಿ ಚಿಂತಿಸುತ್ತಲಿದ್ದೇನೆ ; ನಾನು ದೇವಯಾನೆಯನ್ನು ಮದುವೆಯಾಗುವಾಗ ನಿದ್ರೆ ಸಮಯದಲ್ಲಿ ರತಿಸೌಖ್ಯ ಹೊರತಾಗಿ ಅನ್ನಪಾನ ವಸ್ತ್ರಾಭರಣಗಳಲ್ಲಿ ತಿಲಾಂಶವಾದರು ಕಡಮೆಯಿಲ್ಲದ ರೀತಿಗೆ ನಿನ್ನನ್ನು ರಕ್ಷಿಸಿಕೊಂಡು ಬರಲು ಶುಕ್ರಾಚಾರ್ಯನು ಕಟ್ಟು ಮಾಡಿದ್ದರಿಂದ ನಿನ್ನನ್ನು ಮುಟ್ಟುವದಕ್ಕೆ ಭಯಪಡುತ್ತಲಿದ್ದೇನೆ ” ಅಂದನು.

ಶರ್ಮಿಷ್ಠೆಯು “ ಪರಿಹಾಸ ಸಮಯದಲ್ಲಿಯೂ ಸ್ತ್ರೀಜನರಲ್ಲಿಯೂ ವಿವಾಹ ಕಾಲದಲ್ಲಿಯೂ ಪ್ರಾಣಗಳು ಹೋಗುವ ಸಮಯದಲ್ಲಿಯೂ ಸರ್ವಸ್ವವು ಹೋಗುವ ಸಮಯದಲ್ಲಿಯೂ ಸಟೆಯಾಡಿದರೆ ದೋಷವಿಲ್ಲವೆಂದು

ದೊಡ್ಡವರು ಹೇಳುವರು ; ಸಾಕ್ಷಿಬಯಸಿ ಕೇಳುವಲ್ಲಿ ಪಕ್ಷಪಾತದಿಂದ ಧರ್ಮವನ್ನು ತಪ್ಪಿ ಹೇಳುವಂಥಾವನೂ ತನ್ನ ಕಾರ್ಯ ನಿಮಿತ್ತ ಸಟೆಯಾಡುವಂಥಾವನೂ ಸಟೆಯಾಡಿದ ದೋಷದಿಂದ ಕೆಟ್ಟುಹೋಗುವನು ; ಲೋಕದಲ್ಲಿ ಒಬ್ಬನಿಗೆ ಪ್ರಾಣಹಾನಿಯಾದರೂ ಅರ್ಥಹಾನಿಯಾದರೂ ಬಂದಲ್ಲಿ ಸಟೆಯಾಡಿದರೆ ದೋಷವಿಲ್ಲ; ಅದು ಸತ್ಯವೇಸರಿ " ಅಂದಳು.

ಆ ರಾಯನು " ಸಕಲ ಭೂತಗಳಲ್ಲಿ ಅರಸನು ಧರ್ಮಪ್ರವರ್ತಕನಾದ್ದರಿಂದ ಆತನು ಯಾವ ಕಾರ್ಯದಲ್ಲಾದರು ಸಟೆಯಾಡಬಾರದೆಂದು ತಿಳಿದು ನಾನು ಸಟೆಯಾಡುವದಿಲ್ಲ " ಅಂದನು.

ಶರ್ಮಿಷ್ಠೆಯು " ಲೋಕದಲ್ಲಿ ತನ್ನ ಪತಿಯೂ ಸಖಿಯ ಪತಿಯೂ ಈರ್ವರೂ ಪತಿಗಳೆನ್ನಿಸಿಕೊಳ್ಳುವರು ; ನನಗೆ ವಿವಾಹವಿಲ್ಲದಿರುವದರಿಂದಾ ಸಖಿ ಪತಿಯನ್ನೇ ನನ್ನ ಪತಿಯಾಗಿ ಭಾವಿಸಬೇಕು ; ನನಗೆ ಸಖಿಯಾದ ದೇವಯಾನೆಯು ನಿನ್ನನ್ನು ಮೊದಲೇ ವರಿಸಿರುವದ್ದರಿಂದ ಅವಳ ವಿವಾಹವೇ ನನ್ನ ವಿವಾಹವಾದ್ದರಿಂದ ನೀನು ನನ್ನನ್ನು ಪರಿಗ್ರಹಿಸಬಹುದು; ಹೆಂಡತಿಯು ಭೃತ್ಯನು ಮಗನು ಈ ಮೂರುಮಂದಿಯು ಧನಹೀನರೆನ್ನಿಸಿಕೊಳ್ಳುವರು ; ಅವರ ಧನವಷ್ಟೂ ಅವರು ಯಾರ ಅಧೀನವಾಗಿರುವರೋ ಅವರ ಧನವೆಂದು ಮಹಾತ್ಮರು ಹೇಳುವರು ; ನಾನು ದೇವಯಾನೆಯ ಧನವಾದ್ದರಿಂದ ಶುಕ್ರನು ದೇವಯಾನೆಯನ್ನು ಕೊಡುವಾಗಲೇ ನನ್ನನ್ನು ನಿನಗೆ ಕೊಟ್ಟನು. ಅದಲ್ಲದೆ ಶುಕ್ರಾಚಾರ್ಯನು ನನ್ನನ್ನು ಬಹುಮಾನವಾಗಿ ಪೋಷಿಸಿಕೊಂಡಿರಬೇಕೆಂದು ಕೊಟ್ಟದ್ದರಿಂದ ನಿನಗೆ ನನ್ನ ಮನೋರಥವು ಸಫಲವಾಗುವಹಾಗೆ ಮಾಡದಿದ್ದರೆ ನಿನಗೆ ಪೋಷಣವು ಹ್ಯಾಗೆ ಲಭಿಸೀತು ! ಚಿನ್ನ ಬೆಳ್ಳಿ ನವರತ್ನಗಳು ವಸ್ತ್ರಾಭರಣಗಳು ಹಸುಗಳು ಭೂಮಿಯು ಧಾನ್ಯವು ಮೊದಲಾದ ಅನೇಕ ವಸ್ತುಗಳನ್ನು ಯಾರೇನು ಕೇಳಿದರೂ ಅವರಿಗೆ ಅಷ್ಟನ್ನೂ ಕೊಡುತ್ತಲಿದ್ದೀ; ಅವು ಬಾಹ್ಯದಾನಂಗಳಲ್ಲದೆ ಶರೀರದಾನಂಗಳಲ್ಲಾ ; ಪುತ್ರದಾನವು ಆತ್ಮದಾನವು ಅಧಿಕ ದುರ್ಲಭವಾಗಿರುವವು ; ಶರೀರದಾನವೊಂದೇ ಸಕಲ ದಾನ ಫಲಗಳನ್ನು ಕೊಡುವಗು ; ಇದಲ್ಲದೆ ನೀನು ' ಕಾಲತ್ರಯಗಲ್ಲಿ ಯಾರ್ಯಾರು ಯೇನೇನು ಪದಾರ್ಥಗಳನ್ನು ಕೇಳುತಲಿದ್ದಾರೋ ಅವರಿಗೆ ಅಭೀಷ್ಟವನ್ನು

ಕೊಡುತಲಿದ್ದೇನೆ’ ಎಂದು ಬೀದಿ ಬೀದಿಯಲ್ಲೂ ಸಾರಿಸುತ್ತಿದ್ದೀ; ನನ್ನ ಮನೋರಥವನ್ನು ಸಫಲವಾಗಿ ಮಾಡದಿದ್ದರೆ ಅದು ವ್ಯರ್ಥವಾಗುವದು” ಅಂದಳು.

ಯಯಾತಿರಾಯನು “ನೀನು ಹೇಳುವರೀತಿಗೆ ಯಾರ್ಯಾರೇನೇನು ಬೇಡಿದರೂ ಆ ವಸ್ತುಗಳನ್ನು ಕೊಡುವದೆಂಬ ವ್ರತವು ದೃಢವಾಗಿಯುಂಟು; ನೀನು ನಿನಗೆ ಅಭೀಷ್ಟವಾದ ರಾಜ್ಯಧನಾಧಿಗಳಲ್ಲೇನು ಕೇಳಿದರೂ ಕೊಡುತಲಿದ್ದೇನೆ” ಅಂದನು.

ಶರ್ಮಿಷ್ಠೆಯು “ಕೇಳೈ ಯಯಾತಿರಾಯನೇ, ನನ್ನಲ್ಲಿ ಮಕ್ಕಳಿಲ್ಲದಿರುವದ್ದರಿಂದ ಬಂದಿರುವ ಅಧರ್ಮವನ್ನು ತೊಲಗಿಸಿ ಧರ್ಮವಿರುವ ರೀತಿಗೆ ದಯಮಾಡು; ಮಕ್ಕಳ ಅಭಿಲಾಷೆ ಹೊರ್ತಾಗಿ ನನ್ನ ಮನಸ್ಸಿನಲ್ಲಿ ಮತ್ತೊಂದು ಮನೋರಥವಿಲ್ಲ; ಲೋಕದಲ್ಲಿ ಮಕ್ಕಳ ಪಡೆಯುವದಕ್ಕಿಂತಲೂ ಮತ್ತೊಂದು ಮನೋರಥವುಂಟೆ! ನಿನ್ನ ದೆಶೆಯಿಂದ ಮಕ್ಕಳನ್ನು ಪಡದು ಉತ್ತಮವಾದ ಧರ್ಮವನ್ನೈದುವೆನು; ಮಕ್ಕಳನ್ನು ಪಡೆಯುವದಕ್ಕೂ ಮತ್ತು ಗಂಡನನ್ನು ಪೋಷಿಸುವದಕ್ಕೂ ಸ್ತ್ರೀಯರನ್ನು ಬ್ರಹ್ಮದೇವನು ಸೃಷ್ಟಿಸಿದನು; ಅಂಥಾ ಸ್ತ್ರೀಯರು ಗಂಡನೂ ಮಕ್ಕಳೂ ಇಲ್ಲದವರಾದರೆ ಅವರ ಜನ್ಮವು ವ್ಯರ್ಥವಾಗಿ ಉತ್ತಮಗತಿಯನ್ನೈದಲಾರದು; ದೇವಯಾನೆಗೆ ನೀನು ಪತಿಯು; ನಾನು ಅವಳಿಗೆ ಊಳಿಗದವಳಾದ್ದರಿಂದ ನಾವಿಬ್ಬರೂ ನಿನಗೆ ಪರಿಗ್ರಹಿಸುವದಕ್ಕೆ ಯೋಗ್ಯರಾದ್ದರಿಂದ ನನ್ನನ್ನು ಅವಶ್ಯಕವಾಗಿ ಪರಿಗ್ರಹಿಸಬೇಕು” ಅಂದಳು.

ಯಯಾತಿರಾಯನು ಅವಳ ವಚನವನ್ನು ಯಥಾರ್ಥವಾಗಿ ಎಣಿಸಿ ದೇವಯಾನೆ ಶುಕ್ರರಿಗೆ ಭಯಪಟ್ಟು ಅಧರ್ಮವು ಬೆರೆಯದಿರುವರೀತಿಗೆ ಧರ್ಮಮಾರ್ಗದಿಂದ ಶರ್ಮಿಷ್ಠೆಯನ್ನು ಮದುವೆಯಾಗುವದಕ್ಕೆಣಿಸಿ, ಋತ್ವಿಕ್ಕುಗಳನ್ನೂ ಆಚಾರ್ಯರನ್ನೂ ಪುರೋಹಿತರನ್ನೂ ಮಂತ್ರಿಜನಗಳನ್ನೂ ಕರಸಿ ಶಾಸ್ತ್ರೋಕ್ತಪ್ರಕಾರದಿಂದ ಶುಭನಕ್ಷತ್ರಯುಕ್ತವಾದ ಶುಭಮುಹೂರ್ತದಲ್ಲಿ ವೃಷಪರ್ವನ ಮಗಳನ್ನು ಮದುವೆಯಾಗಿ ಬ್ರಾಹ್ಮಣರಿಗೆ ಬಹು ದಕ್ಷಿಣಾದಾನಗಳನ್ನು ಮಾಡಿ ಶರ್ಮಿಷ್ಠೆಯೊಡನೆ ಕೂಡಿ ಅವಳ ಮನೋರಥವನ್ನು ಸಫಲವನ್ನು ಮಾಡಿ ಪರಸ್ಪರ ಪ್ರೇಮಗಳಿಂದ

ಸಂತೋಷಪಟ್ಟು ಶರ್ಮಿಷ್ಠೆಯನ್ನು ಆ ವನದಲ್ಲಿಯೇ ಯಥಾಪ್ರಕಾರವಾಗಿ ನಿಲ್ಲಿಸಿ ಅಂತಃಪುರಕ್ಕೆ ಹೋದನು. ಆ ಬಳಿಕ ಶರ್ಮಿಷ್ಠೆಯು ಯಯಾತಿರಾಯನ ಸಂಯೋಗದಿಂದ ಗರ್ಭವನ್ನು ಧರಿಸಿ ಉಚಿತ ಕಾಲದಲ್ಲಿ ದೇವಕುಮಾರನೋಪಾದಿಯುಳ್ಳಿರುವ ಒಬ್ಬ ಕುಮಾರನನ್ನು ಪಡೆದಳು.

---

೭ ನೇ ಅಧ್ಯಾಯ.

ಆ ಬಳಿಕ ಶುಕ್ಲಪಕ್ಷದ ಚಂದ್ರನು ನಕ್ಷತ್ರಗಳ ಸಮಾಗಮದಿಂದೊಪ್ಪುವ ಚಂದದಿಂದ ಯಯಾತಿರಾಯನು ಶರ್ಮಿಷ್ಠೆಯೊಡನೆ ಕೂಡಿ ಅಧಿಕವಾಗಿ ಸಂತೋಷಪಡುತ್ತ ಸಮಸ್ತಲೋಕಂಗಳಿಗೆ ಮಹಾಲಕ್ಷ್ಮಿಯೂ ಪೈರುಗಳಿಗೆ ಪರ್ಜನ್ಯನೂ ದೇವತೆಗಳಿಗೆ ಅಮೃತವೂ ಪ್ರಾರ್ಥನೀಯ್ಯಗಳಾದ ಚಂದದಿಂದ ಶರ್ಮಿಷ್ಠೆಯು ತನಗೆ ಬಹು ಕಾಲಕ್ಕೆ ದೊರಕಿದಳೆಂದು ಹಗೆ ಹಿಡಿದ ಹೆಣ್ಣು ಹಾವಿನ ಚಂದದಿಂದ ದೇವಯಾನಿಯು ಭಯಕ್ಕೆ ಕಾರಣವಾಗಿದ್ದಾಳೆಂದು ತನ್ನ ಮನಸ್ಸಿನಲ್ಲಿ ಚಿಂತಿಸಿ ದೇವಯಾನಿಯಲ್ಲಿರುವ ಪ್ರೀತಿಯನ್ನು ದಿನದಿನಕ್ಕೆ ಬಿಡುತಾಬಂದದ್ದರಿಂದ ಪ್ರೀತಿಯು ಕಮ್ಮಿಯಾಯಿತು.

ಆ ಬಳಿಕ ಕೆಲವು ಕಾಲಕ್ಕೆ ದೇವಯಾನಿಯು ಶರ್ಮಿಷ್ಠೆಗೆ ಕುಮಾರನಾದ ವೃತ್ತಾಂತವನ್ನು ಕೇಳಿ ಬಹುಪ್ರಕಾರವಾಗಿ ಮನಸ್ಸಿನಲ್ಲಿ ಚಿಂತಿಸಿ ಶರ್ಮಿಷ್ಠೆಯು ಇದ್ದವನಕ್ಕೆ ಬಂದು "ಮನ್ಮಥಸಿಗೆ ಬಳಗಾಗಿ ಏನು ಪಾಪವನ್ನು ಮಾಡಿದೆ?" ಎಂದು ಕೇಳಿದಳು.

ಶರ್ಮಿಷ್ಠೆಯು "ನನ್ನ ಮನಸ್ಸು ಪಾಪಕ್ಕೆ ಒಡಂಬಡುವದಿಲ್ಲ; ವೇದ ವೇದಾಂಗ ಪಾರಂಗತನಾಗಿ ಧರ್ಮಶೀಲನಾಗಿ ಬೇಡಿದ ವರವನ್ನು ಕೊಡುವದಕ್ಕೆ ಸಮರ್ಥನಾದ ಒಬ್ಬ ಮುನೀಶ್ವರನಿಲ್ಲಿಗೆ ಬಂದು ಮಕ್ಕಳನ್ನು ಬೇಡುತ್ತಲಿದ್ದ ನನ್ನನ್ನು ಅನುಗ್ರಹಿಸಿ ಈ ಕುಮಾರಕನನ್ನು ದಯಮಾಡಿ ಹೋದನೇ ಹೊರ್ತಾಗಿ ನಾನಂಥಾ ಪಾಪಕ್ಕೆ ಹೋಗುವವಳಲ್ಲ; ನನ್ನ ಹೃದಯವನ್ನು ನೀನೇ ಬಲ್ಲೆ" ಅಂದಳು.

ದೇವಯಾನಿಯು "ನೀನು ಹೇಳಿದ ಅರ್ಥವು ಸತ್ಯವೇ ಸರಿ; ಆ ಋಷಿ ಯಾರು? ಆತನ ಹೆಸರೇನು? ಅವನ ಗೋತ್ರವೇನು? ತಿಳುಹಿಸು" ಅಂದಳು.

ಶರ್ಮಿಷ್ಠೆಯು “ ಸೂರ್ಯನೋಪಾದಿಯಲ್ಲಿ ದೇದೀಪ್ಯಮಾನನಾದ ಆತನ ತೇಜೋವಿಶೇಷವನ್ನೂ ಆತನ ಮಹಾತ್ಮ್ಯವನ್ನೂ ಕಂಡು ನಾನು ಭಯಪಟ್ಟೆನೇ ಹೊರ್ತಾಗಿ ಗೋತ್ರವನ್ನೂ ಹೆಸರನ್ನೂ ಕೇಳದೇ ಹೋದೆನು ” ಅಂದಳು.

ದೇವಯಾನಿಯು “ ಅಂಥಾ ಮಹರ್ಷಿಯ ದೆಶೆಯಿಂದ ನೀನು ಕುಮಾರನಂ ಪಡೆದದ್ದು ಸತ್ಯವಾದರೆ ನಿನ್ನಲ್ಲಿ ಕೋಪವು ಹುಟ್ಟಲಾರದು ” ಎಂದು ಈರ್ವರೂ ಸಂಭಾಷಣೆಗಳನ್ನು ಮಾಡುತ್ತಲಿದ್ದು ದೇವಯಾನಿಯು ಶರ್ಮಿಷ್ಠೆಯ ವಾಕ್ಯವನ್ನು ಸತ್ಯವಾಗೆಣಿಸಿ ತನ್ನ ಅಂತಃಪುರಕ್ಕೆ ಹೋದಳು.

ಯಯಾತಿಯು ದೇವಯಾನಿಯಲ್ಲಿ ಇಂದ್ರೋಪೇಂದ್ರರ ಚಂದದಿಂದ ಯದು ತುರ್ವಸು ಎಂಬ ಇಬ್ಬರು ಕುಮಾರರನ್ನೂ ಶರ್ಮಿಷ್ಠೆಯಲ್ಲಿ ದೃಹ್ಯನು ಅನುವು ಪೂರು ಎಂಬ ಮೂರುಮಂದಿ ಕುಮಾರರನ್ನು ಪಡೆದನು.

ಆ ಬಳಿಕ ಕೆಲವು ಕಾಲವಾಗಲು ಯಯಾತಿರಾಯನೊಡನೆ ಕೂಡಿ ದೇವಯಾನಿಯು ವುದ್ಯಾನವನಕ್ಕೆ ಬಂದು ದೇವಕುಮಾರರೋಪಾದಿಯಲ್ಲಿರುವ ಮೂರುಮಂದಿ ಕುಮಾರರನ್ನು ಕಂಡು ಆಶ್ಚರ್ಯಪಟ್ಟು ಯಯಾತಿರಾಯನನ್ನು ಕುರಿತು “ ಅಲ್ಲಿ ಆಡುತ್ತಲಿರುವ ಮಕ್ಕಳು ಯಾರ ಕುಮಾರರು ? ರೂಪದಿಂದಲೂ ತೇಜೋ ವಿಶೇಷದಿಂದಲೂ ನಿನಗೆ ಸಮಾನರಾಗಿದ್ದಾರೆ ” ಎನಲು ಆ ರಾಯನು ಏನೂ ಹೇಳದೆ ಸುಮ್ಮನಿರಲು ಆ ಮಕ್ಕಳನ್ನು ಕರೆದು “ ನೀವು ಯಾರಮಕ್ಕಳು ?” ಎಂದು ಕೇಳಿದಳು.

ಆಬಾಲಕರನ್ನು ಸಾಕುವಂಥಾ ದಾದಿಯು “ ಎಲೈ ಮಕ್ಕಳಿರಾ, ದ್ವಿಜಶ್ರೇಷ್ಠನಾದ ನಿಮ್ಮ ತಂದೆಯನ್ನು ತಿಳುಹಿಸಿರಿ ” ಅಂದಳು.

ದೇವಯಾನಿಯು ಮತ್ತು ಆ ಕುಮಾರರನ್ನು ಕರೆದು “ ನಿಮ್ಮ ತಂದೆಯಾದ ದ್ವಿಜಶ್ರೇಷ್ಠನ ಗೋತ್ರವೇನು ? ಹೆಸರೇನು ? ಎಲ್ಲಿದ್ದಾನೆ ? ಇದಷ್ಟನ್ನೂ ಹೇಳೀ ; ಕೇಳಬೇಕು ” ಅಂದಳು.

ಆ ಕುಮಾರರು ಯಯಾತಿರಾಯನನ್ನು “ ನಮ್ಮ ತಂದೆ ಈತನು ” ಎಂದು ಬೆರಳುಗಳಿಂದ ತೋರಿಸಿ “ ಇವಳು ನಮ್ಮ ತಾಯಿ ” ಎಂದು ಶರ್ಮಿಷ್ಠೆಯನ್ನು ತೋರಿಸಿದರು.

ದೇವಯಾನಿಯು ಚನ್ನಾಗಿ ತಿಳಿಯುವದಕ್ಕೋಸ್ಕರ ಮತ್ತು ಆ ಚಿಕ್ಕವರನ್ನು ಏಕಾಂತಕ್ಕೆ ಕರೆದು ಕೇಳಲು ಆ ಬಾಲಕರು ಖುಷಿಯಾಗಿ

ದ್ವಿಜಶ್ರೇಷ್ಠನಾಗಿದ್ದ ಬ್ರಾಹ್ಮಣನು ತಮ್ಮ ತಂದೆಯು ಯೆಂದು ಹೇಳಿದೆ ಶರ್ಮಿಷ್ಠೆಯು ವಾಕ್ಯವು ಸತ್ಯವಲ್ಲವೆಂದು ನುಡಿದು ರಾಯುನ ಸಮೀಪಕ್ಕೆ ಬರಲು ಆ ರಾಯುನು ದೇವಯಾನಿಯ ಭಯದಿಂದ ಆ ಮಕ್ಕಳನ್ನು ಯಥಾಪ್ರಕಾರವಾಗಿ ಮನ್ನಿಸದಿರಲು ಆ ಅವರುನ್ನೆಳೆಗೆ ಕ್ಲೇಶಪಟ್ಟು ಆ ಬಾಲಕರು ತಮ್ಮ ತಾಯಿಯಾದ ಶರ್ಮಿಷ್ಠೆಯ ಸಮೀಪಕ್ಕೆ ಹೋದರು. ಶರ್ಮಿಷ್ಠೆಯು ಆ ಮಹಾರಾಯುನನ್ನು ಏನೂ ಅನ್ನಲಾರದೆ ಕೆಲವು ದೂರದಲ್ಲಿ ನಿಂತುಕೊಂಡು ಮುಖವನ್ನು ಬಗ್ಗಿಸಿಕೊಂಡಿದ್ದಳು.

ದೇವಯಾನಿಯು ಆ ಬಾಲಕರಿಗೆ ಅರಸನಲ್ಲಿರುವ ಸಲಿಗೆಯನ್ನು ಕಂಡು ಅವರು ಆತನ ಮಕ್ಕಳೇ ಯೆಂದು ನಿಶ್ಚೈಸಿದಳು ; ಆ ಅರಸನು ಕುಮಾರರ ದೆಶೆಯಿಂದ ಬಂದ ರಹಸ್ಯ ಭೇದಕ್ಕೆ ನಾಚಿಕೆಪಟ್ಟು ಮುಖವನ್ನು ಬಗ್ಗಿಸಿಕೊಂಡಿದ್ದನು. ಆ ಬಳಿಕ ದೇವಯಾನಿಯು ಶರ್ಮಿಷ್ಠೆಯ ಹಸ್ತವನ್ನು ತನ್ನ ಹಸ್ತದಿಂದ ಹಿಡಿದು “ನೀನು ಇಂಥಾ ಸಾಹಸವನ್ನು ಮಾಡಬಹುದೆ! ಈ ರಾಯನು ನಿನ್ನ ಬಲಾತ್ಕಾರದಿಂದಲೇ ನಿನ್ನ ವಶವಾದನೇ ಹೊರ್ತಾಗಿ ಮನಃಪೂರ್ವಕವಾಗಿ ಇಂಥಾ ಅಕೃತ್ಯಕ್ಕೆ ಎಂಥಾ ಸಮಯದಲ್ಲಾದರೂ ಒಡಂಬಡನೆಂದು ನಾನು ಬಲ್ಲೆನು ; ಈ ಸಂಶಯದಿಂಗಲೇ ಮೊದಲು ನಿನ್ನನ್ನು ‘ಕೇಳಿದ್ದಕ್ಕೆ ಒಬ್ಬ ಋಷಿಯ ಅನುಗ್ರಹದಿಂದ ಮಗನನ್ನು ಪಡದೆನು’ ಎಂದು ಹೇಳಿದೆಯಲ್ಲಾ!” ಎಂದು ಕೇಳಿದಳು.

ಶರ್ಮಿಷ್ಠೆಯು “ಆ ಮಾತು ಸಟೆಯಲ್ಲ ; ಈ ರಾಯನು ಋಷಿಯಲ್ಲವೆ! ನ್ಯಾಯವನ್ನೂ ಧರ್ಮವನ್ನೂ ತಪ್ಪದಿರುವ ಅರ್ಥದಲ್ಲಿ ಒಬ್ಬರಿಗೊಬ್ಬರು ಯಾಕೆ ಭಯಪಡಬೇಕು! ಅದು ಹ್ಯಾಗೆಂದರೆ, ಆ ಹೊತ್ತು ವನದಲ್ಲಿ ನೀನು ಈತನನ್ನು ವರಿಸಿದ ಸಮಯದಲ್ಲಿ ನನ್ನ ಮನಸ್ಸಿನಲ್ಲಿ ನಾನೂ ವರಿಸಿಧೆ ; ಅದಲ್ಲದೆ ಸಖೀಪತಿಯು ತನಗೆ ಪತಿಯಾಗಬಹುದೆಂಬುವದು ಧರ್ಮವಲ್ಲವೆ! ಯಾವ ಅಂಶಗಳಲ್ಲಿ ನೋಡಿದರೂ ನೀನು ನನಗೆ ಪೂಜ್ಯಳಾಗಿ ದೊಡ್ಡವಳಾಗಿ ಕುಲಶ್ರೇಷ್ಠೆಯಾದ್ದರಿಂದ ನಿನಗೆ ಆತನು ಪೂಜ್ಯನಾದ್ದರಿಂದ ನನಗೆ ಮತ್ತೂ ಪೂಜ್ಯನು; ನಿನ್ನ ತಂದೆ ಶುಕ್ರಾಚಾರ್ಯನು ನಿನ್ನನ್ನು ಈತನಿಗೆ ಕೊಡುವ ಸಮಯದಲ್ಲಿ ನನ್ನನ್ನೂ ನಿನ್ನೋಪಾದಿಯಲ್ಲಿ ಕೊಟ್ಟದ್ದರಿಂದ ಸಕಲಾಂಶಗಳಲ್ಲಿ ಪೂಜ್ಯನಾಗಿ ಪತಿಯಾದ ಈ ಮಹಾರಾಯನು ನಿನ್ನನ್ನು ಪೋಷಿಸುವರೀತಿಗೆ ನನ್ನನ್ನು ಪೋಷಿಸುತ್ತಲಿದ್ದಾನೆ” ಅಂದಳು.

ದೇವಯಾನಿಯು ಕೋಪಾವೇಶದಿಂದ ಅರಸನನ್ನು ಕುರಿತು "ಎಲೈ ರಾಯನೆ, ಈ ಶರ್ಮಿಷ್ಠೆಯೊಡನೆ ಮನಸ್ಸು ಬಂದ ಭೋಗಗಳನ್ನನುಭವಿಸು; ಇಂಥಾ ಅಪ್ರಿಯವನ್ನು ಮಾಡಿದಂಥಾ ಸ್ಥಳದಲ್ಲಿ ನಿಮಿಷಮಾತ್ರವಾದರೂ ನಿಲ್ಲಬಾರದು" ಎಂದು ನುಡಿದು ಆ ಶರ್ಮಿಷ್ಠೆಯನ್ನು ಕೋಪದಿಂದ ಬಿರಬಿರನೆ ನೋಡುತ್ತ ಸಕಲ ಭೂಷಣಗಳನ್ನೂ ತೆಗದಿಟ್ಟು ತಂದೆಯ ಮನೆಗೆ ಹೋಗುವದಕ್ಕೆ ಪ್ರಯಾಣವಾದಳು. ಯಯಾತಿರಾಯನು ಅವಳ ಬೆನ್ನಟ್ಟಿ ಭಯಸಂಭ್ರಮಗಳೊಡನೆ ಕೂಡಿ ಪ್ರಿಯವಾಕ್ಯಗಳಿಂದ ಎಷ್ಟು ಸಂತವಿಟ್ಟರೂ ಕೋಪದಿಂದ ಕೆಂಪಾದ ಕಣ್ಣುಗಳುಳ್ಳವಳಾಗಿ ಪ್ರತ್ಯುತ್ತರವನ್ನು ಕೊಡದೆ ಅತಿತ್ವರಿತಗಮನದಿಂದ ಶುಕ್ರನ ಸನ್ನಿಧಿಗೆ ಹೋಗಿ ಆತನ ಪಾದಂಗಳಿಗೆ ನಮಸ್ಕರಿಸಲು ಯಯಾತಿರಾಯನೂ ಶುಕ್ರನನ್ನು ಕಂಡು ನಮಸ್ಕರಿಸಿದನು.

ಆ ಬಳಿಕ ದೇವಯಾನಿಯು ಶುಕ್ರನನ್ನು ಕುರಿತು "ಅಧರ್ಮದಿಂದ ಧರ್ಮವು ಕೆಟ್ಟುಹೋಯಿತು; ಲೋಕದಲ್ಲಿಂಥಾ ವಿಪರೀತಗಳು ಹುಟ್ಟಿದವು; ಶರ್ಮಿಷ್ಠೆಯು ನನ್ನನ್ನು ಬಹುಪ್ರಕಾರಗಳಿಂದ ವಂಚಿಸಿ ಈ ರಾಯನ ದೆಸೆಯಿಂದ ಮೂರುಮಂದಿ ಮಕ್ಕಳನ್ನು ಪಡೆದಳು; ಮಂದಭಾಗ್ಯೆಯಾದ ನನಗಿಬ್ಬರೇ ಮಕ್ಕಳು ಹುಟ್ಟಿದರು; ಸಕಲ ಧರ್ಮಜ್ಞನಾದ ಯಯಾತಿರಾಯನು ಇಂಥಾ ಅಕೃತ್ಯಗಳನ್ನು ಮಾಡಿದನು" ಅಂದಳು.

ಶುಕ್ರನು "ಎಲೈ ಮಹಾರಾಯನೇ, ನೀನು ಧರ್ಮಜ್ಞನಾದರೂ ನಾನು ಮಾಡಿದ ಮರ್ಯಾದೆಯನ್ನು ಅತಿಕ್ರಮಿಸಿದ್ದರಿಂದ ಸಹಿಸುವದಕ್ಕೆ ಅಶಕ್ಯವಾದ ಮುದಿತನವು ಶೀಘ್ರವಾಗಿ ನಿನಗೆ ಪ್ರಾಪ್ತವಾಗಲಿ!" ಎಂದು ಶಪಿಸಿದನು.

ಯಯಾತಿರಾಯನು "ಶರ್ಮಿಷ್ಠೆಯು ಋತುಸ್ನಾನವನ್ನು ಮಾಡಿ ಅಚಂಚಲಭಕ್ತಿಯಿಂದ ಸಂತಾನಾರ್ಥವಾಗಿ ನನ್ನನ್ನು ಪ್ರಾರ್ಥಿಸಿದಳು; 'ಋತುಕಾಲದಲ್ಲಿ ಪುತ್ರಾರ್ಥವಾಗಿ ಬಯಸಿ ಬಂದ ಕನ್ಯಕೆಯನ್ನು ನಿರಾಕರಿಸಿದವನು ಭ್ರೂಣಹತ್ಯವನ್ನು ಮಾಡಿದಂಥಾವನಾಗುವನು' ಎಂದು ಧರ್ಮವಚನವಿರುವದ್ದರಿಂದ ಅವಳನ್ನು ಅಂಗೀಕರಿಸಿದೆನು; ಮತ್ತು 'ತನಗೆ ಅನುಭವಿಸುವದಕ್ಕೆ ಯೋಗ್ಯವಾಗಿರುವಂಥಾ ಕನ್ನಿಕೆಯು ಸಂತಾನಾರ್ಥವಾಗಿ ಬಂದು ರಹಸ್ಯದಲ್ಲಿ ಯಾಚಿಸಿದರೆ ಅವಳ ಅಭೀಷ್ಟವನ್ನು ನೆರ

ವೇರಿಸದವನು ಪಾತಕಂಗಳ್ಳೈದುವನು ' ಎಂದು ಧರ್ಮಶಾಸ್ತ್ರದಲ್ಲಿ ಪ್ರಸಿದ್ಧ ವಾದ್ದರಿಂದಲೂ ಯಾರೇನುಬೇಡಿದರೂ ಅದನ್ನು ಅವರಿಗೆ ಕೊಡುವದು ನನಗೆ ವ್ರತವಾದ್ದರಿಂದಲೂ ದೇವಯಾನಿಯನ್ನು ಕೊಡುವ ಸಮಯದಲ್ಲಿ ನೀವು ಶರ್ಮಿಷ್ಠೆಯನ್ನೂ ನನಗೆ ಕೊಟ್ಟದ್ದರಿಂದಲೂ ಆ ಕನ್ನಿಕೆಯನ್ನು ನಿರಾಕರಿಸಿದರೆ ಅಧರ್ಮವು ಬರುವದೆಂದೆಣಿಸಿ ಈ ಕಾರ್ಯವನ್ನು ಅಂಗೀಕರಿಸಿದೆನೇ ಹೊರ್ತಾಗಿ ಕಾಮಾತುರತ್ವದಿಂದ ಮಾಡಿದವನಲ್ಲ; ನೀವು ಈ ಕಾರ್ಯವನ್ನು ಕ್ಷಮಿಸಬೇಕು " ಅಂದನು.

ಶುಕ್ರನು " ನನ್ನ ಅಧೀನನಾಗಿರುವ ನೀನು ನನ್ನ ಮಾತುಗಳನ್ನು ಕೇಳದೆ ಇಂಥಾ ಮಿಥ್ಯಾಚಾರವನ್ನು ಮಾಡಿದ್ದರಿಂದ ನಿನ್ನನ್ನು ಮುದಿತನವು ಬಂದು ಬಾಧಿಸಲಿ ! " ಅಂದನು.

ಆಗ ಯಯಾತಿಯು ತನ್ನ ಯವ್ವನವನ್ನು ಬಿಟ್ಟು ಸಕಲ ವಿಕಾರಗಳಿಗೂ ಕಾರಣವಾದ ಮುದಿತನವನ್ನೈದಿ ಶುಕ್ರನನ್ನು ಕಂಡು " ನಿನ್ನ ಮಗಳಾದ ದೇವಯಾನಿಯಲ್ಲಿ ಪ್ರೀತಿಯು ಪೂರ್ಣವಾಗಿರುವದ್ದರಿಂದ ಇವಳಲ್ಲಿ ಅನೇಕ ವಿಧಂಗಳಾದ ಭೋಗಗಳನ್ನು ಅನುಭವಿಸುವದಕ್ಕೆ ಬಯಸಿದ್ದೇನೆ ; ಈ ಮುದಿತನವು ನನ್ನಲ್ಲಿ ಬಾರದಿರುವರೀತಿಗೆ ಅನುಗ್ರಹಿಸಬೇಕು " ಅಂದನು.

ಶುಕ್ರಾಚಾರ್ಯನು " ನನ್ನ ವಚನವು ಯಾವಾಗಲೂ ಸಟಿಯಾಗಲಾರದು ; ಹಾಗಾದರೂ ನಿನ್ನ ಮುದಿತನವನ್ನು ಮತ್ತೊಬ್ಬನು ತಕ್ಕೊಂಡರೆ ಅವನ ಯವ್ವನವು ನಿನಗೆ ಬರತಕ್ಕಂಥಾದ್ದು ; ಅದರಿಂದ ಭೋಗಗಳನ್ನು ಅನುಭವಿಸು " ಅಂದನು.

ಯಯಾತಿಯು " ನನ್ನ ಕುಮಾರರೊಳಗೆ ಈ ಮುದಿತನವನ್ನು ತಕ್ಕೊಳ್ಳುವದಕ್ಕೆ ಸಮರ್ಥನಾಗಿರುವಂಥಾವನು ಕೀರ್ತಿ ಸುಕೃತಂಗಳಿಗೆ ಪಾತ್ರನಾಗಿ ಸಾಂಬ್ರಾಜ್ಯವನ್ನು ಅನುಭವಿಸತಕ್ಕಂಥವನು ; ನೀನು ಈ ಅರ್ಥಕ್ಕೆ ಸಮ್ಮತಿಸಬೇಕು " ಅಂದನು.

ಶುಕ್ರಾಚಾರ್ಯನು " ನಿನ್ನ ಕುಮಾರರೊಳಗೆ ನಿನ್ನ ಮುದಿತನವನ್ನು ತಕ್ಕೊಂಡು ತನ್ನ ಯವ್ವನವನ್ನು ಕೊಡತಕ್ಕಂಥಾವನು ಆಯುಷ್ಮಂತನಾಗಿ ಕೀರ್ತಿವಂತನಾಗಿ ಪುತ್ರವಂತನಾಗಿ ನಿನ್ನ ರಾಜ್ಯದ ಸಾಮ್ರಾಜ್ಯಕ್ಕೆ ಯೋಗ್ಯನಾಗುವನು ; ನೀನು ಆ ಮಗನಿಗೆ ಮುದಿತನವನ್ನು ಕೊಡುವಂಥಾ ಸಮ

ಯದಲ್ಲಿ ನನ್ನನ್ನು ಮನಸ್ಸಿನಲ್ಲಿ ಸ್ಮರಿಸಿ ಅದರಿಂದ ನಿನ್ನ ಮುದಿತನವನ್ನು ತೊಲಗಿಸಿ ಆತನ ಯವ್ವನವನ್ನು ಪಡೆಯುತಕ್ಕಂಥಾವನು!" ಎಂದು ಅನುಗ್ರಹಿಸಿದನು.

೮ನೇ ಅಧ್ಯಾಯ.

ಆ ಬಳಿಕ ಯಯಾತಿರಾಯನು ಶುಕ್ರಾಚಾರ್ಯನ ವಾಕ್ಯವನ್ನು ಕೇಳಿ ತಲ್ಲಣಿಸಿ ತನ್ನ ಪಟ್ಟಣಕ್ಕೆ ಹೋಗಿ ಮುದುಕನಾಗಿ ಬಾಧೆಪಡುತ್ತ ಯದುವೆಂಬ ತನ್ನ ಜೇಷ್ಠಪುತ್ರನನ್ನು ಕರದು "ನಿನ್ನ ತಾಯಿಯ ತಂದೆಯಾದ ಶುಕ್ರಾಚಾರ್ಯನ ಶಾಪದಿಂದ ಈ ಮುದಿತನವು ಪ್ರಾಪ್ತವಾಯಿತು; ನನಗೆ ಯವ್ವನ ಭೋಗದಲ್ಲಿ ಇಚ್ಛೆಯಿದೆ; ನಿನ್ನ ಯವ್ವನವನ್ನು ನನಗೆ ಕೊಟ್ಟು ನನ್ನ ಮುದಿತನವನ್ನು ನೀನು ಪರಿಗ್ರಹಿಸಬೇಕು; ಆ ಯವ್ವನವನ್ನು ನಾನು ಸಾವರ ವರುಷಗಳು ಅನುಭವಿಸಿ ನಿನಗೆ ತಿರಿಗಿ ಕೊಡುತಲಿದ್ದೇನೆ; ಈ ಮುದಿತನವನ್ನೂ ದೌರ್ಬಲ್ಯವನ್ನೂ ತಿರಿಗಿ ನಾನೇ ಪರಿಗ್ರಹಿಸುತಲಿದ್ದೇನೆ" ಅಂದನು.

ಯದುವು "ಲೋಕದಲ್ಲಿ ಮುದಿತನ ಬಂದವನಿಗೆ ತಲೆ ಗಡ್ಡ ಮೀಸೆಗಳು ನರತು ತೊಗಲು ಜೋಲಾಡಿ ಬಲ ಕ್ಷೀಣವಾಗಿ ಶರೀರವು ಕೃಶವಾಗಿ ನೋಡುವವರಿಗೆ ಹೇಸಿಗೆ ಹುಟ್ಟಿಸುವದರಿಂದ ಅವನನ್ನು ಲೋಕದಲ್ಲಿರುವ ಜನರು ನಿರಾಕರಿಸುವರು; ಇಂಥಾ ಕಷ್ಟಕೋಟಲೆಗಳಿಗೆ ಕಾರಣವಾದ ಮುದಿತನವನ್ನು ಪರಿಗ್ರಹಿಸುವದಕ್ಕೆ ನನಗೆ ತೀರದು" ಅಂದನು.

ಯಯಾತಿರಾಯನು ಕೋಪಿಸಿಕೊಂಡು "ನೀನು ನನ್ನ ಮಗನಾಗಿದ್ದರೂ ನನಗೆ ಯುವ್ವನವನ್ನು ಕೊಡದಿದ್ದದ್ದರಿಂದ ನೀನೂ ನಿನ್ನ ವಂಶದಲ್ಲಿ ಹುಟ್ಟಿದವರೂ ರಾಜ್ಯವನ್ನಾಳುವದಕ್ಕೆ ಯೋಗ್ಯರಾಗದೆ ಹೋಗಲಿ!" ಎಂದು ಶಪಿಸಿ ತುರ್ವಸುಯೆಂಬ ಮಗನನ್ನು ಕರದು ಆ ವೃತ್ತಾಂತವನ್ನು ಹೇಳಿದನು.

ತುರ್ವಸುವು "ಕಾಮಭೋಗಗಳನ್ನು ಕೆಡಿಸಿ ಬಲರೂಪಗಳನ್ನು ಪರಿಹರಿಸಿ ಬುದ್ಧಿ ಶಕ್ತಿಗಳನ್ನು ಹೋಗಲಾಡಿಸುವ ಮುದಿತನವು ಬೇಡಾ" ಅಂದನು.

ಯಯಾತಿಯು "ಹೀಗೆ ನನ್ನ ವಾಕ್ಯವನ್ನು ನಿರಾಕರಿಸಿದ್ದರಿಂದ ನಿನ್ನ ಅಭೀಷ್ಟವು ಆಗದೆ ನೀನು ನೀಚವ್ಯಾಪಾರಗಳಿಂದ ಬದುಕುವಂಥಾವರಲ್ಲಿಯೂ ಸಂಕರಜಾತಿಗಳಲ್ಲಿಯೂ ವಿಪರೀತಧರ್ಮಗಳನ್ನು ಮಾಡುವ ಮ್ಲೇಛರಲ್ಲಿಯೂ ಪಶು ಜಾತಿಗಳಲ್ಲಿ ನಡೆಯುವದರೋಪಾದಿಯಲ್ಲಿ ವಾವೆ ವರ್ತನೆಗಳನ್ನು ತಪ್ಪಿ ನಡೆಯುವಂಥಾ ಬೇಡರು ಬೆಸ್ತರು ಮೊದಲಾದ ನೀಚ ಜಾತಿಗಳಲ್ಲಿಯೂ ಬೆರದು ಅವರಿಗೆ ಧೊರೆಯಾಗಲಿ! ನಿನ್ನ ವಂಶದಲ್ಲಿ ಹುಟ್ಟಿದವರೂ ಹಾಗೆ ಆಗಲಿ!" ಎಂದು ಶಪಿಸಿ ಶರ್ಮಿಷ್ಠೆಯ ಚೊಚ್ಚಿಲ ಮಗನಾದ ದೃಹ್ಯನನ್ನು ಕರದು ಅದೇರೀತಿಯಲ್ಲಿ ಆತನನ್ನು ಕೇಳಿದನು.

ದೃಹ್ಯನು "ಮುದುಕನಾದವನು ಶಿಶುವಿನ ಛಂದದಿಂದ ಅಶುಚಿಯಾಗಿ ಅನ್ನವನ್ನು ಭಕ್ಷಿಸುವನೇ ಹೊರ್ತಾಗಿ ಕಾಲವರಿತು ಹೋಮಾದಿ ಕೃತ್ಯಗಳನ್ನು ಆಚರಿಸುವದಕ್ಕೆ ಸಮರ್ಥನಾಗನು; ಅಂಥಾ ಮುದಿತನವನ್ನು ಪರಿಗ್ರಹಿಸುವದಕ್ಕೆ ನನಗೆ ಮನಸ್ಸಿಲ್ಲ" ಅಂದನು.

ಯಯಾತಿಯು "ನೀನು ಮುದಿತನದಲ್ಲಿದ್ದ ದೋಷಗಳನ್ನು ವಿವರಿಶಿದ್ದರಿಂದ ಆ ಮುದಿತನದ ದೋಷಗಳು ನಿನಗೆ ಯವ್ವನ ಕಾಲದಲ್ಲೇ ಬರಲಿ! ನಿನ್ನವಂಶದಲ್ಲಿ ಹುಟ್ಟಿದವರಷ್ಟೂ ಯವ್ವನದಲ್ಲೇ ನಾಶವನ್ನೈದಲಿ! ನೀನು ಅಗ್ನಿ ಶಿಶ್ರೂಷಾರಹಿತನಾಗಿ ಹೋಗು!" ಎಂದು ಶಪಿಸಿ ಅನುವೆಂಬ ಕುಮಾರನನ್ನು ಕರದು ಹಾಗೇ ಕೇಳಿದನು.

ಅನುವು "ಮುದುಕನಾದವನು ಆನೆಯನ್ನೂ ಕುದುರೆಯನ್ನೂ ರಥವನ್ನೂ ಏರುವದಕ್ಕೆ ಸಮರ್ಥನಾಗಲಾರನು; ಸಿಹ್ಮಾಸನದಲ್ಲಿ ದೃಢವಾಗಿ ಕುಳಿತುಕೊಳ್ಳಲಾರನು; ಸ್ಪಷ್ಟವಾಗಿ ಮಾತುಗಳನ್ನಾಡಲಾರನು; ಇಂಥಾ ಮುದಿತನವು ನನ್ನ ಮನಸ್ಸಿಗೊಪ್ಪುವದಿಲ್ಲ" ಅಂದನು.

ಯಯಾತ್ರಿಯು "ನನ್ನ ಮಾತನ್ನು ಮೀರಿದ್ದರಿಂದ ರಥ ಗಜಾಶ್ವಗಳು ಬಂಟೆ ಕತ್ತೆ ಯೆತ್ತುಗಳು ಪಲಕ್ಕಿ ಭಂಡಿಗಳು ಮೊದಲಾದ ವಾಹನಗಳನ್ನೇರಿ ನಡಿಯುವಂಥಾ ಮಾರ್ಗವಿಲ್ಲದೆ ನಿನ್ನದೇಶವು ಕಲ್ಲು ಮುಳ್ಳು ಹಳ್ಳತಿಟ್ಟುಗಳೊಡನೆ ಕೂಡಿರುವ ಅಡವಿಯಾಗಿ ಹೋಗಲಿ! ನೀನು ಸಂಪಾದಿಸಿದ ವಾಹನಗಳಷ್ಟೂ ಆಕಸ್ಮಿಕವಾಗಿ ಕೆಟ್ಟುಹೋಗಲೀ" ಎಂದು ಶಪಿಸಿದನು.

ಈ ಪ್ರಕಾರವಾಗಿ ನಾಲ್ಕುಮಂದಿ ಕುಮಾರಕರಿಂದ ನಿರಾಕರಿಸಲ್ಪಟ್ಟವನಾಗಿ ಅವರನ್ನು ಶಪಿಸಿ ಕೆಲವುಕಾಲ ಮನಸ್ಸಿನಲ್ಲಿ ಚಿಂತಿಸಿ ಪೂರುವು

ತನ್ನ ವಾಕ್ಯವನ್ನು ಅತಿಕ್ರಮಿಸನೆಂದು ನಿಶ್ಚೈಸಿ ಅವನಿದ್ದಕಡೆಗೆ ಹೋಗಿ ಆತನೊಡನೆ ಆ ವೃತ್ತಾಂತವನ್ನು ಹೇಳಿದನು.

ಪೂರುವು ವಿನಯಪೂರ್ವಕವಾಗಿ "ನೀನು ಹೇಳಿದರೀತಿಗೆ ನಡದು ಕೊಳ್ಳುತಲಿದ್ದೇನೆ; ಪುಣ್ಯಪ್ರದವಾಗಿ ಸ್ವರ್ಗ ಸೌಖ್ಯವನ್ನು ಕೊಡುವಂ ಥಾದ್ದಾಗಿ ಆಯುಸ್ಸನ್ನು ಕೊಡುವಂಥಾ ಗುರುವಚನವನ್ನತಿಕ್ರಮಿಸುವಂ ಥಾವನನುಂಟೆ! ಇಂದ್ರನು ಗುರುವಿನ ಅನುಗ್ರಹದಿಂದಲೇ ಮೂರುಲೋಕ ಗಳಿಗಧಿಪತಿಯಾದನು; ಗುರುವು ಅನುಗ್ರಹಿಸಿದರೆ ಸಕಲಾಭೀಷ್ಟಗಳು ಲಭಿಸುವದ್ದರಿಂದ ನಿನ್ನ ಮುದಿತನವನ್ನು ಪಾಪಸ್ವರೂಪವಾದ ದೌರ್ಬಲ ದೊಡನೆ ನಾನು ಪರಿಗ್ರಹಿಸುತಲಿದ್ದೇನೆ; ಸಾವಿರ ವರುಷಗಳೆಂದು ಮಿತಿ ಯಾತಕ್ಕೆ! ಎಷ್ಟುಕಾಲ ಅನುಭವಿಸಬೇಕೋ ಅಷ್ಟುಕಾಲವೂ ಅಭೀಷ್ಟ ಭೋಗಂಗಳನ್ನನುಭವಿಸು; ನಿನ್ನ ಮುದಿತನವು ವಿಕಾರರೂಪವು ಇವ ಷ್ಟನ್ನು ನಾನು ಧರಿಸುತ್ತಲಿದ್ದೇನೆ; ನನ್ನ ಯವ್ವನವನ್ನು ನೀನು ಅವ ಶ್ಯವಾಗಿ ಪರಿಗ್ರಹಿಸಬೇಕು" ಅಂದನು.

ಯಯಾತಿರಾಯನು "ನೀನು ಹೇಳಿದ ವಾಕ್ಯವನ್ನು ಕೇಳಿ ಬಹು ಸಂತೋಷಪಡುತ್ತೇನೆ; ನಿನ್ನವಂಶದಲ್ಲಿ ಹುಟ್ಟಿದವರು ಸಾಮ್ರಾಜ್ಯವನ್ನನು ಭವಿಸುತ ಸಕಲ ಮನೋರಥಂಗಳನ್ನೈದಲಿ!" ಎಂದು ತನ್ನ ಮನಸ್ಸಿನಲ್ಲಿ ಶುಕ್ರಾಚಾರ್ಯನಂ ಸ್ಮರಿಸಿ ತನ್ನಮುದಿತನವನ್ನು ಪೂರುವಿನಲ್ಲಿರಿಸಿದನು.

ಪೂರುವಿನ ಯವ್ವನವನ್ನು ತಾನು ತಕ್ಕೊಂಡು ರೂಪುಲಾವಣ್ಯ ಸಂಪನ್ನನಾಗಿ ಮನಸ್ಸಿನಲ್ಲಿ ಸಂತೋಷಪಟ್ಟು ಕಾಲಕ್ಕೂ ಉತ್ಸಾಹಕ್ಕೂ ಸೌಖ್ಯಕ್ಕೂ ಅನುಗುಣ್ಯನಾಗಿರುವ ತನಗೆ ಬೇಕಾಗಿರುವ ಭೋಗಗಳನ್ನು ಅನುಭವಿಸಿ ಹವ್ಯಗಳಿಂದ ದೇವತೆಗಳನ್ನೂ ಕವ್ಯಗಳಿಂದ ಪಿತೃದೇವತೆಗಳ ನ್ನೂ—ದೀನರನ್ನೂ ಅನಾಥರನ್ನೂ ದರಿದ್ರರನ್ನೂ ವೃದ್ಧರನ್ನೂ ಕುರುಡ ರನ್ನೂ ಕುಂಟರನ್ನೂ ಅಭಿಷ್ಟದಾನಗಳಿಂದಲೂ—ಅನ್ನಪಾನಗಳಿಂದ ಅತಿ ಥಿ ಜನರನ್ನೂ ಪಶುಪಾಲನದಿಂದ ವೈಶ್ಯರನ್ನೂ ದಯಾತಿಶಯದಿಂದ ಶೂದ್ರ ರನ್ನು ಸ್ವಧರ್ಮಾಚಾರಗಳಿಂದ ಪ್ರಜೆಗಳನ್ನೂ ನಿಗ್ರಹದಿಂದ ಚೋರರ ನ್ನೂ ಮರ್ಯಾದೆ ತಪ್ಪದ ರೀತಿಗೆ ಪರಿಪಾಲಿಸುತ್ತ ಎರಡನೇ ದೇವೇಂದ್ರನೋ ಪಾದಿಯಲ್ಲಿ ಭೂಮಂಡಲವನ್ನು ಸಂರಕ್ಷಿಸುತ್ತಿದ್ದನು.

೯ನೇ ಅಧ್ಯಾಯ.

ಒಂದು ಕಾಲದಲ್ಲಿ ಧರ್ಮಸ್ವರೂಪನಾದ ಯಮನು ತಪಸ್ಸುಮಾಡುವ ವಿಶ್ವಾಮಿತ್ರನನ್ನು ಪರೀಕ್ಷಿಸುವದಕ್ಕೋಸ್ಕರ ಆತನ ಆಶ್ರಮಕ್ಕೆ ಹಸಿವಿನಿಂದ ಭೋಜನವನ್ನು ಮಾಡಬೇಕೆಂದು ವಸಿಷ್ಠನವೇಷದಿಂದ ಬರಲು ಆ ವಿಶ್ವಾಮಿತ್ರನು ಸಂಭ್ರಮದಿಂದ ಪರಮಾನ್ನವನ್ನು ಪಾಕಮಾಡಿಕೊಂಡು ಬರುವಷ್ಟರೊಳಗೆ ಅಲ್ಲಿದ್ದ ಇತರ ಮುನೀಶ್ವರರು ತಂದುಕೊಟ್ಟ ಅನ್ನವನ್ನು ಊಟಮಾಡಿದನು. ವಿಶ್ವಾಮಿತ್ರನು ಬಿಸಿಯಾಗಿರುವ ಪರಮಾನ್ನವನ್ನು ತೆಗದುಕೊಂಡುಬಂದು "ಎಲೈ ಮಹಾತ್ಮನೆ, ಊಟಮಾಡು". ಅಂದನು.

ಆತನು "ಹಸಿವಿನಿಂದ ನಾನು ಕೇಳಲು ಇಲ್ಲಿರುವ ಋಷೀಶ್ವರರು ತಂದುಕೊಟ್ಟ ಅನ್ನವನ್ನು ಊಟಮಾಡಿದೆನು; ಪುನಃ ನಾನು ಬಂದು ಈ ಅನ್ನವನ್ನು ಊಟಮಾಡುತ್ತೇನೆ" ಎಂದು ನುಡಿದು ಹೊರಟುಹೋದನು.

ವಿಶ್ವಾಮಿತ್ರನು "ಮಹಾಪ್ರಸಾದ" ಎಂದು ಆ ಅನ್ನಪಾತ್ರವನ್ನು ಶಿರಸಾವಹಿಸಿ ಎರಡು ಕೈಗಳಿಂದಲೂ ಅಲುಗದಹಾಗೆ ಹಿಡಿದುಕೊಂಡು ಮೋಟುಮರದೋಪಾದಿಯಲ್ಲಿ ಚಲಿಸದೆ ವಾಯುಭಕ್ಷನಾಗಿ ನೂರುವರ್ಷ ಪರಿಯಂತವೂ ಆತನನ್ನು ನಿರೀಕ್ಷಿಸುತಿದ್ದನು. ಅಷ್ಟು ದಿವಸಗಳೂ ಗಾಲವನು ಆತನ ಸಂತೋಷವನ್ನು ಬಯಸಿ ಗುರುವಿಶ್ವಾಸದಿಂದ ಶುಶ್ರೂಷೆಯನ್ನು ಮಾಡುತ್ತಿದ್ದನು. ಬಳಿಕ ಆ ಕಪಟವಸಿಷ್ಠನು ತಾನು ಹೇಳಿದ ಪ್ರಕಾರದಿಂದ ವಿಶ್ವಾಮಿತ್ರನ ಸಮೀಪಕ್ಕೆ ಬಂದು ನೂತನವಾಗಿ ಪಕ್ವವಾದಹಾಗೆ ಬಿಸಿಯಾಗಿದ್ದ ಆತನುಕೊಟ್ಟ ಅನ್ನವನ್ನು ಊಟಮಾಡಿ ಆತನನ್ನು ಕರದು "ಸುಪ್ರೀತನಾದೆನು; ನಿನಗೆ ಕ್ಷತ್ರಿಯಭಾವವು ಹೋಗಿ ಬ್ರಾಹ್ಮಣ್ಯವುಂಟಾಯಿತು!" ಎಂದು ನುಡಿದು ಯಥೇಚ್ಛವಾಗಿ ಹೋದನು.

ಆಗ ವಿಶ್ವಾಮಿತ್ರನು ಸುಪ್ರೀತನಾಗಿ ತನಗೆ ಅಷ್ಟು ದಿವಸಗಳೂ ಶುಶ್ರೂಷೆಯನ್ನು ಮಾಡಿದ ತಪಸ್ವಿಯಾಗ ಗಾಲವನನ್ನು ನೋಡಿ ಸಂತೋಷಪಟ್ಟು "ನಿನ್ನ ಮನೋರಥವು ಸಿದ್ಧಿಯಾಗುವದು; ನೀನು ಯಥೇಚ್ಛವಾಗಿ ಹೋಗು" ಅಂದನು.

ಗಾಲವನು "ನಿಮಗೆ ಗುರುದಕ್ಷಿಣೆಯನ್ನು ಕೊಡುತ್ತೇನೆ; ಗುರುಗಳಿಗೆಬೇಕಾದ ದಕ್ಷಿಣೆಯನ್ನು ಕೊಟ್ಟರೆ ಕರ್ಮಸಿದ್ಧಿಯಾಗುವದು; ಹಾಗೆಕೊಟ್ಟ ದಕ್ಷಿಣೆಯು ಪರಲೋಕದಲ್ಲಿ ಫಲವನ್ನು ಕೊಡುವದು; ಯಾಗಗಳಲ್ಲಿ ಉಕ್ತವಾದ ದಕ್ಷಿಣೆಯನ್ನು ಕೊಟ್ಟರೇ ಆ ಯಾಗವು ಸ್ವರ್ಗಕ್ಕೆ ಸಾಧನವಾಗುವದು; ಆದ್ದರಿಂದ ನಿಮಗೆ ಬೇಕಾದ ದಕ್ಷಿಣೆಯನ್ನು ಕೊಡುವೆನು; ಕಟ್ಟುಮಾಡೀ" ಅಂದನು.

ಆ ಮುನಿಯು "ನೀನು ಬಹುಕಾಲ ಶುಶ್ರೂಷೆಯನ್ನು ಮಾಡಿ ಕಷ್ಟಪಟ್ಟವನಾದ್ದರಿಂದ ನೀನು ಕೊಡುವ ದಕ್ಷಿಣೆಯು ನಮಗೆ ಸಂತು; ಶ್ರಮೆಪಡಬೇಡ; ಹೋಗು ಹೋಗು" ಎಂದು ಬಾರಿಬಾರಿಗೂ ಪ್ರೀತಿಯಿಂದ ನುಡಿದನು.

ಗಾಲವನು "ತಮಗೆ ದಕ್ಷಿಣೆಗಾಗಿ ಏನುಕೊಡಲಿ? ತಮಗೆ ಏನು ಬೇಕಾದದ್ದು?" ಎಂದು ಬಹುಪ್ರಕಾರದಿಂದ ನಿರ್ಬಂಧಪಡಿಸಿದನು.

ವಿಶ್ವಾಮಿತ್ರನು ಸ್ವಲ್ಪವಾಗಿ ಕೋಪಿಸಿಕೊಂಡು "ಹಾಗಾದರೆ ನಾನು ಬೇಡಿದ ದಕ್ಷಿಣೆಯನ್ನು ಕೊಡುವೆಯಾ? ಕಪ್ಪಾಗಿರುವ ಒಂದು ಕಿವಿಯಿಂದಲೂ ಪೂರ್ಣಚಂದ್ರನೋಪಾದಿಯಲ್ಲಿ ಶುಭ್ರವಾದ ಮಿಕ್ಕಾದ ಅವಯವಗಳಿಂದಲೂ ಪ್ರಕಾಶಮಾನವಾದ ಎಂಟುನೂರು ಜಾತ್ಯಶ್ವಗಳನ್ನು ತಂದು ನನಗೆ ದಕ್ಷಿಣೆಯಾಗಿ ಕೊಡು, ತಡಮಾಡದೇ ಹೋಗು" ಅಂದನು.

ಆ ಬಳಿಕ ಗಾಲವನು ಎಂಟುನೂರು ಕುದುರೆಗಳನ್ನು ತರುವದಕ್ಕೋಸ್ಕರ ತನ್ನ ಗುರುವಾದ ವಿಶ್ವಾಮಿತ್ರನಿಂದ ಅಜ್ಞೆಯನ್ನು ತೆಗದುಕೊಂಡು ನಿಂತಠಾವಿನಲ್ಲಿ ನಿಲ್ಲದೆ ನಿದ್ರಾಹಾರಗಳಿಲ್ಲದೆ ಅಸ್ಥಿಚರ್ಮಾವಶಿಷ್ಟನಾಗಿ ಕೈಕಾಲುಗಳು ಬಾರದೆ ಮೆಲ್ಲಮೆಲ್ಲನೆ ನಡಿಯುತ್ತ ಶೋಕಾಕ್ರಾಂತನಾಗಿ ಅಹೋರಾತ್ರವೂ ಚಿಂತಿಸುತ್ತ "ಅಂಥಾ ಕುದುರೆಗಳು ಎಲ್ಲಿರುವವು! ಯಾರನ್ನು ಕೇಳಲಿ! ಮನುಷ್ಯಲೋಕದಲ್ಲಿ ಅಂಥಾ ಕುದುರೆಗಳು ಎಲ್ಲಿಯೂ ಸಿಕ್ಕಲಾರವು; ದೇವತೆಗಳನ್ನು ಯಾಚಿಸೋಣವೆಂದರೆ ಮುಂದೆ ನಾನು ಮಾಡಿದ ಅನೇಕ ಯಾಗಗಳಿಂದಲೂ ಪೂಜೆಗಳಿಂದಲೂ ಅವರು ಸುಪ್ರೀತರಾಗಿ 'ವರವನ್ನು ಬೇಡಿಕೋ' ಎನಲು ಆಗ ಬೇಡದೇ ಈಗ ಅವರನ್ನು ಹ್ಯಾಗೆ ಬೇಡಿಕೊಳ್ಳಲಿ! ಆದ್ದರಿಂದ ತ್ರಿಲೋಕೇಶ್ವರನಾಗಿಯೂ ದೇವ

ದೇವನಾಗಿಯೂ ಸುರಾಸುರರಿಗೆ ಇಷ್ಟಾರ್ಥಗಳನ್ನು ಕೊಡುವವನಾಗಿಯೂ ಸಕಲಾಂತರ್ಯಾಮಿಯಾಗಿಯೂ ಮಹಾಯೋಗಿಯಾಗಿಯೂ ನಾಶರಹಿತನಾಗಿಯೂ ಸಕಲದರಲ್ಲಿಯೂ ಪರಿಪೂರ್ಣನಾಗಿಯೂ ಇರುವ ವಾಸುದೇವನನ್ನು ಶರಣವನ್ನೈದಿ ಆತನ ದರ್ಶನವನ್ನು ಮಾಡುವದಕ್ಕೆ ಪ್ರಯತ್ನವನ್ನು ಮಾಡುವೆನು" ಎಂದು ಎಣಿಸಿದನು.

ಆಗ ವಿನತಾಪುತ್ರನಾದ ಗರುಡನು ಗಾಲವನಿಗೆ ಬಾಲ್ಯ ಮೊದಲುಗೊಂಡು ಸ್ನೇಹಿತನಾದ್ದರಿಂದ ಆತನಿಗೆ ಪ್ರಿಯವನ್ನು ಮಾಡಬೇಕೆಂದು ಬಂದು "ಎಲೈ ಗಾಲವ ಮುನೀಂದ್ರನೆ, ನನಗೆ ನಿನಗಿಂತಲೂ ಸ್ನೇಹಿತನಾದವನು ಯಾವನಿರುವನು ! ಆದ್ದರಿಂದ ಮಿತ್ರನಾದವನು ಐಶ್ವರ್ಯವಿರುವಾಗ ಆ ಐಶ್ವರ್ಯವನ್ನು ಸ್ನೇಹಿತನ ಅಧೀನಮಾಡಬೇಕು: ದೇವೇಂದ್ರನ ಅನುಜನಾದ ವಿಷ್ಣುವಿನಿಂದ ನನಗೆಬೇಕಾದ ಐಶ್ವರ್ಯ ವುಂಟಾಗಿರುವದು ; ಆ ನನ್ನ ಐಶ್ವರ್ಯವನ್ನು 'ನಿನಗೆ ಕೊಡುತ್ತೀನೆ' ಎಂದು ಮೊದಲೇ ನಾನು ಹೇಳಿದೇನೆ ; ಆ ಪ್ರಕಾರವೇ ಈಗ ನಿನಗೆ ಉಪಕಾರವನ್ನುಮಾಡಿ ನಿನ್ನನ್ನು ಸಂತೋಷಪಡಿಸುತ್ತೇನೆ ; ಹಾಗಲ್ಲದಿದ್ದರೆ ನೀನು ಎಲ್ಲಿಗೆ ಹೋಗಬೇಕೆಂದು ಅಪೇಕ್ಷಿಸುವೆಯೋ ಅಲ್ಲಿಗೆ ಬಹಳ ಜಾಗ್ರತೆಯಾಗಿ ನಿನ್ನನ್ನು ನಾನು ಕರದುಕೊಂಡು ಹೋಗುತ್ತೇನೆ" ಅಂದನು.

೧೦ ನೇ ಅಧ್ಯಾಯ.

ಆ ಬಳಿಕ ಗರುಡನ ವಾಕ್ಯಗಳನ್ನು ಕೇಳಿ ಗಾಲವನು "ಎಲೈ ವಿನತಾಪುತ್ರನೆ, ಪೂರ್ವದಿಕ್ಕು ಧರ್ಮಕ್ಕೆ ನೇತ್ರಸ್ಥಾನವಾಗಿಯೂ ಸತ್ಯಕ್ಕೆ ಆಶ್ರಯವಾಗಿಯೂ ದೇವತೆಗಳಿಗೆ ಇಷ್ಟಸಿದ್ಧಿಯನ್ನುಂಟುಮಾಡುವದಾಗಿಯೂ ಇರುವದೆಂದು ಹೇಳಲ್ಪಡುವದ್ದರಿಂದ ಸಮಸ್ತ ದೇವತೆಗಳಿಗೂ ಆಶ್ರಯವಾಗಿರುವ ಆ ದಿಕ್ಕನ್ನು ನೋಡುವದಕ್ಕೆ ಇಚ್ಛಯಿಸುತ್ತಲಿದ್ದೇನೆ ; ಅಲ್ಲಿಗೆ ನನ್ನನ್ನು ಕರದುಕೊಂಡು ಹೋಗು" ಅಂದನು.

ಗರುಡನು "ಹಾಗೇ ಆಗಲಿ ; ನನ್ನ ಭುಜದಮೇಲೆ ಏರಿಕೊಂಡು ಬಾ" ಎಂದು ನುಡಿದನು.

ಗಾಲವನು ಗರುಡನ ಭುಜವನ್ನೇರಿಕೊಂಡು “ಎಲೈ ಗರುಡನೆ, ವೇಗದಿಂದ ನಡೆಯುವ ನಿನ್ನ ಮುಖವು ಪ್ರಾತಃಕಾಲದ ಸೂರ್ಯಬಿಂಬವನ್ನನುಕರಿಸುತ್ತಲಿದೆ; ರೆಕ್ಕೆಗಳ ವೇಗದಿಂದ ಪರ್ವತ ವನ ಸಮುದ್ರಗಳೊಡಗೂಡಿದ ಭೂಮಂಡಲವನ್ನು ಎಳೆಯುವವನಂತೆ ಅಂತರಿಕ್ಷದಲ್ಲಿ ಹೋಗುತ್ತಲಿರುವ ನಿನ್ನ ಸಂಗಡಲೇ ಬೇರು ಸಹಿತವಾಗಿ ಕಿತ್ತುಕೊಂಡು ಬರುತ್ತಿರುವ ಮಹಾ ವೃಕ್ಷಗಳು ಸಾಗುಕಳುಹಿಸುವದಕ್ಕೆ ಬಂದ ಬಂಧುಜನಗಳಹಾಗೆ ಕಾಣಿಸುತ್ತವೆ; ಮತ್ತೂ ಜಲಜಾತುಗಳಿಂದ ಕೂಡಿರುವ ಸಮುದ್ರದ ಜಲವು ನಿನ್ನ ರೆಕ್ಕೆಗಳ ಗಾಳಿಯಿಂದ ಆಕಾಶಕ್ಕೆ ಹಾರುತ್ತಿರುವಂತೆ ಕಾಣುತ್ತಿದೆ; ತಿಮಿತಿಮಿಂಗಿಲ ಮೊದಲಾದ ನಾನಾವಿಧಗಳಾದ ಜಲಜಂತುಗಳು ನಿನ್ನ ವೇಗದಿಂದ ಪೀಡಿತಗಳಾಗಿ ಕಾಣಿಸುತ್ತಿವೆ; ಈ ಸಮುದ್ರದ ಮಹಾಧ್ವನಿಯಿಂದ ನನ್ನ ಕಿವಿಗಳು ಕಿವುಡಾದವು; ಕಣ್ಣುಗಳಿಗೆ ಏನೂ ಕಾಣಿಸುವದಿಲ್ಲ; ಇದಕ್ಕೆ ಕಾರಣವನ್ನು ಅರಿಯಲಾರದೇ ಇದ್ದೇನೆ; ಇನ್ನುಮೇಲೆ ನೀನು ಇಷ್ಟುವೇಗದಿಂದ ಹೋಗದೆ ಮೆಲ್ಲಮೆಲ್ಲಗೆ ಹೋಗು; ಹಾಗೆ ಮಾಡದೇ ಇದ್ದರೆ ನಿನಗೆ ಬ್ರಹ್ಮಹತ್ಯಾ ದೋಷ ಬರುವದು. ಸೂರ್ಯನೂ ದಿಕ್ಕುಗಳೂ ಸಹ ಕಾಣಿಸದೆ ಕತ್ತಲೆ ಕವಿದಿರುವಂತೆ ತೋರುವ ಆಕಾಶದಲ್ಲಿ ಮಣಿಗಳಂತೆ ಪ್ರಕಾಶಿಸುವ ನಿನ್ನ ಕಣ್ಣುಗಳು ಮಾತ್ರವೇ ನನ್ನ ಕಣ್ಣುಗಳಿಗೆ ಕಾಣಿಸುತ್ತಿರುವವೇ ಹೊರತಾಗಿ ನಮ್ಮಿಬ್ಬರ ಶರೀರಗಳೂ ಕಾಣಿಸುವದಿಲ್ಲ; ಈ ಮಹಾಸಮುದ್ರದ ಮಧ್ಯದಲ್ಲಿ ಮತ್ತು ಮತ್ತು ನೀರಿನಿಂದ ಹುಟ್ಟುವ ಬೆಂಕಿಯು ನನ್ನ ಕಣ್ಣುಗಳನ್ನು ಮುಚ್ಚಿಸುತ್ತಲಿದೆ; ಇನ್ನುಮೇಲೆ ತಿರಿಗಿ ಹೋಗುವದೇ ಲೇಸು; ಹಾಗಲ್ಲವೆಂದು ಮುಂದಕ್ಕೆ ಹೋದರೆ ನಮಗೆ ಪ್ರಯೋಜನವೇನೂ ಇಲ್ಲ; ಹೀಗೆ ವೇಗದಿಂದ ಹೋಗುತ್ತಲಿರುವ ನಿನ್ನ ಭುಜದಲ್ಲಿ ನಾನು ನಿಲ್ಲಲಾರೆನು; ಹಿಂದಕ್ಕೆ ತಿರುಗು. ಒಂದು ಕಿವಿ ಕಪ್ಪಾಗಿ ಚಂದ್ರನೋಪಾದಿಯಲ್ಲಿ ಬಿಳುಪಾದ ಎಂಟುನೂರು ಕುದುರೆಗಳನ್ನು ಗುರುಗಳಿಗೋಸ್ಕರ ಕೊಡುತ್ತೇನೆಯೆಂಬ ಮಾತು ನನ್ನ ಶರೀರಕ್ಕೆ ನಾಶವನ್ನುಂಟುಮಾಡುವದೇ ಹೊರತಾಗಿ ಆ ಕುದುರೆಗಳು ಬೇರೇ ದೊರೆಯಲಾರವು; ಈಗ ನಾನು ನಿನ್ನ ಸಂಗಡ ಬಂದದ್ದು ಪ್ರಾಣತ್ಯಾಗಕ್ಕೆ ಕಾರಣವಾದದ್ದೇ ಹೊರತಾಗಿ ಮತ್ತಾವ ಪ್ರಯೋಜನವೂ ಕಾಣಿಸಲಿಲ್ಲ; ಲೋಕದಲ್ಲಿ ನನಗೆ ಧನವನ್ನು ಕೊಡು

ವದಕ್ಕೆ ಸಮರ್ಥನಾದ ಮಿತ್ರನನ್ನು ಕಾಣೆನು ; ದ್ರವ್ಯವಿಲ್ಲದೆ ಕಾರ್ಯವ
ನ್ನು ಸಾಧಿಸುವದಕ್ಕೆ ಆಗುವದಿಲ್ಲ" ಎಂದು ಬಹುಪ್ರಕಾರದಿಂದ ದೀನವಾಗಿ
ಪ್ರಲಾಪಿಸುತ್ತಿದ್ದನು.

ಗರುಡನು "ಎಲೈ ಮುನಿಶ್ರೇಷ್ಠನೆ, ಗುರುಗಳ ನಿಮಿತ್ತವಾಗಿ
ಮಾಡಿದ ಪ್ರತಿಜ್ಞೆಯನ್ನು ಮರೆತು 'ಶರೀರತ್ಯಾಗವನ್ನು ಮಾಡುತ್ತೇನೆ'
ಎಂದು ಯಾತಕ್ಕೋಸ್ಕರ ನುಡಿಯುತ್ತೀ ; ನೀನು ಅಪೇಕ್ಷಿಸಿದಾಗ ಶರೀರ
ತ್ಯಾಗವನ್ನು ಮಾಡುವದಕ್ಕೆ ಆದೀತೆ ! ಈಗ ಅಂಥಾ ಕೆಟ್ಟಕಾಲವೇನೂ
ಬಂದಿಲ್ಲ. 'ಕಾಲಾತ್ಮಕನಾದ ಈಶ್ವರನೇ ಸಕಲಕ್ಕೂ ಕಾರಣಭೂತನಾದ
ನು' ಎಂಬುವದನ್ನು ನೀನೇ ನನಗೆ ಮೊದಲು ಹೇಳಿದೆಯಲ್ಲವೆ ! ಅನೇಕ
ವಾದ ಉಪಾಯಗಳಿಂದ ನಿನ್ನ ಕಾರ್ಯವು ಸಫಲವಾಗುವದು ; ಈ ಸಮು
ದ್ರದ ಮಧ್ಯದಲ್ಲಿ ಋಷಭವೆಂಬ ಪರ್ವತವು ಕಾಣಿಸುತ್ತಿರುವದು ; ಅಲ್ಲಿ ನಿಂ
ತು ಬೇಕಾದ ಆಹಾರವನ್ನು ತೆಗದುಕೊಂಡು ಶ್ರಮವನ್ನು ಪರಿಹರಿಸಿಕೊ ;
ಆ ಬಳಿಕ ಎಲ್ಲಿಗೆ ಬೇಕಾದರೂ ಹೋಗೋಣ" ಅಂದನು.

ಬಳಿಕ ಗರುತ್ಮಂತನೂ ಗಾಲವನೂ ಋಷಭ ಪರ್ವತದ ಶಿಖರದ
ಲ್ಲಿ ತಪಸ್ವಿನಿಯಾದ ಶಾಂಡಿಲಿಯೆಂಬ ಒಬ್ಬ ಬ್ರಾಹ್ಮಣಸ್ತ್ರೀಯನ್ನು ನೋ
ಡಿ ನಮಸ್ಕರಿಸಿ ಪೂಜಿಸಲು ಆಕೆಯು ಕುಶಲಪ್ರಶ್ನೆಯನ್ನು ಮಾಡಿ "ಕು
ಳಿತುಕೊಳ್ಳಿ" ಎಂದು ನುಡಿದಳು. ಅವರು ಯೋಗ್ಯವಾದ ಪೀಠಗಳಲ್ಲಿ
ಕುಳಿತುಕೊಂಡು ಬಹು ಪ್ರೀತಿಪೂರ್ವಕವಾಗಿ ಆವಳು ಕೊಟ್ಟ ಸಿದ್ಧಾನ್ನ
ವನ್ನು ಊಟಮಾಡಿ ಮುಹೂರ್ತಕಾಲ ನಿದ್ರೆಯು ಶ್ರಮ ಪರಿಹರಿಸಿಕೊಂ
ಡು ಅಲ್ಲಿಂದ ಹೊರಡಲುದ್ಯುಕ್ತರಾದ ಸಮಯದಲ್ಲಿ ಗರುಡನ ರಕ್ಕೆಗರಿ
ಗಳೆಲ್ಲವೂ ಉದುರಿಹೋದವು. ಆತನು ಮಾಂಸಪಿಂಡದೋಪಾದಿಯಲ್ಲಿರುವ
ತನ್ನ ಶರೀರವನ್ನು ನೋಡಿಕೊಂಡು ಚಿಂತಾಕ್ರಾಂತನಾಗಿರುವದನ್ನು ನೋಡಿ
ಗಾಲವನು ಚಿಂತಾಕ್ರಾಂತನಾಗಿ "ಎಲೈ ಗರುಡನೇ, ಮಹತ್ತಾದ ಕಾರ್ಯ
ವನ್ನು ಉದ್ದೇಶಿಸಿಕೊಂಡು ಬಂದ ನಮಗೆ ಇಂಥಾ ಫಲವುಂಟಾಯಿತಲ್ಲಾ !
ಇನ್ನು ನಾವು ಇಲ್ಲಿ ಎಷ್ಟುಕಾಲ ಇರಬೇಕೋ ತಿಳಿಯದು. ನಿನ್ನ ಮನ
ಸ್ಸಿನಲ್ಲಿ ಏನಾದರೂ ಧರ್ಮಕ್ಕೆ ವಿರುದ್ಧವಾದ ಕಾರ್ಯವನ್ನು ಚಿಂತಿಸಿದೆ
ಯಾ? ಹಾಗಲ್ಲದೆ ಸ್ವಲ್ಪವಾದ ಅಪರಾಧದಿಂದ ಇಂಥಾ ಆಪತ್ತು ಬರಲಾರ
ದು" ಅಂದನು.

ಗರುಡನು "ಎಲೈ ಬ್ರಾಹ್ಮಣೋತ್ತಮನೆ, ನನ್ನ ಮನಸ್ಸಿನಲ್ಲಿ ಇನ್ನೇನೂ ಎಣಿಸಲಿಲ್ಲ; ಆದರೆ ಈ ಬ್ರಾಹ್ಮಣಸ್ತ್ರೀಯು ಇಲ್ಲಿ ಇರುವದು ಅಯುಕ್ತವೆಂದು ಯೋಚಿಸಿ ನಾನು ಬ್ರಹ್ಮ ವಿಷ್ಣು ಮಹೇಶ್ವರರು ಇರತಕ್ಕ ಲೋಕಗಳಲ್ಲಿಯೂ ಧರ್ಮಗಳೂ ಯಜ್ಞಾದಿಕರ್ಮಗಳೂ ನಡೆಯುವ ಸ್ಥಳಗಳಲ್ಲಿಯೂ ಸಹ ಈ ಪುಣ್ಯಸ್ತ್ರೀಯನ್ನು ಎತ್ತಿಕೊಂಡು ಹೋಗಿ ಇರಿಸಬೇಕೆಂದು ಎಣಿಸಿದೆನು; ಈ ಅಪರಾಧದಿಂದ ಹೀಗಾಯಿತೇ ಹೊರತಾಗಿ ಇಂಥಾ ಆಲೋಚನೆಯನ್ನು ಮಾಡಬಾರದೆಂದು ನನಗೆ ತಿಳಿಯದೇಹೋಯಿತು" ಎಂದು ನುಡಿದು ಆಕೆಯನ್ನು ನೋಡಿ "ಓ ಮಹಾನುಭಾವಳೆ, ನಾನು ಯೋಚಿಸಿದ್ದು ಒಳ್ಳೇದಾದರೂ ಕೆಟ್ಟದಾದರೂ ಅದನ್ನು ನೀನು ಮನ್ನಿಸಬೇಕು" ಎಂದು ಪ್ರಾರ್ಥಿಸಿದನು.

ಶಾಂಡಿಲಿಯು ಸಂತೋಷಪಟ್ಟು "ಎಲೈ ಗರುಡನೆ, ಭಯಪಡಬೇಡ; ನೀನು ಮನಸ್ಸಿನಲ್ಲಿ ಇಲ್ಲಿ ನಾನಿರುವದು ಸರಿಯಲ್ಲವೆಂದು ಎಣಿಸಿದ್ದಕ್ಕಾಗಿ ಇಂಥಾ ಫಲವನ್ನು ಅನುಭವಿಸಿದೆ; ಪಾಪಾತ್ಮನಾದ ಯಾವ ಪುರುಷನಾದರೂ ನಮ್ಮಂಥಾವರನ್ನು ನಿಂದಿಸಿದರೆ ಪುಣ್ಯಹೀನನಾಗಿ ನಾಶವನ್ನೈದುವನು; ಸರ್ವಲಕ್ಷಣಗಳಿಂದಲೂ ಕೂಡಿ ಅನಿಂದಿತವಾದ ಆಚಾರವನ್ನು ತಪ್ಪದೇ ಇರುವ ನಾನು ಎಲ್ಲಾ ತಪಸ್ಸಿದ್ಧಿಯನ್ನೂ ಹೊಂದಿರುವೆನು; ಆಚಾರವೇ ಸಕಲಧರ್ಮಗಳನ್ನೂ ಉಂಟುಮಾಡುವದು; ಆಚಾರದ ದೆಸೆಯಿಂದಲೇ ಧನವೂ ಐಶ್ವರ್ಯವೂ ಆರೋಗ್ಯವೂ ಸಹ ಉಂಟಾಗುವವು; ಆಚಾರವೇ ಸಕಲ ದುರ್ಲಕ್ಷಣಗಳನ್ನೂ ಹೋಗಲಾಡಿಸುವದು; ಆಚಾರವಂತರನ್ನು ನಿಂದಿಸುವದು ಯುಕ್ತವಲ್ಲ; ಹಾಗೆ ನಿಂದೆಗೆ ಗುರಿಯಾಗತಕ್ಕವರು ಹೀಗೆ ಒಂದುತಾವಿನಲ್ಲಿರುವರೆ! ಅದು ಹಾಗಿರಲಿ; ನಿನಗೆ ಆಯುರಭಿವೃದ್ಧಿಯೂ ಪೂರ್ವದಂತೆ ಬಲವೂ ಸಹ ಉಂಟಾಗಲಿ! ಎಲ್ಲಿಗೆ ಹೋಗಬೇಕೆಂದೆಣಿಸುವಿಯೊ ಅಲ್ಲಿಗೆ ಹೋಗು" ಎಂದು ಅನುಗ್ರಹಿಸಿದಳು.

ಆ ಬಳಿಕ ಗರುಡನಿಗೆ ಯಥಾಪ್ರಕಾರವಾಗಿ ರೆಕ್ಕೆಗಳೂ ಬಲವೂ ಸಹ ಉಂಟಾಗಲು ಅವರಿಬ್ಬರೂ ಸಂತೋಷಪಟ್ಟು ಶಾಂಡಲಿಗೆ ಪ್ರದಕ್ಷಿಣನಮಸ್ಕಾರವನ್ನು ಮಾಡಿ ಅಪ್ಪಣೆಯನ್ನು ತೆಗದುಕೊಂಡು ಮುಂದಕ್ಕೆ ಹೋಗದೆ ಹಿಂತಿರಿಗಿ ಶೀಘ್ರವಾಗಿ ಸಮುದ್ರವನ್ನು ದಾಟಬಂದು ಕುದುರೆಗಳನ್ನು ಪಡೆಯುವದಕ್ಕೆ ಉಪಾಯವನ್ನು ತಿಳಿಯದೆ ಚಿಂತಿಸುತ್ತಿದ್ದರು.

ಮಾರ್ಗದಲ್ಲಿ ಮಹಾತ್ಮನಾದ ವಿಶ್ವಾಮಿತ್ರನು ಬಂದು ಗಾಲವನನ್ನು ನೋಡಿ ಗರುಡನನು ಕೇಳುತ್ತಿರಲು "ಎಲೈ ಗಾಲವನೆ, ನೀನು ನನಗೆ ಗುರುದಕ್ಷಿಣೆಯನ್ನು ಕೊಡುವದಾಗಿ ಪ್ರತಿಜ್ಞೆಯನ್ನು ಮಾಡಿದ ಕಾಲವು ಅತಿಕ್ರಮಿಸಿತು; ಈಗಲೂ ತಂದುಕೊಡುವದಕ್ಕೆ ಉಪಾಯವನ್ನು ತಿಳಿಯದೆ ಚಿಂತಿಸುತ್ತಲಿದ್ದೀ; ಇನ್ನೂ ಕೆಲವುಕಾಲ ನಿರೀಕ್ಷಿಸುವೆನು; ಶೀಘ್ರವಾಗಿ ತಂದುಕೊಡು" ಎಂದು ನುಡಿದು ಹೋದನು.

ಗರುಡನು "ಎಲೈ ಗಾಲವನೆ, ನೀನು ಯಾತಕ್ಕೆ ಕ್ಲೇಶಪಡುತ್ತೀ! ಗುರುವಾದ ವಿಶ್ವಾಮಿತ್ರನು ನಿನ್ನ ಸಂಗಡ ನುಡಿದ ವಚನಗಳನ್ನು ಕೇಳಿದೆಯಲ್ಲಾ; ಹಾಗೆ ಪ್ರತಿಜ್ಞೆಮಾಡಿದ ಎಂಟನೂರು ಕುದುರೆಗಳನ್ನು ತಂದುಕೊಡದೆ ನೀನು ಒಂದು ನಿಮಿಷವಾದರೂ ಒಂದು ಕಡೆಯಲ್ಲಿರಬಹುದೆ! ಆದ್ದರಿಂದ ಇದಕ್ಕೆ ತಕ್ಕ ಆಲೋಚನೆಯನ್ನು ಮಾಡೋಣ" ಎಂದು ನುಡಿದನು.

೧೧ ನೇ ಅಧ್ಯಾಯ.

ಆ ಬಳಿಕ ಪಕ್ಷಿಕುಲ ಶಿಖಾಮಣಿಯಾದ ಗರುಡನು ಗಾಲವನನ್ನು ನೋಡಿ "ಅಗ್ನಿವಾಯುಗಳ ಸಂಬಂಧದಿಂದ ಅನೇಕ ಧಾತುಗಳೊಡನೆ ಕೂಡಿರುವ ಭೂಮಿಯಲ್ಲಿರುವ ಧೂಳಿಗಳು ಸುವರ್ಣರೂಪವಾಗಿ ಪರಿಣಮಿಸುವದ್ದರಿಂದ ಈ ಜಗತ್ತನ್ನು ಹಿರಣ್ಮಯವೆಂದು ಹೇಳುವರು; ಮತ್ತೊಬ್ಬನನ್ನು ಪೋಷಿಸುವದರಿಂದಲೂ ಬದುಕಿಸುವದರಿಂದಲೂ ಸುವರ್ಣಕ್ಕೆ ಧನವೆಂಬ ಹೆಸರುಂಟಾಯಿತು; ಅಂಥಾ ಧನವು ಮೂರುಲೋಕಗಳಲ್ಲಿಯೂ ಶಾಶ್ವತವಾಗಿರುವದು; ಅಗ್ನಿಯಿಂದ ಉತ್ಪನ್ನವಾದ ಆ ಧನವು ಪೂರ್ವಾಭಾದ್ರ, ಉತ್ತರಾಭಾದ್ರ, ನಕ್ಷತ್ರಗಳಿಗೆ ಅಭಿಮಾನಿಗಳಾದ ಅಜೈಕಪಾತ್ತು, ಅಹಿರ್ಬುಧ್ನ್ಯವೆಂಬ ದೇವತೆಗಳಿಂದಲೂ ಧನಾಧ್ಯಕ್ಷನಾದ ಕುಬೇರನಿಂದಲೂ ಸಂರಕ್ಷಿತವಾಗಿರುವದು; ಧನವನ್ನಪೇಕ್ಷಿಸುವ ಪುರುಷನು ಪೂರ್ವಾಭಾದ್ರ, ಉತ್ತರಾಭಾದ್ರ, ನಕ್ಷತ್ರಗಳಿಂದ ಕೂಡಿದ ಶುಕ್ರವಾರದಲ್ಲಿ ಯಜ್ಞೇಶ್ವರನನ್ನು ಕುರಿತು ಧನವನ್ನು ಪ್ರಾರ್ಥಿಸಿದರೆ ಆತನು ಧನವನ್ನು ಕೊಡುವನು; ಹಾಗಿಲ್ಲದಿದ್ದರೆ ಧನವನ್ನು ಹೊಂದುವದು ಅಶಕ್ಯವಾದದ್ದು;

ಆದ್ದರಿಂದ ಧನಹೀನನಾದವನಿಗೆ ಕುದುರೆಗಳು ಹ್ಯಾಗೆ ದೊರದಾವು! ಈಗೆ ನಾವು ಮಹಾರಾಜ ವಂಶದಲ್ಲಿಹುಟ್ಟಿ ಧಾರ್ಮಿಕರಾದ ಅರಸುಗಳನ್ನು ಧನವನ್ನು ಯಾಚಿಸುವದಕ್ಕೆ ಯತ್ನಮಾಡೋಣ. ಎಲೈ ಗಾಲವನೆ, ಚಂದ್ರವಂಶದಲ್ಲಿ ಹುಟ್ಟಿದವನಾಗಿ ಮಹಾನುಭಾವನಾಗಿ ಸತ್ಯವಂತನಾಗಿ ಪರಾಕ್ರಮಶಾಲಿಯಾಗಿ ನಹುಷನಿಗೆ ಮಗನಾಗಿ ನನಗೆ ಸ್ನೇಹಿತನಾದ ಯಯಾತಿಯೆಂಬ ರಾಜಶ್ರೇಷ್ಠನಿರುವನು; ಆತನನ್ನು ನೀನು ಯಾಚಿಸು; ಆತನು ಕುಬೇರನಂತೆ ಐಶ್ವರ್ಯವಂತನಾಗಿರುವನು; ದಾನಶೀಲನಾದ ಆತನಿಂದ ಪಡೆದ ಧನದಿಂದ ಗುರುದಕ್ಷಿಣೆಯನ್ನುಕೊಟ್ಟು ನೀನು ಕೃತಾರ್ಥನಾಗು; ನಿನಗೆ ಧನವನ್ನು ಕೊಡುವಂತೆ ಆತನಿಗೆ ನಾನು ಹೇಳುವೆನು" ಎಂದು ನುಡಿದನು.

ಆ ಬಳಿಕ ಅವರಿಬ್ಬರೂ ಅಲ್ಲಿಂದ ಹೊರಟು ಪ್ರತಿಷ್ಠಾ ಪಟ್ಟಣದಲ್ಲಿರುವ ಯಯಾತಿಯ ಸಮೀಪಕ್ಕೆ ಹೋಗಲು ಆ ಮಹಾರಾಯನು ಆ ಈರ್ವರಿಗೂ ಅರ್ಘ್ಯಪಾದ್ಯಾದಿಗಳನ್ನು ಕೊಟ್ಟು ಪೂಜೆಯನ್ನು ಮಾಡಿ "ನೀವು ಇಲ್ಲಿಗೆ ಬಂದದ್ದಕ್ಕೆ ನನ್ನಿಂದ ಆಗತಕ್ಕ ಪ್ರಯೋಜನವೇನು?" ಎಂದು ಕೇಳಿದನು.

ಗರುಡನು "ತಪೋಸಿದ್ಧಿಯಾಗಿಯೂ ನನಗೆ ಸ್ನೇಹಿತನಾಗಿಯೂ ಇರುವ ಈ ಗಾಲವನು ವಿಶ್ವಾಮಿತ್ರನಿಗೆ ಬಹುಕಾಲ ಶುಶ್ರೂಷೆಯನ್ನು ಮಾಡಿ ಆತನಿಂದ ಸಕಲ ವಿದ್ಯೆಗಳನ್ನೂ ಪಡೆದು ಗುರುದಕ್ಷಿಣೆ ಏನು ಕೊಡಬೇಕೆಂದು ನಿರ್ಬಂಧಿಸಲು ಆ ನಿರ್ಬಂಧದಿಂದ ವಿಶ್ವಾಮಿತ್ರನು ಕೋಪಿಸಿಕೊಂಡು 'ಒಂದು ಕಿವಿ ಕಪ್ಪಾಗಿ ಮಿಕ್ಕಾದ ದೇಹವು ಬಿಳುಪಾಗಿ ಒಪ್ಪುತ್ತಿರುವ ಎಂಟುನೂರು ಕುದುರೆಗಳನ್ನು ಗುರುದಕ್ಷಿಣೆಯಾಗಿ ಕೊಡು' ಎಂದು ನುಡಿದನು; ಈತನು ಅಂಥಾ ಗುರುದಕ್ಷಿಣೆಯನ್ನು ತಂದು ಕೊಡಲಾರದೆ ತಪ್ತನಾಗಿ ಈಗ ತನ್ನ ಮನೋರಥವನ್ನು ನೆರವೇರಿಸಿಕೊಳ್ಳುವದಕ್ಕೆ ನಿನಗೆ ಶರಣಾಗತನಾಗಿರುವನು; ಇನ್ನು ಮೇಲೆ ಈತನು ನಿನ್ನದೆಸೆಯಿಂದ ಇಂಥಾ ಭಿಕ್ಷೆಯನ್ನು ಕೈಕೊಂಡು ಗುರುದಕ್ಷಿಣೆಯನ್ನು ಕೊಟ್ಟು ಕ್ಲೇಶರಹಿತನಾಗಿ ತಪಸ್ಸನ್ನು ಮಾಡಿ ತಪಸ್ಸಿನಿಂದ ಪೂರ್ಣನಾದ ನಿನಗೆ ತನ್ನ ತಪಸ್ಸಿನಲ್ಲಿಯೂ ಭಾಗವನ್ನು ಕೊಡುವನು; ಇಷ್ಟುಮಾತ್ರವೇ ಅಲ್ಲ; ಗುರುದಕ್ಷಿಣೆಗೋಸ್ಕರ ಕೊಡತಕ್ಕ ಆ ಕುದುರೆಗಳ ರೋಮಗಳು

ಎಷ್ಟು ಸಂಖ್ಯೆಯುಳ್ಳವುಗಳಾಗಿರುವವೋ ಅಷ್ಟು ವರ್ಷಗಳು ನೀನು ಪುಣ್ಯ ಲೋಕದಲ್ಲಿರುವಿ ; ನೀನು ಮಾಡುವ ದಾನವನ್ನು ಪ್ರತಿಗ್ರಹಿಸುವದಕ್ಕೆ ಈ ತನು ಸರಿಯಾದ ಪಾತ್ರನು ; ನೀನು ದಾನಶೌಂಡನಾದ್ದರಿಂದ ಈ ಪಾತ್ರದಲ್ಲಿ ಇಂಥಾ ದಾನವನ್ನು ಅವಶ್ಯಕವಾಗಿ ಮಾಡಬೇಕು ; ಹಾಗಾದರೆ ಶಂಖದಲ್ಲಿ ತುಂಬಿದ ಹಾಲಿನಹಾಗೆ ನೀನು ಕೊಡುವ ಧನವು ಪರಿಶುದ್ಧವಾಗಿ ಪ್ರಕಾಶಿ ಸುವದು " ಅಂದನು.

ಈ ಪ್ರಕಾರದಿಂದ ಯಥಾರ್ಥವಾಗಿಯೂ ಉತ್ತಮವಾಗಿಯೂ ಇ ರುವ ಗರುಡನ ವಾಕ್ಯವನ್ನು ಕೇಳಿ ದಾನಶೀಲನಾಗಿಯೂ ಸಾವಿರ ಕ್ರತುಗ ಳನ್ನು ಮಾಡಿದವನಾಗಿಯೂ ಮಹಾನುಭಾವನಾಗಿಯೂ ಇರುವ ಯಯಾ ತಿ ಮಹಾರಾಯನು ನಿಧಾನವಾಗಿ ಆ ಗರುಡನ ವಾಕ್ಯವನ್ನು ಮತ್ತು ಮ ತ್ತು ತನ್ನ ಮನಸ್ಸಿನಲ್ಲಿ ಪರಾಂಬರಿಸುತ್ತ ಸೂರ್ಯವಂಶದಲ್ಲಿ ಹುಟ್ಟಿದ ಅರ ಸುಗಳನ್ನು ಬಿಟ್ಟು ತನ್ನ ಬಳಿಗೆ ಬಂದು ತನ್ನ ತಪಸ್ಸಿಗೆ ನಿದರ್ಶನವಾಗಿಯೂ ಕೀರ್ತಿಕರವಾಗಿಯೂ ಶ್ಲಾಘ್ಯವಾಗಿಯೂ ಇರುವ ಭಿಕ್ಷೆಯನ್ನು ಬಯಸಿ ದವನ ಇಷ್ಟಾರ್ಥವು ನೆರವೇರಿಸತಕ್ಕದ್ದೆಂದು ನಿಶ್ಚಯಿಸಿ ತನಗೆ ಮಿತ್ರ ನಾದ ಗರುಡನನ್ನೂ ಬ್ರಾಹ್ಮಣಶ್ರೇಷ್ಠನಾದ ಗಾಲವನನ್ನೂ ನೋಡಿ " ಪಾಪರಹಿತರಾದ ನೀವು ಇಲ್ಲಿಗೆ ಬಂದದ್ದರಿಂದ ನನ್ನ ಜನ್ಮವೂ ನನ್ನ ಕು ಲವೂ ನನ್ನ ದೇಶವೂ ಸಫಲವಾದವು ; ಎಲೈ ಗರುಡನೆ, ಮೊದಲು ನಾನು ಅಧಿಕವಾಗಿ ಧನವಂತನಾಗಿದ್ದದ್ದನ್ನು ನೀನು ಬಲ್ಲೆಯಷ್ಟೆ ; ಅಂದಿನಹಾಗೆ ಈಗ ನಾನು ಧನವಂತನಲ್ಲವಾದ್ದರಿಂದ ನೀವು ಬಂದದ್ದಕ್ಕೆ ಸರಿಯಾಗಿ ದ್ರ ವ್ಯವನ್ನು ಕೊಡುವದಕ್ಕೆ ಅಶಕ್ತನಾಗಿರುವೆನು ; ಆದರು ನನ್ನನ್ನು ಬ ಯಸಿಬಂದ ಈ ಬ್ರಾಹ್ಮಣನ ಮನೋರಥವನ್ನು ವ್ಯರ್ಥಮಾಡಲಾರೆನು ; ದಾನಶೀಲನಾದ ಅರಸಿನ ಸಮೀಪಕ್ಕೆ ಧನಾರ್ಥಿಯಾಗಿ ಬಂದ ಮನುಷ್ಯನು ಆತನದೆಸೆಯಿಂದ ತನಗೆ ಆಗತಕ್ಕ ಪ್ರಯೋಜನವನ್ನು ಪಡೆಯದೆ ಬಹು ಮಾನವನ್ನೂ ಹೊಂದದೆ ನಿರಾಶನಾದರೆ ಆತನ ವಿಷಾದದಿಂದ ಆ ರಾಯನ ಕುಲವೂ ರಾಷ್ಟ್ರವೂ ಸಹ ನಷ್ಟವಾಗುವವು ; ಇದೂ ಅಲ್ಲದೆ 'ದೇಹಿ' ಅಂದರೆ 'ನಾಸ್ತಿ' ಅನ್ನುವದಕ್ಕಿಂತಲೂ ಮತ್ತೊಂದು ದೋಷವುಂಟೆ! ಆ ದ್ದರಿಂದ ಹಾಗನ್ನುವದಕ್ಕೆ ನಾನೆಂದಿಗೂ ಬಯಸೆನು. ಸತ್ಯವಾದವ ರನ್ನೂ ಸ್ಥಾಪಿಸತಕ್ಕವಳಾಗಿಯೂ ದೇವಕನ್ಯೆಗೆ ಸಮಾನಳಾಗಿಯೂ ಇರುವ

ಧರ್ಮಗಳನ್ನೂ ವೃದ್ಧಿಪಡಿಸುವವಳಾಗಿಯೂ ದೇವಾಸುರ ಮನುಷ್ಯರೂ ಬಯಸತಕ್ಕ ರೂಪುಳ್ಳವಳಾಗಿಯೂ ನಿಮ್ಮ ಕಾರ್ಯವನ್ನು ನೆರವೇರಿಸಲು ಸಮರ್ಥಳಾಗಿಯೂ ಇರುವ ನನ್ನ ಮಗಳಾದ ಮಾಧವಿಯೆಂಬ ಕನ್ಯೆಯನ್ನು ಕೊಡುತ್ತೇನೆ; ರಾಜಾಧಿರಾಜರು ಈ ಕನ್ಯೆಯನ್ನು ವರಿಸುವದಕ್ಕೋಸ್ಕರ ರಾಜ್ಯವನ್ನಾದರೂ ತೆರುವರು; ಹೀಗಿರುವಲ್ಲಿ ಕಪ್ಪಾದ ಒಂದು ಕಿವಿಯುಳ್ಳ ಎಂಟುನೂರು ಕುದುರೆಗಳನ್ನು ಕೊಡುವದು ಎಷ್ಟುಮಾತ್ರವು! ಆದ್ದರಿಂದ—ಎಲೈ ಗಾಲವನೆ, ನನ್ನ ಮಗಳನ್ನು ನೀನು ಗುರುದಕ್ಷಿಣೆಯನ್ನು ಸಂಪಾದಿಸುವದಕ್ಕೋಸ್ಕರ ಅಂಗೀಕರಿಸು; ದೌಹಿತ್ರರ ದೆಸೆಯಿಂದ ಪವಿತ್ರನಾಗಿ ಸದ್ಗತಿಯನ್ನು ಪಡೆಯಬೇಕೆಂದು ನನ್ನ ಸಂಕಲ್ಪವಿರುವದು; ಈ ನನ್ನ ಪ್ರಾರ್ಥನೆಯನ್ನು ನೆರವೇರಿಸಬೇಕು” ಅಂದನು.

ಆ ಮಾತನ್ನು ಕೇಳಿ ಗಾಲವನು ಒಡಂಬಟ್ಟು ಆ ರಾಯನು ಕೊಟ್ಟ ಮಾಧವಿಯನ್ನು ಕರದುಕೊಂಡು ಗರುಡಸಹಿತನಾಗಿ ಆ ರಾಯನನ್ನು ಕುರಿತು “ಮರಳಿ ನಿನ್ನನ್ನು ನೋಡುವೆನು” ಎಂದು ನುಡಿದು ಅಲ್ಲಿಂದ ಹೊರಟನು.

ಆ ಬಳಿಕ ಗರುಡನು “ಈ ಕನ್ಯೆಯಿಂದ ನಿನಗೆ ಅಂಥಾ ಕುದುರೆಗಳು ದೊರೆಯುವದಕ್ಕೆ ಮಾರ್ಗವಾಯಿತು” ಎಂದು ಗಾಲವನೊಡನೆ ಹೇಳಿ ತನ್ನ ಸ್ಥಾನಕ್ಕೆ ಹೊರಟು ಹೋದನು.

೧೭ನೇ ಅಧ್ಯಾಯ.

ಆ ಬಳಿಕ ಗಾಲವನು ಕನ್ಯೆಗೆ ತೆರವಾಗಿ ಕುದುರೆಗಳನ್ನು ಯಾರು ಕೊಡುವರೆಂದು ಯೋಚಿಸಿ ಇಕ್ಷ್ವಾಕುವಂಶದಲ್ಲಿ ಹುಟ್ಟಿದವನಾಗಿಯೂ ರಾಜಶ್ರೇಷ್ಠನಾಗಿಯೂ ಮಹಾ ಪರಾಕ್ರಮಶಾಲಿಯಾಗಿಯೂ ಚತುರಂಗ ಸೇನಾಸಮೇತನಾಗಿಯೂ ಬ್ರಾಹ್ಮಣಪ್ರಿಯನಾಗಿಯೂ ಪುತ್ರಾರ್ಥಿಯಾಗಿಯೂ ಶಾಂತಯುಕ್ತನಾಗಿಯೂ ತಪಸ್ಸನ್ನು ಮಾಡುತ್ತಿರುವವನಾಗಿಯೂ ಐಶ್ವರ್ಯ ಸಂಪನ್ನನಾಗಿಯೂ ಇದ್ದ ಹರ್ಯಶ್ವನೆಂಬ ಅರಸಿನ ಸಮೀಪಕ್ಕೆ ಹೋಗಿ “ಎಲೈ ರಾಜೇಂದ್ರನೆ, ಈ ನನ್ನ ಕನ್ಯೆಯು ಪುತ್ರರನ್ನು ಹೆತ್ತು ಸಂತತಿಯನ್ನು ವೃದ್ಧಿಪಡಿಸುವಳು; ಆದ್ದರಿಂದ ಈ ಕನ್ಯೆಗೆ ಕೊ

ಡತಕ್ಕ ತೆರವನ್ನು ಕೊಟ್ಟು ಈಕೆಯನ್ನು ನೀನು ಹೆಂಡತಿಯಾಗಿ ಪರಿಗ್ರಹಿಸು ” ಅಂದನು.

ಹರ್ಯಶ್ವನು ತನಗೆ ಸತ್ಪುತ್ರನಾಗಬೇಕೆಂದು ಕೆಲವುಹೊತ್ತು ಚಿಂತಿಸಿ ನಿಟ್ಟುಸುರುಗಳನ್ನು ಬಿಟ್ಟು ಆ ಕನ್ಯೆಯ ಲಕ್ಷಣಗಳನ್ನು ನೋಡಿ “ ಎಲೈ ಮುನೀಂದ್ರನೇ, ಈ ಕನ್ಯಾಶಿರೋಮಣಿಯು ಎರಡು ಪೂರವಾರಗಳೂ ಸ್ತನದ್ವಯವೂ ಲಲಾಟಪ್ರದೇಶವೂ ನಾಸಿಕೆಯೂ ನೇತ್ರದ್ವಯವೂ ಎರಡು ಭುಜ ಶಿರಸ್ಸುಗಳೂ—ಈ ಆರೂ ಉನ್ನತವಾಗಿಯೂ, ಬೆರಳುಗಳೂ ಬೆರಳುಗಳ ರೇಖೆಗಳೂ ಕುರುಳುಗಳೂ ಮಂಡೀ ಕೂದಲುಗಳೂ ಉಗುರುಗಳತ್ವಕ್ಕೂ—ಈ ಐದೂ ಸೂಕ್ಷ್ಮವಾಗಿಯೂ, ಸ್ವರವೂ ಮನಸ್ಸೂ ನಾಭಿಯೂ—ಈ ಮೂರೂ ಗಂಭೀರವಾಗಿಯೂ, ಅಂಗಾಲುಗಳೂ ಅಂಗೈಗಳೂ ಕಡೆಗಣ್ಣುಗಳೂ ತುಟಿಯೂ ಉಗುರುಗಳೂ—ಈ ಐದೂ ರಕ್ತವರ್ಣವಾಗಿಯೂ ಒಪ್ಪುತ್ತಿರಲು ಸಕಲ ದೇವಾಸುರರೂ ನೋಡುವದಕ್ಕೆ ಯೋಗ್ಯಳಾಗಿಯೂ ಗಂಧರ್ವವಿದ್ಯೆಯಲ್ಲಿ ಕುಶಲಳಾಗಿಯೂ ಇರುವ ಈ ಕನ್ಯೆಯು ಲಕ್ಷಣವಂತಳಾಗಿಯೂ ಬಹುಪುತ್ರರನ್ನು ಪಡೆಯತಕ್ಕವಳಾಗಿಯೂ ತೋರುವದ್ದರಿಂದ ಈಕೆಯಲ್ಲಿ ಚಕ್ರವರ್ತಿಯಾದ ಕುಮಾರಕನು ಹುಟ್ಟುವನು ; ಆದ್ದರಿಂದ—ಎಲೈ ಗಾಲವನೆ, ನನ್ನ ಸಂಪತ್ತನ್ನು ನೋಡಿ ಈ ಕನ್ಯೆಗೆ ಕೊಡತಕ್ಕ ತೆರವೇನು ಹೇಳು ” ಅಂದನು.

ಗಾಲವನು “ ಒಂದು ಕಿವಿ ಕಪ್ಪಾಗಿ ಎಲ್ಲಾ ಶರೀರವೂ ಚಂದ್ರನಂತೆ ಶುಭ್ರವಾಗಿರುವ ಎಂಟುನೂರು ಜಾತ್ಯಶ್ವಗಳನ್ನು ಈ ಕನ್ಯೆಗೆ ಶುಲ್ಕವಾಗಿ ಕೊಡು ; ಅರಣಿಯಲ್ಲಿ ಅಗ್ನಿಗಳು ಹುಟ್ಟುವಂತೆ ಈ ಸ್ತ್ರೀರತ್ನದಲ್ಲಿ ನಿನಗೆ ಬಹುಪುತ್ರರು ಹುಟ್ಟುವರು ” ಎಂದು ನುಡಿದನು.

ಹರ್ಯಶ್ವನು “ ನೀನು ಹೇಳಿದ ಲಕ್ಷಣಗಳಿಂದ ಕೂಡಿರುವ ಇನ್ನೂರು ಕುದುರೆಗಳು ನನ್ನಲ್ಲಿರುವವು ; ಇವು ಹೊರತು ನಾನಾವರ್ಣಗಳುಳ್ಳ ಕುದುರೆಗಳು ಅನೇಕ ಸಂಖ್ಯೆಗಳಾಗಿರುವವು ; ನೀನು ಆ ಇನ್ನೂರು ಕುದುರೆಗಳನ್ನು ಪರಿಗ್ರಹಿಸಿ ಈ ಕನ್ಯೆಯನ್ನು ನನಗೆ ಕೊಡು ; ಇವಳಲ್ಲಿ ಒಬ್ಬ ಮಗನನ್ನು ಪಡೆದು ಆ ಬಳಿಕ ಈಕೆಯನ್ನು ಮರಳಿ ನಿನಗೇ ಕೊಡುವೆನು ; ಈ ನನ್ನ ಮನೋರಥವನ್ನು ನೆರವೇರಿಸು ” ಅಂದನು.

ಆ ಕನ್ಯೆಯು ಗಾಲವನನ್ನು ನೋಡಿ "ಪೂರ್ವದಲ್ಲಿ ಒಬ್ಬ ಬ್ರಾಹ್ಮಣಶ್ರೇಷ್ಠನು ನನ್ನನ್ನು ನೋಡಿ 'ನೀನು ನಾಲ್ಕುಮಂದಿ ಅರಸುಗಳ ದೆಸೆಯಿಂದ ನಾಲ್ಕುಮಂದಿ ಮಕ್ಕಳನ್ನು ಪಡೆಯುವೆ ; ಪ್ರತಿ ಪ್ರಸವದಲ್ಲಿಯೂ ಪ್ರಸವವಾದಮೇಲೆ ಕನ್ಯೆಯೇ ಆಗುವೆ' ಎಂದು ವರವನ್ನು ಕೊಟ್ಟಿರುವನಾದ್ದರಿಂದ ನೀನು ನನ್ನನ್ನು ಈತನಿಗೆ ಕೊಡು ; ಹೀಗೆಯೇ ಇನ್ನೂ ಮೂರುಮಂದಿ ಅರಸುಗಳಿಗೆ ಕೊಟ್ಟು ಎಂಟುನೂರು ಕುದುರೆಗಳನ್ನು ಪಡೆದು ಗುರುದಕ್ಷಿಣೆಯನ್ನು ಕೊಡು ; ಆ ನಾಲ್ಕುಮಂದಿ ಅರಸುಗಳದೆಸೆಯಿಂದ ನನ್ನಲ್ಲಿ ನಾಲ್ಕುಮಂದಿ ಮಕ್ಕಳಾದಬಳಿಕ ನನ್ನನ್ನು ನನ್ನ ತಂದೆಗೆ ಕೊಟ್ಟುಬಿಡು" ಎಂದು ನುಡಿದಳು.

ಆ ವಾಕ್ಯವನ್ನು ಕೇಳಿ ಸಂತೋಷಪಟ್ಟು ಗಾಲವನು ಹರ್ಯಶ್ವನನ್ನು ನೋಡಿ "ಎಲೈ ರಾಜೋತ್ತಮನೆ, ನೀನು ಹೇಳಿದ ಹಾಗೇ ಆಗಲಿ ; ಈ ಕನ್ಯೆಯನ್ನು ಪರಿಗ್ರಹಿಸಿ ಗುರುದಕ್ಷಿಣೆಗೋಸ್ಕರ ನನಗೆ ಇನ್ನೂರು ಕುದುರೆಗಳನ್ನು ಕೊಟ್ಟು ಈಕೆಯಲ್ಲಿ ಒಬ್ಬ ಮಗನನ್ನು ಪಡೆದು ಪುನಃ ಈಕೆಯನ್ನು ನನ್ನವಶಕ್ಕೆ ಕೊಡು" ಅಂದನು.

ಆ ರಾಯನು ಸಂತೋಷಪಟ್ಟು ಹಾಗೇ ಆಗಲಿ ಎಂದು ಆ ಕನ್ಯಾರತ್ನವನ್ನು ಪರಿಗ್ರಹಿಸಿ ಆಕೆಯಲ್ಲಿ ಒಳ್ಳೇಹೊತ್ತಿನಲ್ಲಿ ವಸುಪ್ರದನಾಗಿ ವಸುಗಳಲ್ಲಿ ಶ್ರೇಷ್ಠನಾದ ವಸುಮನಸ್ಸೆಂಬ ನಾಮಧೇಯವುಳ್ಳ ಕುಮಾರನನ್ನು ಪಡೆದು ಸಂತೋಷದಿಂದಿರುವ ಸಮಯದಲ್ಲಿ ಗಾಲವನು ತಿರಿಗೂ ಬಂದು ಹರ್ಯಶ್ವನನ್ನು ನೋಡಿ "ನಿನಗೆ ಬಾಲಸೂರ್ಯನಂತಿರುವ ಪುತ್ರನು ಹುಟ್ಟಿರುವನು ; ಆದ್ದರಿಂದ ಮಾಧವಿಯನ್ನು ನನ್ನ ವಶಕ್ಕೆ ಕೊಡು" ಎಂದು ಕೇಳಿದನು.

ಆ ರಾಯನು ಸತ್ಯಸಂಧನಾದ್ದರಿಂದ ಕುದುರೆಗಳೊಡನೆ ಆಕೆಯನ್ನು ಗಾಲವನಿಗೆ ಕೊಡಲು ಆ ಸ್ತ್ರೀಯು ಆಗಲೇ ಪುನಹ ಕನ್ಯೆಯಾಗಿ ಸಂಗಡಬರಲು ಗಾಲವನು ಹರ್ಯಶ್ವನನ್ನು ನೋಡಿ "ಎಲೈ ರಾಯನೆ, ಇನ್ನೊಂದಾವರ್ತಿ ನಾನು ನಿನ್ನನ್ನು ನೋಡುವವರಿವಿಗೂ ಈ ಕುದುರೆಗಳು ನಿನ್ನಲ್ಲಿಯೇ ಇರಲಿ" ಎಂದು ನುಡಿದನು.

ಆ ಬಳಿಕ ಗಾಲವನು ಮಾಧವಿಯನ್ನು ಕರೆದುಕೊಂಡು ಕಾಶೀದೇಶಾಧೀಶ್ವರನಾಗಿ ಶೂರನಾಗಿ ಭೀಮಸೇನರಾಯನಿಗೆ ಕುಮಾರನಾಗಿ ಸತ್ಯ

ಸಂಧನಾದ ದಿವೋದಾಸರಾಯನ ಸಮೀಪಕ್ಕೆ ಹೋಗಿ ಆತನಿಂದ ಸತ್ಕಾರವನ್ನು ಕೈಕೊಂಡು ತಾನುಬಂದ ಕಾರ್ಯವನ್ನು ಆತನಿಗೆ ತಿಳುಹಿಸಿ “ ಸಂತಾನಾರ್ಥವಾಗಿ ನೀನು ಈ ಕನ್ಯೆಯನ್ನು ಪರಿಗ್ರಹಿಸು ” ಅಂದನು.

ದಿವೋದಾಸರಾಯನು “ ಈ ಕಾರ್ಯವನ್ನು ನಾನು ಮೊದಲೇ ಕೇಳಿರುವೆನು ; ನೀನು ವಿಸ್ತರಿಸತಕ್ಕ ಕೆಲಸವಿಲ್ಲ ; ಈ ಸ್ತ್ರೀಯನ್ನು ನಾನು ಬಯಸುತ್ತಲೇ ಇದ್ದೆನು ; ನನ್ನಲ್ಲಿಯೂ ನಿನಗೆ ಬೇಕಾದಂಥಾ ಕುದುರೆಗಳು ಇನ್ನೂರೇ ಇರುವವು ; ಆದ್ದರಿಂದ ನಾನೂ ಆ ಕುದುರೆಗಳನ್ನು ತೆರವಾಗಿ ಕೊಟ್ಟು ಈಕೆಯಲ್ಲಿ ಒಬ್ಬ ಪುತ್ರನನ್ನು ಪಡೆಯುವೆನು ” ಎಂದು ನುಡಿದು ಆಕೆಯನ್ನು ಶಾಸ್ತ್ರೋಕ್ತಪ್ರಕಾರವಾಗಿ ಪರಿಗ್ರಹಿಸಿ ಪ್ರಭಾವತಿಯಲ್ಲಿ ರವಿಯೂ ಸ್ವಾಹಾದೇವಿಯಲ್ಲಿ ಅಗ್ನಿಯೂ ಶಚೀದೇವಿಯಲ್ಲಿ ದೇವೇಂದ್ರನೂ ರೋಹಿಣಿಯಲ್ಲಿ ಚಂದ್ರನೂ ಧೂಮೋರ್ಣೆಯಲ್ಲಿ ಯಮನೂ ಗೌರಿಯಲ್ಲಿ ವರುಣನೂ ವೃದ್ಧಿಯಲ್ಲಿ ಕುಬೇರನೂ ಚಂಡಿಕೆಯಲ್ಲಿ ಕುಂಜರನೂ ಮಹಾಲಕ್ಷ್ಮಿಯಲ್ಲಿ ನಾರಾಯಣನೂ ಗಂಗೆಯಲ್ಲಿ ಸಮುದ್ರನೂ ಪಾರ್ವತಿಯಲ್ಲಿ ರುದ್ರನೂ ದಮಯಂತಿಯಲ್ಲಿ ನಳನೂ ಸತ್ಯವತಿಯಲ್ಲಿ ಭಾರ್ಗವನೂ ಜರತ್ಕಾರುವಿನಲ್ಲಿ ಜರತ್ಕಾರನೂ ರತಿದೇವಿಯಲ್ಲಿ ಮನ್ಮಥನೂ ಭರದ್ವಾಜೆಯಲ್ಲಿ ಪುಲಹನೂ ಧೃತಿಯಲ್ಲಿ ಧರ್ಮನೂ ಮೇನಕೆಯಲ್ಲಿ ಊರ್ಣಾಯುವೂ ರಂಭೆಯಲ್ಲಿ ತುಂಬುರನೂ ಶತಶೀರ್ಷೆಯಲ್ಲಿ ವಾಸುಕಿಯೂ ಕುಮಾರಿಯಲ್ಲಿ ಧನಂಜಯನೂ ಸರಸ್ವತಿಯಲ್ಲಿ ಬ್ರಹ್ಮನೂ ಅರುಂಧತಿಯಲ್ಲಿ ವಸಿಷ್ಠನೂ ಅಕ್ಷಮಾಲಿಕೆಯಲ್ಲಿ ವಾಸಿಷ್ಠನೂ ಸುಕನ್ಯೆಯಲ್ಲಿ ಚ್ಯವನನೂ ಸಂಧ್ಯೆಯಲ್ಲಿ ಪುಲಸ್ತ್ಯನೂ ವೈದರ್ಭಿಯಲ್ಲಿ ಅಗಸ್ತ್ಯನೂ ಸಾವಿತ್ರಿಯಲ್ಲಿ ಸತ್ಯವಂತನೂ ಪುಲೋಮೆಯಲ್ಲಿ ಭೃಗುವೂ ಅದಿತಿಯಲ್ಲಿ ಕಶ್ಯಪನೂ ರೇಣುಕೆಯಲ್ಲಿ ಅರ್ಚೀಕನೂ ಹೈಮವತಿಯಲ್ಲಿ ಕೌಶಿಕನೂ ತಾರೆಯಲ್ಲಿ ಬೃಹಸ್ಪತಿಯೂ ಶತಪರ್ವೆಯಲ್ಲಿ ಶುಕ್ರನೂ ಭೂಮಿಯಲ್ಲಿ ಭೂಪತಿಯೂ ಊರ್ವಶಿಯಲ್ಲಿ ಪುರೂರವನೂ ಸತ್ಯವತಿಯಲ್ಲಿ ಋಚೀಕನೂ ಸರಸ್ವತಿಯಲ್ಲಿ ಮನುವೂ ಶಕುಂತಳೆಯಲ್ಲಿ ದುಷ್ಯಂತನೂ ಸೀತೆಯಲ್ಲಿ ರಾಮನೂ ರುಕ್ಮಿಣಿಯಲ್ಲಿ ಕೃಷ್ಣನೂ ಅನುರಾಗವನ್ನು ಪಡೆದರೀತಿಯಿಂದ ಮಾಧವಿಯಲ್ಲಿ ಅನುರಾಗವನ್ನು ಪಡೆದನು.

ಕೆಲವುಕಾಲದಲ್ಲಿ ದಿವೋದಾಸ ಭೂಪಾಲಕನ ದೆಸೆಯಿಂದ ಮಾಧವಿಯಲ್ಲಿ ಪ್ರತರ್ದನನೆಂಬ ಪುತ್ರನು ಜನಿಸಲು ಆ ವರ್ತಮಾನವನ್ನುಕೇಳಿ ಗಾಲವನು ದಿವೋದಾಸನ ಸಮೀಪಕ್ಕೆಹೋಗಿ ಆತನನ್ನುಕುರಿತು "ಕನ್ಯಾಶುಲ್ಕಕ್ಕಾಗಿ ನೀನುಕೊಟ್ಟ ಇನ್ನೂರು ಕುದುರೆಗಳು ನಿನ್ನ ಸಮೀಪದಲ್ಲೇ ಇರಲಿ; ಇನ್ನೂ ಇಂಥಾ ಕುದುರೆಗಳನ್ನು ಸಂಪಾದಿಸುವದಕ್ಕೋಸ್ಕರ ಮತ್ತೊಬ್ಬನ ಸಮೀಪಕ್ಕೆ ಹೋಗುವೆನು ; ಈ ಕನ್ಯೆಯನ್ನು ಕಳುಹಿಸಿಕೊಡು" ಅಂದನು.

ಆ ಬಳಿಕ ಮಾಧವಿಯು ಯಥಾಪ್ರಕಾರ ಕನ್ಯೆಯಾಗಿ ಗಾಲವನ ಸಂಗಡ ಹೋಗಲು ಆತನು ಭೋಜನಗರವನ್ನುಸೇರಿ ಔಶೀನರನೆಂಬ ರಾಜನನ್ನುನೋಡಿ "ಎಲೈ ಮಹಾರಾಜನೇ, ಸತ್ಯಸಂಧನಾಗಿಯೂ ಪರಾಕ್ರಮಶಾಲಿಯಾಗಿಯೂ ಇರುವ ನಿನ್ನ ದೆಸೆಯಿಂದ ಈ ಕನ್ಯಕೆಯು ಸೂರ್ಯಚಂದ್ರರಿಗೆ ಸಮಾನರಾಗಿರುವ ಇಬ್ಬರು ಪುತ್ರರನ್ನು ಪಡೆಯುವಳು ; ಇವಳೊಡನೆ ಕೂಡಿ ನೀನು ಸಕಲ ಭೋಗಗಳನ್ನೂಪಡೆಯುವೆ ; ಒಂದು ಕಿವಿ ಕಪ್ಪಾಗಿ ಮಿಕ್ಕಾದ ಶರೀರವೆಲ್ಲಾ ಚಂದ್ರನಂತೆ ಶುಭ್ರವಾಗಿರುವ ನಾನೂರು ಕುದುರೆಗಳು ಈ ಕನ್ಯೆಗೆ ಕೊಡತಕ್ಕ ತೆರವಾಗಿರುವವು ; ಅಂಥಾ ನಾನೂರು ಕುದುರೆಗಳನ್ನು ಕೊಡುವದಕ್ಕೆ ನಿನಗೆ ಸಾಮರ್ಥ್ಯವಿದ್ದರೆ ಅಪುತ್ರನಾದ ನೀನು ಈಕೆಯಿಂದ ವಂಶಾಭಿವೃದ್ಧಿಯನ್ನು ಮಾಡಿಕೊಂಡು ಪಿತೃಋಣವನ್ನು ಪರಿಹರಿಸಿಕೊ; ಪುತ್ರವಂತರಿಗೆ ಸ್ವರ್ಗಪ್ರಾಪ್ತಿಯಾಗುವದು ; ನರಕಪ್ರಾಪ್ತಿಯುಂಟಾಗಲಾರದು" ಅಂದನು.

ಔಶೀನರನು "ಎಲೈ ಗಾಲವನೆ, ನಿನ್ನವಾಕ್ಯವನ್ನುಕೇಳಿ ಸಂತೋಷಪಟ್ಟೆನು ; ದೈವವು ದೊಡ್ಡದು ; ನೀನು ಬಯಸಿದಂಥಾ ಕುದುರೆಗಳು ನನ್ನ ಸಮೀಪದಲ್ಲಿ ಇನ್ನೂರು ಇರುವವು ; ಅವುಗಳನ್ನು ಈ ಕನ್ಯೆಗೆ ಶುಲ್ಕವಾಗಿಕೊಟ್ಟು ಈಕೆಯಲ್ಲಿ ಒಬ್ಬ ಮಗನನ್ನು ಪಡೆಯುವೆನು ; ನನ್ನ ಧನವೆಲ್ಲಾ ಪ್ರಜಾಪರಿಪಾಲನೆಗೋಸ್ಕರಲೇ ಹೊರತಾಗಿ ಆತ್ಮಭೋಗಕ್ಕೋಸ್ಕರವಲ್ಲ; ಯಾರು ಕಾಮವಶರಾಗಿ ದ್ರವ್ಯವನ್ನು ಕಳೆದುಕೊಳ್ಳುವರೋ ಅವರಿಗೆ ಧರ್ಮವೂ ಕೀರ್ತಿಯೂ ಉಂಟಾಗಲಾರವು ; ಆದ್ದರಿಂದ ದೇವಕನ್ಯೆಗೆ ಸಮಾನಗಳಾದ ಈ ಮಾಧವಿಯನ್ನು ನನಗೆ ಕೊಟ್ಟರೆ ಇವಳಲ್ಲಿ ಪ್ರಜಾಪರಿಪಾಲನಾರ್ಥವಾಗಿ ಒಬ್ಬ ಮಗನನ್ನು ಪಡೆದೇನು" ಎಂದು ನುಡಿ

ಯಲು ಆ ರಾಯನಿಗೆ ಆ ಕನ್ಯೆಯನ್ನು ಕೊಟ್ಟು ಗಾಲವನು ವನಕ್ಕೆ ಹೋದನು.

ಅನಂತರದಲ್ಲಿ ಆ ರಾಯನು ಪುಣ್ಯಶಾಲಿಯಾದವನು ಐಶ್ವರ್ಯವನ್ನನುಭವಿಸುವಂತೆ ಆ ಸ್ತ್ರೀಯೊಡನೆ ಬೆರದು ಕಾಮವಶನಾಗಿ ಅನೇಕವಾದ ಪರ್ವತಗಳಲ್ಲಿಯೂ ಗುಹೆಗಳಲ್ಲಿಯೂ ನದಿಗಳಲ್ಲಿಯೂ ತೋಟಗಳಲ್ಲಿಯೂ ಉದ್ಯಾನವನಗಳಲ್ಲಿಯೂ ವಿಚಿತ್ರವಾಗಿ ಪುಷ್ಪಿಸಿರುವ ತರುಲತೆಗಳಿಂದ ಕೂಡಿ ರಮ್ಯವಾಗಿರುವ ಅರಣ್ಯಪ್ರದೇಶಗಳಲ್ಲಿಯೂ ಉಪ್ಪರಿಗೆಗಳಲ್ಲಿಯೂ ಚಂದ್ರಶಾಲೆಗಳಲ್ಲಿಯೂ ಸುವರ್ಣಮಯವಾದ ಗವಾಕ್ಷಗಳಿಂದ ಅಲಂಕೃತವಾದ ವಿಮಾನಗಳಲ್ಲಿಯೂ ಪದ್ಮರಾಗಮಣಿಗಳಿಂದ ಪರಿಶೋಭಿತವಾದ ಗರ್ಭಗೃಹಗಳಲ್ಲಿಯೂ ಸುಖವನ್ನನುಭವಿಸುತ್ತ ಆಕೆಯಲ್ಲಿ ಬಾಲಸೂರ್ಯನಂತೆ ಪ್ರಕಾಶಮಾನನಾದ ಶಿಬಿಯೆಂಬ ಮಗನನ್ನು ಪಡದನು. ಆಗ ಗಾಲವನು ಆತನ ಸಮೀಪಕ್ಕೆ ಬಂದು ಆತನು ಕೊಟ್ಟ ಕುದುರೆಗಳನ್ನು ಆತನ ವಶದಲ್ಲೇ ಇಟ್ಟು ತಿರಿಗೂ ಕನ್ಯೆಯಾದ ಆ ಮಾಧವಿಯನ್ನು ಕರೆದುಕೊಂಡು ಪುನಃ ಗರುಡನನ್ನು ನೋಡಿದನು.

೧೩ ನೇ ಅಧ್ಯಾಯ.

ಆ ಬಳಿಕ ಗರುಡನು ನಸುನಗುತ ಗಾಲವನನ್ನು ನೋಡಿ "ಎಲೈ ಗಾಲವನೆ, ದೈವಯೋಗದಿಂದ ಆರುನೂರು ಕುದುರೆಗಳು ದೊರಕಿರುವದರಿಂದ ನೀನು ಗುರುದಕ್ಷಿಣೆಯನ್ನು ಕೊಟ್ಟು ಕೃತಾರ್ಥನಾಗುವದಕ್ಕೆ ಮಾರ್ಗವುಂಟಾಯಿತು'' ಅಂದನು.

ಗಾಲವನು "ಕಡಮೇ ಇನ್ನೂರು ಕುದುರೆಗಳೂ ದೊರಕಿದಾಗಲ್ಲವೆ ನಾನು ಕೃತಾರ್ಥನಾಗುವದು" ಎಂದು ನುಡಿದನು.

ಗರುಡನು "ಇನ್ನುಮೇಲೆ ಎಷ್ಟುಪ್ರಯಾಸಪಟ್ಟರೂ ಒಮ್ಮಡಿಯಾಗಿ ಇಂಥಾ ಕುದುರೆಗಳು ಸಿಕ್ಕಲಾರವು; ಈ ಆರುನೂರು ಕುದುರೆಗಳು ದೊರಕಿದ್ದಕ್ಕೆ ಕಾರಣವನ್ನು ಹೇಳುತ್ತೇನೆ ಕೇಳು; ಕನ್ಯಾಕುಬ್ಜವೆಂಬ ಪಟ್ಟಣದಲ್ಲಿ ಗಾಧಿರಾಜನ ಮಗಳಾದ ಸತ್ಯವತಿಯನ್ನು ಋಚೀಕನೆಂಬವನು ವಿವಾಹಮಾಡುವದಕ್ಕೋಸ್ಕರ ಕೇಳಲು ಆ ಗಾಧಿರಾಯನು

ಆತನನ್ನು ಕುರಿತು ' ಒಂದು ಕಿವಿ ಕಪ್ಪಾಗಿ ಚಂದ್ರನಂತೆ ಶುಭ್ರವಾದ ಶರೀರವುಳ್ಳ ಸಾವಿರ ಕುದುರೆಗಳನ್ನು ಕೊಟ್ಟರೆ ಈ ಕನ್ಯೆಯನ್ನು ಕೊಡುತ್ತೇನೆ ' ಅಂದನು. ಋಚೀಕನು ಹಾಗೇ ಆಗಲೀ ಎಂದು ವರುಣನ ಮನೆಗೆ ಹೋಗಿ ಅಶ್ವತೀರ್ಥದಲ್ಲಿದ್ದ ಅಂಥಾ ಕುದುರೆಗಳನ್ನು ವರುಣನಿಂದ ಪಡೆದು ಆ ರಾಯನಿಗೆ ತಂದುಕೊಟ್ಟು ಆ ಕನ್ಯೆಯನ್ನು ಪರಿಗ್ರಹಿಸಿದನು. ಆ ಬಳಿಕ ಗಾಧಿರಾಯನು ಪೌಂಡರೀಕಯಾಗವನ್ನು ಮಾಡಿ ಒಬ್ಬೊಬ್ಬ ಋತ್ವಿಜನಿಗೆ ಇನ್ನೂರಿನ್ನೂರು ಕುದುರೆಗಳನ್ನು ದಕ್ಷಿಣೆಯಾಗಿ ಕೊಟ್ಟನು ; ಆ ಸಮಯದಲ್ಲಿ ಈ ಮೂರುಮಂದಿ ರಾಯರೂ ಆ ಬ್ರಾಹ್ಮಣರಿಗೆ ಬೇಕಾದಷ್ಟು ಧನವನ್ನು ಕೊಟ್ಟು ಆ ಕುದುರೆಗಳನ್ನು ಸಂಗ್ರಹಿಸಿದರು ; ಮಿಕ್ಕಾದ ನಾನೂರು ಕುದುರೆಗಳು ಎರಡು ನಾಲ್ಕು ಈ ಪ್ರ ಪ್ರಕಾರವಾಗಿ ನಾನಾದ್ವೀಪಗಳಲ್ಲಿರುವ ಅರಸುಗಳನ್ನು ಸೇರಿದವು ; ಆದ್ದರಿಂದ ನಿನಗೆ ಇಂಥಾ ಕುದುರೆಗಳು ಪುನಹ ಒಟ್ಟಾಗಿ ಸಿಕ್ಕಲಾರವು ; ಉಳಿದ ಇನ್ನೂರು ಕುದುರೆಗಳಿಗೋಸ್ಕರ ನಿನ್ನ ಗುರುವಾದ ವಿಶ್ವಾಮಿತ್ರನಿಗೆ ಈ ಕನ್ಯೆಯನ್ನೇ ಕೊಟ್ಟರೆ ಆತನು ಒಡಂಬಡುವನು ; ಅದರಿಂದ ನೀನು ಕೃತಕೃತ್ಯನಾಗುವೆ " ಅಂದನು.

ಗಾಲವನು ಹಾಗೇ ಆಗಲಿ ಎಂದು ಆ ಆರುನೂರು ಕುದುರೆಗಳನ್ನೂ ಸಂಗಡ ಬರಮಾಡಿಕೊಂಡು ಮಾಧವಿಯನ್ನೂ ಕರೆದುಕೊಂಡು ಗರುಡನೊಡನೆ ವಿಶ್ವಾಮಿತ್ರನ ಸಮೀಪಕ್ಕೆಹೋಗಿ " ಎಲೈ ಮುನಿಶ್ರೇಷ್ಠನೇ, ಇನ್ನೂರು ಇನ್ನೂರು ಕುದುರೆಗಳನ್ನು ತೆರವಾಗಿ ತೆಗೆದುಕೊಂಡು ಒಬ್ಬೊಬ್ಬ ಮಗನನ್ನು ಪಡೆಯುವ ಪರ್ಯಂತರಕ್ಕೂ ಈ ಕನ್ಯೆಯನ್ನುಕೊಟ್ಟು ಮೂರುಮಂದಿ ಅರಸುಗಳ ದೆಸೆಯಿಂದ ಈ ಆರುನೂರು ಕುದುರೆಗಳನ್ನು ಪಡೆದೆನು ; ನೀನೂ ಹಾಗೇ ಈ ಕನ್ಯೆಯನ್ನು ಪರಿಗ್ರಹಿಸಿ ಒಬ್ಬ ಮಗನನ್ನು ಪಡೆದು ಇನ್ನೂರು ಕುದುರೆಗಳಿಗಾಗಿ ಒಪ್ಪಿಕೊ ; ಈ ಆರುನೂರು ಕುದುರೆಗಳನ್ನೂ ತೆಗೆದುಕೊ ; ಇವಳಿಗೆ ಕನ್ಯಾತ್ವವು ದೂಷಿತವಾಗದಿರುವ ಹಾಗೆ ವರವುಂಟು ; ಈಕೆಯನ್ನು ಪರಿಗ್ರಹಿಸಿ ನನ್ನನ್ನು ಕಟಾಕ್ಷಿಸಿ ಋಣವಿಮುಕ್ತನನ್ನು ಮಾಡು " ಎಂದು ಪ್ರಾರ್ಥಿಸಿದನು.

ವಿಶ್ವಾಮಿತ್ರನು " ನೀನು ಯಾತಕ್ಕೋಸ್ಕರ ಇಷ್ಟುಪ್ರಯಾಸಪಟ್ಟೆ; ಈ ಕನ್ಯೆಯನ್ನು ಮೊದಲೇ ನನಗೆ ಕೊಟ್ಟಿದ್ದರೆ ಗುರುದಕ್ಷಿಣೆಗಾಗಿ ಇವ

ಳನ್ನು ಪರಿಗ್ರಹಿಸಿ ಅವಳಲ್ಲಿ ನಾನು ನಾಲ್ಕುಮಂದಿ ಮಕ್ಕಳನ್ನು ಪಡೆಯುತ್ತಿದ್ದೆನಲ್ಲಾ! ಇನ್ನುಮೇಲೆ ಆ ವಿಚಾರವ್ಯಾತಕ್ಕೆ! ಈಗ ನಾನು ಒಬ್ಬ ಮಗನನ್ನು ಪಡೆಯುವದಕ್ಕಾಗಿ ಈಕೆಯನ್ನು ಪರಿಗ್ರಹಿಸುತ್ತೇನೆ ; ಈ ಅಶ್ವಗಳನ್ನು ನನ್ನ ಆಶ್ರಮದಲ್ಲಿ ಕಟ್ಟಿಹಾಕು" ಎಂದು ನುಡಿದು ಆ ಸ್ತ್ರೀಯೊಡಗೂಡಿ ಭೋಗಪಟ್ಟು ಆಕೆಯಲ್ಲಿ ಅಷ್ಟಕನೆಂಬ ಮಗನನ್ನು ಪಡೆದು ಆತನಿಗೆ ಆ ಕುದುರೆಗಳನ್ನು ಕೊಟ್ಟು ಸೋಮಪುರಕ್ಕೆ ಸಮಾಸವಾದ ಕನ್ಯಾಕುಬ್ಜಪುರಕ್ಕೆ ಕಳುಹಿಸಿ ಆ ಕನ್ಯೆಯನ್ನು ಯಥಾಪ್ರಕಾರವಾಗಿ ಗಾಲವನಿಗೆಕೊಟ್ಟು ತಾನು ವನದಲ್ಲಿ ತಪೋನಿಷ್ಠನಾಗಿದ್ದನು.

ಆ ಬಳಿಕ ಗಾಲವನು ಗರುಡನೊಡಗೂಡಿ ಗುರುದಕ್ಷಿಣೆಯನ್ನು ಕೊಟ್ಟು ಆ ಕನ್ಯೆಯನ್ನು ನೋಡಿ "ಎಲೈ ಮಾಧವಿಯೇ, ನಿನ್ನ ಗರ್ಭದಲ್ಲಿ ದಾನಶೀಲನಾದ ಒಬ್ಬ ಮಗನೂ ಮಹಾಶೂರನಾದ ಒಬ್ಬ ಮಗನೂ ಸತ್ಯಧರ್ಮಗಳಲ್ಲಿ ವಿಶೇಷವಾಗಿ ಆಸಕ್ತನಾದ ಮತ್ತೊಬ್ಬ ಮಗನೂ ಯಾಗದಲ್ಲಿ ಆಸಕ್ತಿಯುಳ್ಳ ಇನ್ನೊಬ್ಬ ಮಗನೂ ಸಹ ಹುಟ್ಟಿದರು ; ಅವರಿಂದ ನಿನ್ನ ತಂದೆಯಾದ ಯಯಾತಿಯು ಪುಣ್ಯವಂತನಾಗಿ ಪಿತೃಗಳನ್ನು ಉದ್ಧಾರಮಾಡಿದನು ; ನಿನ್ನದೆಸೆಯಿಂದ ಯಯಾತಿಯೂ ನಾನೂ ಸಹ ಕೃತಕೃತ್ಯರಾದೆವು" ಎಂದು ನುಡಿದು ಆಕೆಯನ್ನು ಕರೆದುಕೊಂಡು ಹೋಗಿ ಯಯಾತಿಗೆ ಒಪ್ಪಿಸಿ ಗರುತ್ಮಂತನನ್ನು ಕಳುಹಿಸಿಕೊಟ್ಟು ತಾನು ತಪಸ್ಸನ್ನು ಮಾಡುವದಕ್ಕೆ ವನಕ್ಕೆ ಹೋದನು.

ಆ ಬಳಿಕ ಯಯಾತಿಯು ತನ್ನ ಮಗಳಾದ ಮಾಧವಿಗೆ ಸ್ವಯಂವರವಾಗಿ ಮದುವೆ ಮಾಡುವದಕ್ಕೆ ಯತ್ನಮಾಡಿ ಗಂಗಾ ಯಮುನಾ ಮಧ್ಯದಲ್ಲಿರುವ ಭರದ್ವಾಜಾಶ್ರಮದಲ್ಲಿ ಆ ಕನ್ಯೆಯನ್ನು ರಥದಮೇಲೆ ಕುಳ್ಳಿರಿಸಿ ಪೂಮಾಲೆಯನ್ನು ಕೊಟ್ಟು "ಬೇಕಾದ ವರನನ್ನು ವರಿಸು" ಅಂದನು.

ಸಹೋದರರಾದ ಪೂರು ಯದು ಮೊದಲಾದವರು ಸಂಗಡ ಬರಲು ರಮಣೀಶಿರೋಮಣಿಯಾದ ಮಾಧವಿಯು ತನ್ನನ್ನು ವರಿಸುವದಕ್ಕಾಗಿ ಬಂದ ನಾನಾ ದೇಶಾಧಿಪತಿಗಳಾದ ಅರಸುಗಳನ್ನೂ ಋಷಿಗಳನ್ನೂ ಮಹರ್ಷಿಗಳನ್ನೂ ನಾಗ ಯಕ್ಷ ಗಂಧರ್ವರು ಮೊದಲಾದವರನ್ನೂ ಪಶು ಪಕ್ಷಿ ಮೃಗಗಳನ್ನೂ ಪರ್ವತ ವೃಕ್ಷ ವನಾಧಿ ದೇವತೆಗಳನ್ನೂ ನೋಡಿ ಪ್ರದಕ್ಷಿ

ಣವಾಗಿ ರಥದಿಂದ ಇಳಿದು "ವನವನ್ನೇ ಸೇರಿಸುವೆನು" ಎಂದು ನುಡಿದು ಬಂದು ಪುಣ್ಯಾಶ್ರಮವನ್ನು ಸೇರಿ ಉಪವಾಸ ಮೊದಲಾದ ವ್ರತಗಳನ್ನೂ ನಿಯಮಗಳನ್ನೂ ಆಚರಿಸುತ್ತ ವೈಡೂರ್ಯ ರತ್ನದ ಮೊಳಕೆಗಳಂತೆ ಹೊಳೆಯುತ್ತ ಮೃದುವಾಗಿ ಹಸುರಾಗಿರುವ ಎಳೇ ಗರಿಕೆಗಳನ್ನು ಭಕ್ಷಿಸುತ್ತ ನಾನಾವಿಧವಾದ ಮೃಗಗಳೊಳಗೆ ತಾನೂ ಒಂದು ಮೃಗದಹಾಗೆ ಇದ್ದುಕೊಂಡು ನಿರ್ಮಲವಾಗಿಯೂ ಶೀತಳವಾಗಿಯೂ ಮಧುರವಾಗಿಯೂ ಇರುವ ಪುಣ್ಯನದೀ ಜಲವನ್ನು ಕುಡಿಯುತ್ತ ಯಾರಿಗೂ ಹೋಗುವದಕ್ಕೆ ಅಶಕ್ಯವಾಗಿ ಘೋರವಾದ ಅರಣ್ಯದಲ್ಲಿ ತಿರುಗುತ್ತಲಿರುವ ಹೆಣ್ಣು ಹುಲ್ಲೆಗಳೊಳಗೆ ತಾನೂ ಒಂದು ಹುಲ್ಲೆಯಹಾಗೆ ಸಂಚರಿಸುತ್ತ ಬ್ರಹ್ಮಚರ್ಯದಿಂದ ಅನೇಕ ಧರ್ಮಗಳನ್ನಾಚರಿಸುತ್ತಲಿದ್ದಳು.

೧೪ ನೇ ಅಧ್ಯಾಯ.

ಆ ಬಳಿಕ ಯಯಾತಿರಾಯನು ಧರ್ಮಕ್ಕೆ ಅವಿರುದ್ಧವಾದ ಸುಖವನ್ನು ಅನುಭವಿಸುತ್ತ ಕಾಮೋಪಭೋಗಗಳಿಂದ ತೃಪ್ತಿಯನ್ನು ಪಡದು ಪರಮ ಸಂತೋಷದಿಂದ ಕಳಾಕಾಷ್ಠನಿಮೇಷಾದಿಗಳಿಂದೆಣಿಸಿದರೂ ತಿಲಾಂಶವು ಹೆಚ್ಚುಕಡಿಮೆಯಿಲ್ಲದೆ ಸಾವನಾಖ್ಯಸಂವತ್ಸರ ರೀತಿಯಿಂದ ಸಾವಿರ ವರುಷಗಳು ಆಯಿತೆಂದು ನಿಶ್ಚೈಸಿ ಪುತ್ರನಾದ ಪೂರುವನ್ನು ಕರದು "ಎಲೈ ಕುಮಾರನೇ, ನೀನು ಒಳ್ಳೇಮಗನಾದ್ದರಿಂದ ನಿನ್ನ ಯವ್ವನವನ್ನು ನನಗೆ ಕೊಟ್ಟೆ; ಅದರಿಂದ ನನ್ನ ಮನಸ್ಸಿಗೆ ಬಂದರೀತಿಗೆ ದೇಶಕಾಲಯೋಗ್ಯಂಗಳಾದ ಸಕಲಭೋಗಗಳನ್ನನುಭವಿಸಿ ನಿನ್ನಲ್ಲಿ ಅಧಿಕವಾಗಿ ಸಂತೋಷಪಟ್ಟೆನು; ಆ ಯವ್ವನವನ್ನು ಸಾಮ್ರಾಜ್ಯದೊಡನೆ ಕೊಡುತಲಿದ್ದೇನೆ ತಕ್ಕೋ; ನೀನು ನನಗೆ ಪ್ರೀತಿಯು ಮಾಡಿದ ಸುಪುತ್ರನಾದ್ದರಿಂದ ದೀರ್ಘಾಯುಷ್ಯವುಂಟಾಗಿ ನಿನ್ನ ಯವ್ವನವು ಸ್ಥಿರವಾಗಿರಲಿ!" ಎಂದು ಅನುಗ್ರಹಿಸಿ ತನ್ನ ಮುದಿತನವನ್ನು ತಾನೇ ತಕ್ಕೊಂಡು ಯವ್ವನವನ್ನು ಪೂರುವಿಗೆ ಕೊಟ್ಟನು.

ಆ ಬಳಿಕ ಪೂರುವಿಗೆ ಸಾಮ್ರಾಜ್ಯ ಪಟ್ಟಾಭಿಷೇಕವನ್ನು ಮಾಡುವದಕ್ಕುದ್ಯೋಗಿಸಲು ಬ್ರಾಹ್ಮರು ಮೊದಲಾದ ಪಾರಜನರು ಆ ಮಹಾ

ರಾಯನ ಸಮುಖಕ್ಕೆ ಬಂದು " ಎಲೈ ಮಹಾರಾಯನೇ, ನೀನು ಅರಿಯದಿರುವ ಧರ್ಮಗಳು ಲೋಕದಲ್ಲಿಲ್ಲ ; ಲೋಕಪೂಜ್ಯನಾಗಿ ಶುಕ್ರಾಚಾರ್ಯನ ದೌಹಿತ್ರನಾಗಿ ನಿನಗೆ ಪಟ್ಟಮಹಿಷಿಯಾದ ದೇವಯಾನಿಯ ಜ್ಯೇಷ್ಠಪುತ್ರನಾದ ಯದುವನ್ನು ಲಂಘಿಸಿ ಪೂರುವಿಗೆ ಪಟ್ಟವನ್ನು ಕಟ್ಟುವದು ಉಚಿತವಲ್ಲ; ಯದುವಿಗೆ ತಮ್ಮನಾದ ತುರ್ವಸು ಆತನಿಗೆ ತಮ್ಮನಾದ ಶರ್ಮಿಷ್ಠೆಯ ಮಗನಾದ ದ್ರುಹ್ಯನು ಆತನಿಗೆ ತಮ್ಮನಾದ ಅನುವು ಈ ನಾಲ್ಕುಮಂದಿ ಜ್ಯೇಷ್ಠಕುಮಾರರನ್ನು ಅತಿಕ್ರಮಿಸಿ ಕನಿಷ್ಠನಾದ ಪೂರುವಿಗೆ ಹ್ಯಾಗೆ ಪಟ್ಟವನ್ನು ಕಟ್ಟುವದು ! ಈ ವಿವರವನ್ನು ನಿನಗೆ ಅರಿಕೆಮಾಡುವದಕ್ಕೆ ಬಂದೆವು ; ನಿಮ್ಮ ಕುಲಕ್ಕೆ ತಕ್ಕಂಥಾ ಧರ್ಮವನ್ನೇ ಆಚರಿಸಬೇಕು" ಅಂದರು.

ಯಯಾತಿರಾಯನು ಪೌರಜನರನ್ನು ಕುರಿತು " ನೀವು ನನ್ನನ್ನು ಕೇಳಿದ ಪ್ರಶ್ನೆಗೆ ಉತ್ತರವನ್ನು ಹೇಳುತಲಿದ್ದೇನೆ ಕೇಳಿ : ಜ್ಯೇಷ್ಠಕುಮಾರನಾದ ಯದುವು ನನ್ನ ವಾಕ್ಯವನ್ನು ಪರಿಪಾಲಿಸದೆ ಹೋದನು ; ತಂದೆಯ ವಾಕ್ಯವನ್ನತಿಕ್ರಮಿಸಿದವನು ಪುತ್ರನಲ್ಲವೆಂದೂ ತಾಯಿ ತಂದೆಗಳಿಗೆ ಅನುಕೂಲವಾಗಿ ನಡೆಯುವವನೆ ಪುತ್ರನೆಂದೂ ದೊಡ್ಡವರು ಹೇಳುವರು; ಇಂಥಾ ಪುತ್ರಶಬ್ದಕ್ಕೆ ಅರ್ಥವನ್ನು ಹೇಳುತಲಿದ್ದೇನೆ ಕೇಳಿ : ' ಪುತ್ ' ಎಂಬ ಶಬ್ದವು ನರಕವನ್ನು ಹೇಳುವದು ; ಆ ನರಕವೇ ದುಃಖವೆನಿಸಿಕೊಳ್ಳುವದು ; ' ತ್ರ ' ಎಂಬ ಶಬ್ದವು ರಕ್ಷಣೆಯನ್ನೇಳುವದು ; ಅತಿ ದುಃಖರೂಪವಾದ ನರಕದ ದೆಶೆಯಿಂದ ರಕ್ಷಿಸುವನಾದ್ದರಿಂದ ಮಗನು ' ಪುತ್ರನು ' ಎನಿಸಿಕೊಳ್ಳುವನು ; ಅಂಥಾ ಪುತ್ರನು ಪಿತೃಗಳನ್ನೂ ದೇವತೆಗಳನ್ನೂ ಋಷಿಗಳನ್ನು ಪೂಜಿಸುವವನಾದ್ದರಿಂದ ತನಗೆ ಪ್ರತಿನಿಧಿಯಾಗಿರುವನು ; ಎಷ್ಟು ಮಂದಿ ಮಕ್ಕಳಿದ್ದರೂ ಅವರೊಳಗೆ ಗುಣಗಳಿಂದ ದೊಡ್ಡವನು ಜ್ಯೇಷ್ಠನೇ ಹೊರ್ತಾಗಿ ಜನ್ಮದಿಂದ ದೊಡ್ಡವನು ಜ್ಯೇಷ್ಠನಲ್ಲ ; ಗುಣವಂತನಾದ ಪುತ್ರನ ದೆಶೆಯಿಂದಲೇ ತಂದೆಗೆ ಸಮಸ್ತ ಧರ್ಮಗಳೂ ಲಭಿಸುವವು ; ಅದು ಹ್ಯಾಗೆಂದರೆ : ಯದು ಮೊದಲಾದ ನಾಲ್ಕುಮಂದಿ ಮಕ್ಕಳೂ ನನ್ನ ವಾಕ್ಯವನ್ನು ಲಂಘಿಸಿದರೂ ಪೂರು ಒಬ್ಬನೇ ನನ್ನ ವಾಕ್ಯವನ್ನು ಕೇಳಿ ಮುದಿತನವನ್ನು ತಕ್ಕೊಂಡು ತನ್ನ ಯವ್ವನವನ್ನು ನನಗೆ ಕೊಟ್ಟನು ; ಹೃದಯದ ದೆಶೆಯಿಂದ ಪುತ್ರರೂಪದಿಂದ ಹುಟ್ಟುವನೆಂಬ ವೇದವಚನವು

ನನ್ನ ಹೃದಯವನ್ನು ಅನುವರ್ತಿಸಿ ಈತನ ದೆಶೆಯಿಂದ ಸಾರ್ಥಕವಾಯಿತು ; ಇದಲ್ಲದೆ ಶುಕ್ರಾಚಾರ್ಯನು ಮೊದಲು ನನ್ನನ್ನು ಶಪಿಸುವ ಸಮಯದಲ್ಲಿ ನನಗೆ ಅನುಕೂಲವಾಗಿ ನಡಕೊಳ್ಳುವ ಮಗನಿಗೆ ರಾಜ್ಯವನ್ನು ಕೊಡಲು ಅಪ್ಪಣೇ ಕೊಟ್ಟದ್ದರಿಂದ ಅತನ ಅಪ್ಪಣೆಯಿಂದ ಈತನಿಗೆ ಪಟ್ಟವನ್ನು ಕಟ್ಟುತಲಿದ್ದೇನೆ ; ಈ ಅರ್ಥಕ್ಕೆ ನೀವು ಸಮ್ಮತಿಸಬೇಕು ” ಅಂದನು.

ಪೌರಜನರು ಆತನ ವಾಕ್ಯವನ್ನು ಕೇಳಿ ಸಂತೋಷಪಟ್ಟು “ ಪಿತೃವಾಕ್ಯವನ್ನು ಪರಿಪಾಲನೆ ಮಾಡುವಂಥಾ ಪುತ್ರನು ಸಕಲ ಶುಭಗಳಿಗೆ ಪಾತ್ರನೆಂದು ಶ್ರುತಿ ಸ್ಮೃತಿ ಇತಿಹಾಸ ಪುರಾಣಗಳಲ್ಲಿ ನಿಶ್ಚೈಸಿರುವದ್ದರಿಂದ ನಿನ್ನಲ್ಲಿ ಪ್ರೀತಿಮಾಡಿದ ಕನಿಷ್ಠಕುಮಾರನಾದ ಪೂರು ಪಟ್ಟಾಭಿಷೇಕಕ್ಕೆ ಅರ್ಹನು ; ಅದಲ್ಲದೆ ಮಹಾನುಭಾವನಾದ ಶುಕ್ರನ ವಚನವು ವ್ಯರ್ಥವಾಗದೆ ಇರುವದ್ದರಿಂದ ಈತನಿಗೆ ಶೀಘ್ರವಾಗಿ ಪಟ್ಟವನ್ನು ಕಟ್ಟು ” ಅಂದರು.

ಆ ಬಳಿಕ ಯಯಾತಿರಾಯನು ಪೌರಜನರ ವಚನವನ್ನು ಕೇಳಿ ಶಾಸ್ತ್ರೋಕ್ತ ಪ್ರಕಾರದಿಂದ ಪೂರುವಿಗೆ ಪಟ್ಟವನ್ನು ಕಟ್ಟಿ ಯದು ಮೊದಲಾದ ಮಿಕ್ಕ ನಾಲ್ಕುಮಂದಿ ಕುಮಾರರನ್ನು ಕರದು ಕಡೆಗಡಿಗಳನ್ನು ಕಾದುಕೊಂಡಿರುವಹಾಗೆ ಕಟ್ಟುಮಾಡಿ ವನವಾಸಕ್ಕೋಸ್ಕರ ದೀಕ್ಷಿತನಾಗಿ ಧರ್ಮಪತ್ನಿಗಳೊಡನೆಯೂ ಬಹುಮಂದಿ ತಪಸ್ವಿಗಳಾದ ಬ್ರಾಹ್ಮರೊಡನೆಯೂ ಕೂಡಿ ಪಟ್ಟಣವನ್ನು ಬಿಟ್ಟು ವನಕ್ಕೆ ಹೋಗಿ ಘೋರವಾದ ತಪಸ್ಸನ್ನು ಮಾಡುತ್ತಿದ್ದನು.

ಇಲ್ಲಿ ಯದು ಎಂಬ ಜೇಷ್ಠ ಕುಮಾರನಿಗೆ ಹುಟ್ಟಿದವರು ಯಾದವರೆನಿಸಿಕೊಂಡರು ; ತುರ್ವಸುವಿನ ವಂಶದಲ್ಲಿ ಹುಟ್ಟಿದವರು ತುರುಕರೆನ್ನಿಸಿಕೊಂಡರು ; ದೃಹ್ಯನ ವಂಶದಲ್ಲಿ ಹುಟ್ಟಿದವರು ಭೋಜರೆನಿಸಿಕೊಂಡರು; ಅನುವೆಂಬವನ ವಂಶದಲ್ಲಿ ಹುಟ್ಟಿದವರು ಮೊಗಲರೆನಿಸಿಕೊಂಡರು ; ಪೂರುವಿನ ವಂಶದಲ್ಲಿ ಹುಟ್ಟಿದವರು ಪೌರವರೆನಿಸಿಕೊಂಡರು.

ಆ ಬಳಿಕ ಯಯಾತಿರಾಯನು ವಾನಪ್ರಸ್ಥಾಶ್ರಮದಲ್ಲಿದ್ದು ಜಿತೇಂದ್ರಿಯನಾಗಿ ಕೋಪವನ್ನು ಬಿಟ್ಟು ಪಿತೃದೇವತಾಗಣಗಳಿಗೆ ತೃಪ್ತಿಯನ್ನು ಮಾಡುತ ವೇದೋಕ್ತಪ್ರಕಾರವಾಗಿ ವಾನಪ್ರಸ್ಥ ವಿಧಾನಗಳಿಂದ ಅಗ್ನಿಹೋತ್ರಗಳನ್ನು ಮಾಡುತ ಕಂದಮೂಲ ಫಲಾದಿಗಳಿಂದ ಅತಿಥಿಸತ್ಕಾರಗ

ಳನ್ನು ಶಿಲೋಪವೃತ್ತಿಗಳಿಂದ ಜೀವನವನ್ನು ಮಾಡುತ, ಅತಿಥಿ ಪೂಜೆ ಯಿಂದ ವಿಶೇಷವಾದ ಅನ್ನದಿಂದ ಶರೀರಧಾರಣೆಯನ್ನು ಮಾಡುತ್ತ ಸಾವಿರ ವರುಷಗಳನ್ನು ಕಳದು ಆ ಬಳಿಕ ಮೂವತ್ತು ವರುಷಗಳು ವುದಕದಿಂದ ಲೇ ಶರೀರಧಾರಣೆಯನ್ನುಮಾಡಿ ಮತ್ತೊಂದು ವರುಷವು ವಾಯುವನ್ನೇ ಭಕ್ಷಿಸಿಕೊಂಡಿದ್ದು ಒಂದು ವರುಷವು ಪಂಚಾಗ್ನಿಮಧ್ಯದಲ್ಲಿ ತಪಸ್ಸನ್ನು ಮಾಡಿ ಮತ್ತು ಆರುತಿಂಗಳು ವಾಯುವನ್ನು ಭಕ್ಷಿಶಿಕೊಂಡು ಒಂದು ಪಾ ದದಿಂದ ನಿಂತು ತಪಸ್ಸನ್ನು ಮಾಡಿ—ಈ ಪ್ರಕಾರದಿಂದ ನೂರು ವರ್ಷಗ ಳನ್ನು ಕಳದು ಮಹಾ ಯೋಗಶಾಲಿಯಾಗಿ ಸ್ವರ್ಗಕ್ಕೆ ಹೋದನು.

---

೧೫ ನೇ ಅಧ್ಯಾಯ.

ಆ ಬಳಿಕ ಯಯಾತಿರಾಯನು ಸ್ವರ್ಗಕ್ಕೆ ಹೋಗಿ ಸಿದ್ಧಸಾಧ್ಯ ಮರುದ್ಗಣಗಳಿಂದಲೂ ವಸುಗಳಿಂದಲೂ ಪೂಜಿತನಾಗಿ ದೇವಲೋಕದಿಂದ ಬ್ರಹ್ಮಲೋಕಕ್ಕೆ ಹೋಗಿ ಅಲ್ಲಿ ಬಹುಕಾಲವಿದ್ದು ಒಂದು ದಿವಸದಲ್ಲಿ ತಿರಿಗಿ ಸ್ವರ್ಗಕ್ಕೆ ಬಂದು ಇಂದ್ರನಿಂದ ಪೂಜಿಸಲ್ಪಟ್ಟವನಾಗಿ ಇಷ್ಟಕಥಾ ವಿನೋ ದಗಳಿಂದ ಹೊತ್ತುಕಳೆಯುತ್ತಿದ್ದನು ; ಇಂದ್ರನು ಆತನನ್ನು ಕಂಡು "ನಿ ನ್ನ ಕಡೆಯ ಕುಮಾರನಾದ ಪೂರುವು ನಿನ್ನ ಮುದಿತನವನ್ನು ಯಾವ ರೀತಿಯಿಂದ ಪರಿಗ್ರಹಿಸಿ ಭೂಲೋಕದಲ್ಲಿ ಸಂಚರಿಸುತ್ತಿದ್ದನು ? ಅಂಥಾ ಉ ಪಕಾರವನ್ನು ಮಾಡಿದ ಕುಮಾರನಿಗೆ ಸಾಮ್ರಾಜ್ಯವನ್ನು ಕೊಟ್ಟು ನೀನೇ ನೆಂದು ಹೇಳಿದೆಯೋ ಆ ಅರ್ಥವನ್ನು ಸತ್ಯವಾಗಿ ತಿಳುಹಿಸಬೇಕು" ಎಂದು ಕೇಳಿದನು.

ಯಯಾತಿರಾಯನು "ಕೇಳೈ ಇಂದ್ರನೇ, ನಾನು ಪೂರುವೆಂಬ ಮಗನನ್ನು ಕರದು 'ಈ ಗಂಗಾ ಯಮುನಾ ಮಧ್ಯದಲ್ಲಿರುವ ದೇಶದಲ್ಲಿ ನೀನು ರಾಜ್ಯವನ್ನು ಪರಿಪಾಲಿಸುತ್ತಾ ಇರು ; ನಿನ್ನ ಅಣ್ಣಂದಿರು ಕಡೆಗಡಿ ಗಳಲ್ಲಿದ್ದುಕೊಂಡು ಆ ದೇಶಗಳನ್ನು ರಕ್ಷಿಸುತ್ತಿರಲಿ ; ನೀನು ಧರ್ಮದಿಂ ದಲೇ ರಾಜ್ಯವನ್ನಾಳು ; ದ್ವೇಷವನ್ನು ಕಪಟವನ್ನು ಕೋಪವನ್ನು ಕುಟಿ ಲವನ್ನು ಮತ್ಸರವನ್ನು ವೈರವನ್ನೂ ಒಬ್ಬರಲ್ಲಾದರೂ ಮಾಡಬೇಡ ; ತಾ ಯಿತಂದೆಗಳಲ್ಲಿಯೂ ವಿದ್ವಾಂಸರಲ್ಲಿಯೂ ತಪಸ್ಸನ್ನು ಮಾಡುವಂಥಾವರ

ಲ್ಲಿಯೂ ಕ್ಷಮೆಯುಳ್ಳವರಲ್ಲಿಯೂ ಬುದ್ಧಿವಂತರಲ್ಲಿಯೂ ಅವಮಾನವನ್ನು ಮಾಡಬೇಡ ; ಕೈಲಾಗದಿದ್ದವನು ಕೋಪಾದಿಗಳು ಮಾಡುವನೇ ಹೊರ್ತಾಗಿ ಸಮರ್ಥನಾದವನು ಮಾಡನು. ದುರ್ಜನನು ಸಜ್ಜನನನ್ನು, ಬಲಹೀನನು ಬಲವಂತನನ್ನು, ಕುರೂಪಿಯಾದವನು ರೂಪವಂತನನ್ನು, ಧನಹೀನನು ಧನವಂತನನ್ನು, ಕರ್ಮಭ್ರಷ್ಟನು ಕರ್ಮವನ್ನು ಮಾಡುವಂಥಾವನನ್ನು, ಧರ್ಮಹೀನನು ಧಾರ್ಮಿಕನನ್ನು ಗುಣಹೀನನು ಗುಣವಂತನನ್ನೂ ದ್ವೇಷಿಸುವರು ; ಇದು ಕಲಿಕಾಲದ ಲಕ್ಷಣವು. ದುರ್ಜನರು ಮೊದಲಾದ ನಿಕೃಷ್ಟಪುರುಷರು ಸಜ್ಜನರು ಮೊದಲಾದ ಉತ್ತಮ ಪುರುಷರಲ್ಲಿ ದ್ವೇಷಿಸದೇ ಪ್ರೀತಿ ಮಾಡುವದು ಕೃತಯುಗದ ಲಕ್ಷಣ. ಬ್ರಾಹ್ಮಣರು ಕ್ಷತ್ರಿಯರು ವೈಶ್ಯರು ಶೂದ್ರರು—ಈ ನಾಲ್ಕು ಜಾತಿಯವರೂ ಸತ್ಪುರುಷರ ಸಹವಾಸದಿಂದ ಉತ್ತಮ ಕೀರ್ತಿಸಂಪನ್ನರಾಗುವರು ; ಇಂಥಾ ಸಹವಾಸವೂ ವಿವೇಕವೂ ಇಲ್ಲದ್ದರಿಂದ ನಿನ್ನ ಅಣ್ಣಂದರಾದ ಯದು ಮೊದಲಾದವರು ರಾಜ್ಯಕ್ಕೆ ಅರ್ಹರಲ್ಲದೆ ಕಡೆಗಡಿಗಳಲ್ಲಿ ನಿಂತರು ' ಎಂದು ಹಿತವನ್ನು ಹೇಳಿದೆನು " ಅಂದನು.

ಇಂದ್ರನು " ನೀನು ಸಕಲ ಧರ್ಮಗಳನ್ನು ತಿಳಿದಿರುವದ್ದರಿಂದ ಉತ್ತಮವಾದ ಲೋಕ ವೃತ್ತಾಂತವನ್ನು ನನಗೆ ತಿಳುಹಿಸಬೇಕು" ಅಂದನು.

ಯಯಾತಿಯು " ಕ್ರೋಧವಿಲ್ಲದವನು ಕ್ರೋಧವುಳ್ಳವನಿಗಿಂತಲೂ ಕ್ಷಮೆಯುಳ್ಳವನು ಕ್ಷಮೆಯಿಲ್ಲದಿರುವವನಿಗಿಂತಲೂ ಮನುಷ್ಯರು ತಿರ್ಯಗ್ಜಾತಿಗಳಿಂದ ಪಶುಪಕ್ಷಿಗಳಿಗಿಂತಲೂ ವಿದ್ವಾಂಸರು ಮೂಢರಿಗಿಂತಲೂ ಉತ್ತಮರೆನಿಸಿಕೊಳ್ಳುವರು ; ಮತ್ತು ಕ್ಷಮೆಯುಳ್ಳವನು ತನ್ನನ್ನು ನಿಂದಿಸಿದರೂ ಸಹಿಸಿಕೊಂಡು ಏನೂ ಅನ್ನದೆ ದೈನ್ಯವನ್ನು ಐದಿದರೆ ಆತನ ದೈನ್ಯವೇ ದೂಷಿಸಿದವನ ಸುಕೃತವನ್ನು ಪಹರಿಸಿ ಅವನನ್ನು ದಹಿಸುವದಾದ್ದರಿಂದ ಪರರ ಮರ್ಮಗಳನ್ನು ಭೇದಿಸುವಂಥಾವನನ್ನೂ ಪರರನ್ನು ದುರ್ಭಾಷೆಗಳನ್ನಾಡುವವನನ್ನೂ ಚಾಡಿಹೇಳಿ ಪರರ ಮನೆತನವನ್ನು ಮುಳುಗಿಸುವವನನ್ನೂ ಕಪಟವನ್ನು ಮನಸ್ಸಿನಲ್ಲಿರಿಸಿಕೊಂಡು ಮಾತನಾಡುವಂಥಾವನನ್ನೂ ಶೀಘ್ರವಾಗಿ ಲಕ್ಷ್ಮಿಯು ಬಿಟ್ಟು ಹೋಗುವಳು ; ನೀಚನ ದೆಸೆಯಿಂದ ಒಳ್ಳೇ ವಸ್ತು ಪರಿಗ್ರಹವನ್ನು ಮಾಡಬಾರದು ; ಮತ್ತೊಬ್ಬರ ದುಃಖಕ್ಕೆ ಕಾರಣವಾದ ಅಶುಭ ವಾಕ್ಯಂಗಳನ್ನಾಡುವವನು ನರಕವನ್ನೈದುವನಾದ್ದರಿಂದ

ಶುಭವಾದ ವಾಕ್ಯಗಳನ್ನೇ ಹೇಳಬೇಕು ; ಪೂರ್ವಜನ್ಮದಲ್ಲಿ ಮಾಡಿದ ದುಷ್ಕರ್ಮಗಳನ್ನು ಮಹಾತ್ಮರ ಅನುಗ್ರಹದಿಂದ ಪರಿಹರಿಸಿಕೊಳ್ಳಬೇಕು ; ಮುಂದೆ ಸದ್ಗತಿಯಂ ಪಡೆಯುವದಕ್ಕೆ ಸಜ್ಜನ ಸಂಗತಿಯನ್ನೇ ಸಂಪಾದಿಸಬೇಕು ; ಯಾವಾಗಲೂ ಸತ್ಪುರುಷರು ನಡೆಯುವ ರೀತಿಗೆ ಸದಾಚಾರವನ್ನೇ ಆಚರಿಸಬೇಕು ; ಆ ಸತ್ಪುರುಷರೊಂದು ಮಾತು ಕಠಿಣವಾಗಿ ಹೇಳಿದರೂ ಸಹಿಸಬೇಕು ; ಇದು ಸಜ್ಜನ ಲಕ್ಷಣವೆನ್ನಿಸಿಕೊಳ್ಳುವದು. ಕಠಿಣ ವಾಕ್ಯಗಳೆಂಬ ಬಾಣಗಳು ಇತರ ಬಾಣಗಳಿಗಿಂತಲು ಅಧಿಕವಾಗಿ ಪರರನ್ನು ಯಾವಾಗಲು ಮರ್ಮಂಗಳನ್ನೇ ಸೋಂಕಿ ಭೇದಿಸುವವಾದ್ದರಿಂದ ಇಥಾ ಕಠಿಣ ವಾಕ್ಯಂಗಳನ್ನು ವಿವೇಕಿಯಾದವನು ನುಡಿಯಬಾರದು ; ಸಕಲ ಭೂತಗಳಲ್ಲಿಯೂ ಮೈತ್ರಿಯೆಯು, ದಯೆಯು, ದಾನವು, ಮಧುರವಾಕ್ಯವು ಎಂಬ ನಾಲ್ಕು ಧರ್ಮಗಳಿಗೆ ಸಮಾನವಾದ ವಶೀಕರಣ ಸಾಧನವು ಮೂರು ಲೋಕಗಳಲ್ಲಿಯು ದುರ್ಲಭವಾದ್ದರಿಂದ ಕಠಿಣ ವಾಕ್ಯಗಳನ್ನು ಬಿಟ್ಟು, ಹಿತವಾದ ವಾಕ್ಯಗಳನ್ನೇ ನುಡಿಯುತ್ತ, ಪೂಜ್ಯರನ್ನು ಯಾವಾಗಲು ಪೂಜಿಸುತ್ತ, ಯಾವ ಕಾರ್ಯವನ್ನಾದರೂ ದೊಡ್ಡವರನ್ನು ಕೇಳಿ ಮಾಡಬೇಕು" ಎಂದು ನುಡಿದನು.

ಇಂದ್ರನು "ಕೇಳೈ ಯಯಾತಿಯೇ, ನೀನು ಸರ್ವ ಕರ್ಮಗಳನ್ನೂ ಮಾಡಿ ವನಕ್ಕೆ ಹೋಗಿ ಬಹು ತಪಸ್ಸುಗಳನ್ನು ಮಾಡಿದ್ದೀ ; ಅಂಥಾ ತಪೋನಿಷ್ಠನಾದ ನಿನಗೆ ಸಮಾನರು ಲೋಕದಲ್ಲಿಲ್ಲವೆಂದು ನನ್ನ ಮನಸ್ಸಿನಲ್ಲಿ ತೋರುತ್ತಲಿದೆ ; ನಿನಗೆ ತೋರಿದ ರೀತಿಯನ್ನು ಹೇಳಬೇಕು" ಅಂದನು.

ಯಯಾತಿರಾಯನು "ದೇವ ಮನುಷ್ಯ ಗಂಧರ್ವ ಮಹರ್ಷಿಗಣಗಳಲ್ಲಿ ಯಾರಲ್ಲೂ ನನ್ನಷ್ಟು ತಪಸ್ಸನ್ನು ಮಾಡಿದವನು ಒಬ್ಬನೂ ಇಲ್ಲ" ಎಂದು ಅಹಂಕಾರದಿಂದ ಹೇಳಿದನು.

ಇಂದ್ರನು "ನಿನಗೆ ಸಮಾನರಾದವರನ್ನೂ ನಿನಗಿಂತಲೂ ಅಧಿಕರಾದವರನ್ನೂ ನಿನಗಿಂತಲೂ ವರ್ಣ ಶ್ರೇಷ್ಠರಾದ ಬ್ರಹ್ಮಋಷಿಗಳನ್ನೂ ನಿನ್ನ ತಪೋವಿಶೇಷದಿಂದ ಧಿಕ್ಕರಿಸಿದೆ ; ಆದಕಾರಣ ನಿನ್ನಿಂದ ಸಂಪಾದಿಸಲ್ಪಟ್ಟ ಪುಣ್ಯಗಳು ನಷ್ಟವಾಗಿ ಪುಣ್ಯಲೋಕದಲ್ಲಿ ವಾಸವು ಮುಗಿದದ್ದರಿಂದ ನೀನಿನ್ನು ಭೂಲೋಕದಲ್ಲಿ ಬಾಳಲುಳ್ಳವನು" ಅಂದನು.

ಯಯಾತಿಯು "ನೀನು ಹೇಳಿದ ತೆರದಿಂದ ದೇವಋಷಿ ಗಂಧರ್ವ ಮನುಷ್ಯರನ್ನು ಅವಮಾನ ಮಾಡಿದ್ದರಿಂದ ನನ್ನ ಪುಣ್ಯವು ಕೆಟ್ಟು ನಾನು ಭೂಲೋಕದಲ್ಲಿ ಬಾಳಬೇಕಾದರೆ ಸಜ್ಜನರ ಸನ್ನಿಧಾನದಲ್ಲಿ ಬೀಳುವಹಾಗೆ ಅನುಗ್ರಹಿಸಬೇಕು" ಅಂದನು.

ಇಂದ್ರನು "ಸಜ್ಜನರ ಸಹವಾಸದಿಂದ ತಿರಿಗೂ ಸ್ವರ್ಗಕ್ಕೆ ಬರುತ್ತಿದ್ದೀ! ಇನ್ನು ಮೇಲಾದರು ಇದನ್ನುತಿಳಿದು ಸಮಾನರಲ್ಲಿಯೂ ಅಧಿಕರಲ್ಲಿಯೂ ಅವಮಾನವನ್ನು ಮಾಡಬೇಡ" ಅಂದನು.

ಆ ಬಳಿಕ ಯಯಾತಿಯು ದೇವತೆಗಳಿಗೆ ಸಂಚಾರಯೋಗ್ಯಗಳಾದ ಪುಣ್ಯಲೋಕಗಳನ್ನು ಬಿಟ್ಟು ಭೂಲೋಕಕ್ಕೆ ಬರುವ ಸಮಯದಲ್ಲಿ ಧರ್ಮವಿಧಾನ ತತ್ವಜ್ಞಾನವುಳ್ಳ ರಾಜಋಷಿಯಾದ ಅಷ್ಟಕನು ಆತನನ್ನು ಕಂಡು "ಎಲೈ ಮಹಾತ್ಮನೆ, ಇಂದ್ರನಿಗೆ ಸಮಾನನಾಗಿ ತೇಜೋವಿಶೇಷದಿಂದ ಪ್ರಕಾಶಿಸುವ ಅಗ್ನಿಪುರುಷನೋಪಾದಿಯಲ್ಲಿ ಬೆಳಗುತ್ತ ಮೇಗಾಂಧಕಾರದಿಂದ ಹೊರಟು ಬರುತ್ತಲಿರುವ ಸೂರ್ಯನೋಪಾದಿಯಲ್ಲಿರುವ ನೀನ್ಯಾರು? ಇಂಥಾ ನಿನ್ನನ್ನುಕಂಡು ಇಂಥಾವನೆಂದು ನಿಶ್ಚೈಸುವದಕ್ಕೆ ತೀರದೇ ಸಂದೇಹಪಡುತಲಿದ್ದೇನೆ; ಇಂದ್ರನಿಗೂ ವಿಷ್ಣುವಿಗೂ ಸಮಾನನಾಗಿ ಸೂರ್ಯನೋಪಾದಿಯಲ್ಲಿ ಬೆಳಗುತ್ತ ಅಂತರಿಕ್ಷದಲ್ಲಿ ನಿಂತಿರುವ ನಿನ್ನನ್ನು ಕಂಡು ಇಂಥಾವನು ಬೀಳುವದಕ್ಕೆ ಏನುಕಾರಣವೋ ಎಂದು ತಿಳಿಯುವದಕ್ಕೆ ಬಂದಿದ್ದೇನೆ! ನಿನ್ನನ್ನು ಕೇಳುವದಕ್ಕೆ ನಾನೆಷ್ಟರವನು! ನೀನು ನನ್ನನ್ನುಕಂಡು ಯಾರೆಂದ ಕೇಳದಿದ್ದರೂ ನನ್ನ ಮನಸ್ಸಿನಲ್ಲಿರುವ ಸಂದೇಹವನ್ನು ಪರಿಹರಿಸುವದಕ್ಕೋಸ್ಕರ ಕೇಳುತ್ತಲಿದ್ದೇನೆ; ನೀನು ಬೀಳುವದಕ್ಕೆ ಕಾರಣವೇನು? ದುಃಖವನ್ನೂ ಮೋಹವನ್ನೂ ಭಯವನ್ನೂ ಬಿಟ್ಟು ಸಜ್ಜನರ ಸನ್ನಿಧಾನದಲ್ಲಿದ್ದವರನ್ನು ಕೆಣಕುವದಕ್ಕೆ ದೇವೇಂದ್ರನೂ ಸಮರ್ಥನಲ್ಲ; ಸಂಪನ್ನರಾದ ಸಜ್ಜನರಿಗೆ ಸಜ್ಜನರೇ ರಕ್ಷಕರಾಗಿರುವರು; ಸ್ಥಾವರಜಂಗಮಾತ್ಮಕವಾದ ಪ್ರಪಂಚಕ್ಕೆ ರಕ್ಷಕರಾದ ಸಜ್ಜನರ ಸನ್ನಿಧಾನದಲ್ಲಿದ್ದರೆ ನಿನಗ್ಯಾತಕೆ ಭಯವು ಬಂದೀತು! ಅದು ಹ್ಯಾಗಂದರೆ ಸಂತಾಪಕಾರ್ಯಕ್ಕೆ ಅಗ್ನಿಪುರುಷನೂ ಕೃಷಿಧರ್ಮಕ್ಕೆ ಭೂಮಿಯೂ ಪ್ರಕಾಶಕ್ಕೆ ಸೂರ್ಯನೂ ಪ್ರಭುಗಳಾದ ರೀತಿಯಲ್ಲಿ ಸಜ್ಜನರಿಗೆ ಅಭ್ಯಾಗತನು ಪ್ರಭುವೆಂದು ತಿಳಿಯಬೇಕು" ಎಂದು ಕೇಳಿದನು.

ಯಯಾತಿರಾಯನು "ಕೇಳೈ ಅಷ್ಟಕನೇ, ನಾನು ನಹುಷನಿಗೆ ಮಗನೂ ಮತ್ತು ರಾಜ್ಯವನ್ನಾಳುವ ಪೂರುವಿಗೆ ತಂದೆಯೂ ಆದ ಯಯಾತಿರಾಯನೆಂಬವನು; ಸುಕೃತ ವಿಶೇಷದಿಂದ ದೇವಲೋಕವನ್ನು ಪಡದು ಸಕಲ ಭೂತಾವಮಾನವನ್ನು ಮಾಡಿದ್ದರಿಂದ ಪುಣ್ಯವು ಕೆಟ್ಟುಹೋಗಲು ಅಲ್ಲಿ ನಿಲ್ಲುವದಕ್ಕೆ ತೀರದೇ ತಿರಿಗು ಭೂಲೋಕದಲ್ಲಿ ಬೀಳುತಲಿದ್ದೇನೆ; ವಿದ್ಯೆಯುಲ್ಲಾದರೂ ತಪಸ್ಸಿನಲ್ಲಾದರೂ ವಯಸ್ಸಿನಲ್ಲಾದರೂ ಒಂದರಲ್ಲಿ ದೊಡ್ಡವನಾದವನು ದ್ವಿಜರಲ್ಲಿ ಪೂಜ್ಯನೆನಿಸಿಕೊಳ್ಳುವನು; ನಾನು ವಯೋವೃದ್ಧನಾದ್ದರಿಂದ ನಿನಗೆ ನಮಸ್ಕರಿಸಲಿಲ್ಲ" ಅಂದನು.

ಅಷ್ಟಕನು "ಲೋಕದಲ್ಲಿ ಮನುಷ್ಯನು ವಿದ್ವಾಂಸನಾಗದೆ ಹೋದರೆ ಆತನು ವಯಸ್ಸಿನಿಂದ ವೃದ್ಧನಾದರೂ ಅವನಿಗೆ ನಮಸ್ಕರಿಸ ಬಾರದು; ವಿದ್ವಾಂಸನಾದರೆ ವಯಸ್ಸಿನಿಂದ ಚಿಕ್ಕವನಾದರೂ ಅವನಿಗೆ ನಮಸ್ಕರಿಸಬೇಕು" ಅಂದನು.

ಯಯಾತಿರಾಯನು "ಕೇಳೈ ಅಷ್ಟಕನೆ, ವಿಹಿತ ಕರ್ಮಗಳಿಗೆ ಪ್ರತಿಕೂಲವಾಗಿ ನಡೆಯುವದೆ ಪಾಪವೆನ್ನಿಸಿಕೊಳ್ಳುವದು; ಅಂಥಾ ಪಾಪವನ್ನು ಮನುಷ್ಯನು ಮಾಡಿದರೂ ಮಾಡಿಸಿದರೂ ಅವಶ್ಯವಾಗಿ ಭೂಲೋಕಕ್ಕೆ ಹೋಗುವನು; ಸತ್ಪುರುಷರಾದವರು ತಮ್ಮ ಹೃದಯವು ಧರ್ಮಕ್ಕನುಕೂಲವಾಗಿರುವದ್ದರಿಂದ ಪಾಪವನ್ನು ಮಾಡರು. ಕೇಳೈ ಅಷ್ಟಕನೇ, ಹಸುಗಳು ಚಿನ್ನವು ರತ್ನಗಳು ಮೊದಲಾದ ಬಹು ಧನವನ್ನು ಸಂಪಾದಿಸಿದೆನು; ಅವು ಈಗ ನಷ್ಟವಾಯಿತು; ಈಗ ಎಷ್ಟು ಪ್ರಯತ್ನ ಮಾಡಿದರೂ ಧನವನ್ನು ಪಡೆಯುವದಕ್ಕೆ ಕೂಡದು; ಆದ್ದರಿಂದ ಗೋಹಿರಣ್ಯರತ್ನ ಮೊದಲಾದ ಧನವು ಅನಿತ್ಯವೆಂದೆಣಿಸಿ ಒಬ್ಬನಿಗೆ ಹಿತವನ್ನೆ ಬಯುಸುವಂಥಾ ಪುರುಷನು ಪರಲೋಕದಲ್ಲಿ ಸೌಖ್ಯವನ್ನನುಭವಿಸುವಹಾಗೆ ಮಾಡುವಂಥಾ ನಿತ್ಯವಾದ ಧರ್ಮವೆಂಬ ಧನದಲ್ಲಿ ಅನಾದರಣೆ ಮಾಡದೆ ಯಾವಾಗಲು ಸಂಪಾದಿಸುತ್ತಲಿರುವನು; ಹೀಗೆ ಧರ್ಮರೂಪವಾದ ಧನವೇ ನಿತ್ಯವೆಂದು ತಿಳಿದು ವೇದಶಾಸ್ತ್ರಗಳನ್ನೋದಿ, ಯಜ್ಞಗಳನ್ನುಮಾಡಿ, ತಪಸ್ಸಿನಿಂದ ದೇಹವನ್ನು ಕೃಶವಾಗಿ ಮಾಡಿದಂಥಾ ಪುರುಷನು ಮಹಾ ಧನಿಕನೆನಿಶಿಕೊಂಡು ಉತ್ತಮವಾದ ಲೋಕಗಳನ್ನು ಪಡೆಯುವನು; ವಿವೇಕಿಯಾದ ಪುರುಷನು ಸ್ಥಾವರ ಜಂಗಮಾತ್ಮಕವಾಗಿ ನಾನಾಪ್ರಕಾರವಾದ ಪ್ರಪಂಚ

ದಲ್ಲಿ ಪೂರ್ವಜನ್ಮದಲ್ಲಿ ಮಾಡಿದ ಕರ್ಮಾಧೀನನಾಗಿ, ಸಾಮರ್ಥ್ಯವನ್ನೂ ವ್ಯಾಪಾರವನ್ನೂ ಬಿಟ್ಟು, ನಷ್ಟವಾಗಿ ಹೋಗುವದನ್ನು ಕಂಡು ಬಹು ಧನವನ್ನು ಸಂಪಾದಿಸಿದನೆಂಬ ಗರ್ವವೂ ವೇದಶಾಸ್ತ್ರವನ್ನೋದಿದನೆಂಬ ಅಹಂಕಾರವೂ ಇಲ್ಲದಿದ್ದರೆ ಅಂಥಾ ಪುರುಷನು ಉತ್ತಮನೆನಿಸಿಕೊಳ್ಳುವನು; ಸುಖ ದುಃಖಗಳು ಪೂರ್ವಜನ್ಮದಲ್ಲಿ ಮಾಡಿದ ಕರ್ಮಗಳಿಗನುಗುಣವಾಗಿ ಲಭಿಸುವದೇ ಹೊರ್ತಾಗಿ ತನ್ನ ಶಕ್ತಿಯಿಂದ ಬರುವದಿಲ್ಲವೆಂದೂ ಪೂರ್ವಕೃತಕರ್ಮವೇ ಪ್ರಬಲವೆಂದೂ ಬುದ್ಧಿ ವಿಶೇಷದಿಂದ ತಿಳಿದು ಸುಖಬಂದರೆ ಸಂತೋಷವನ್ನೂ ದುಃಖಬಂದರೆ ಸಂತಾಪವನ್ನೂ ಪಡೆಯಬಾರದು ; ಅಷ್ಟೂ ಪೂರ್ವಾರ್ಜಿತ ಕರ್ಮದಿಂದಲೇ ಬರುವದೇ ಹೊರ್ತಾಗಿ ತನ್ನ ಬುದ್ಧಿಯಿಂದಲು ಶಕ್ತಿಯಿಂದಲು ಬರುವದಿಲ್ಲವೆಂದು ನಿಶ್ಚೈಸಿ ದುಃಖವನ್ನು ಪಡಬಾರದು. ಕೇಳೈ ಅಷ್ಟಕನೆ, ದೈವವು ನನ್ನನ್ನು ಯಾವ ಪ್ರಕಾರದಿಂದ ನಡಿಸುತ್ತಲಿಧೆಯೋ ಆ ಪ್ರಕಾರದಿಂದ ನಡೆಯುತ್ತಲಿದ್ದೇನೆಂದು ಹೃದಯದಲ್ಲೆಣಿಸಿ ಎಷ್ಟು ಭಯ ಬಂದರು ನಾನು ಸಂತಾಪ ದೈನ್ಯಗಳನ್ನು ಮಾಡುವದಿಲ್ಲ ; ಹುಳವು ಸೊಳ್ಳೆ ಹೇನುಮೊದಲಾದ ಸ್ವೇದ ಜಂತುಗಳೂ ಮರ ಹೊದೆ ಮೊದಲಾದ ಉದ್ಭಿಜಂಗಳೂ ಹಾವು ಹಕ್ಕಿ ಮೊದಲಾದ ಅಂಡಜಂಗಳೂ ಹೆಬ್ಬಾವುಗಳೂ ಕ್ರಿಮಿವಿಶೇಷಗಳೂ ಉದಕದಲ್ಲಿ ಸಂಚರಿಸುವ ಮತ್ಸ್ಯವು ಮೊದಲಾದ ಸಕಲ ಜಂತುಗಳೂ ಎಂಬ ಜಂಗಮಗಳೂ ಕಲ್ಲು ಕಟ್ಟಿಗೆ ಮೊದಲಾದ ಸ್ಥಾವರಂಗಳೂ ತಮ್ಮ ತಮ್ಮ ಕರ್ಮಗಳು ತೀರಿದರೆ ತಾವೇ ಸವೆಯುವವೆಂದೂ ಸುಖದುಃಖಗಳೆರಡನ್ನು ಅನಿತ್ಯಗಳೆಂದೂ ತಿಳಿದು ಹೃದಯದಲ್ಲಿ ತಾಪವನ್ನು ಬಿಟ್ಟು ಎಂಥಾ ಕಾರ್ಯಕ್ಕಾದರು ಮುಂದುದ್ಯೋಗಿಸದೆ, ಆದಕಾರ್ಯಕ್ಕೆ ಪಶ್ಚಾತ್ತಾಪವನ್ನು ಪಡದೆ, ಜಾಗ್ರತೆಯಿಂದಿರುವೆನು ; ಅದಲ್ಲದೆ ನಾನು ಸಕಲವಾದ ಪುಣ್ಯಲೋಕಗಳನ್ನೂ ಕಂಡು ಅಲ್ಲಲ್ಲಿರುವ ಸಮಸ್ತಭೋಗಗಳನ್ನನುಭವಿಸಿದೆನು; ಹೀಗೆ ಯತೇಚ್ಛವಾಗಿ ಅನುಭವಿಸಿದರೂ ನನ್ನಮನಸ್ಸಿಗೆ ದಣುವಿಲ್ಲ" ಅಂದನು.

---

೧೩ ನೇ ಅಧ್ಯಾಯ.

ಆ ಬಳಿಕ ಅಷ್ಟಕನು ತನ್ನ ಮಾತಾಮಹನಾದ ಯಯಾತಿಯಂ ಕಂಡು "ಎಲೈ ಮಹಾನುಭಾವನೆ, ಯಾವಯಾವ ಲೋಕದಲ್ಲಿ ಏನೇನು

ಭೋಗಂಗಳನ್ನು ಪಡದೆ? ಎಲ್ಲೆಲ್ಲಿ ಎಷ್ಟೆಷ್ಟು ಕಾಲವಿದ್ದೆ? ಆ ವಿಶೇಷಗಳನ್ನು ನನಗೆ ತಿಳುಹಿಸಬೇಕು; ನೀನು ಸಕಲ ಪುಣ್ಯಲೋಕ ವೃತ್ತಾಂತಗಳನ್ನೂ ತಿಳಿದವನೋಪಾದಿಯಲ್ಲಿ ಮಾತನಾಡುತ್ತಿದ್ದೀ'' ಅಂದನು.

ಯಯಾತಿರಾಯನು "ಕೇಳೈ ಅಷ್ಟಕನೆ, ನನ್ನ ವೃತ್ತಾಂತವನ್ನು ಕೇಳಬೇಕಂದರೆ ಹೇಳುತ್ತಲಿದ್ದೇನೆ ಕೇಳು: ಭೂಮಂಡಲದಲ್ಲಿ ಮೊದಲು ಸಾರ್ವಭೌಮನಾಗಿ ಬಹುಕಾಲ ಸಾಮ್ರಾಜ್ಯವನ್ನನುಭವಿಸಿ ಧರ್ಮದಿಂದ ಸಕಲ ಪುಣ್ಯಲೋಕಂಗಳನ್ನು ಜಯಿಸಿದೆನು; ಆ ಬಳಿಕ ಕೆಲವು ಕಾಲಕ್ಕೆ ಸ್ವರ್ಗಲೋಕಕ್ಕೆ ಹೋಗಿ ಅಲ್ಲಿ ಸಾವಿರವರುಷಗಳಿದ್ದೆನು; ಆ ಬಳಿಕ ಸಾವಿರ ಬಾಗಲುಗಳಿಂದ ಕೂಡಿ ನೂರು ಯೋಜನಗಳು ವಿಸ್ತಾರವುಳ್ಳಂಥದ್ದಾಗಿ ಸಕಲ ಜನ ಮನೋಹರವಾದ ಅಮರಾವತಿ ಪಟ್ಟಣಕ್ಕೆ ಹೋಗಿ ಸಾವಿರ ವರುಷಗಳಿದ್ದೆನು; ಅಮರಾವತಿಯನ್ನು ಬಿಟ್ಟು ಜರಾಮರಣರಹಿತವಾಗಿ ದಿಕ್ಪಾಲಕರಿಗೂ ಹೋಗುವದಕ್ಕೆ ಅಶಕ್ಯವಾಗಿ ಅಪರಿಮಿತ ದಿವ್ಯ ಭೋಗಂಗಳಿಂದ ಕೂಡಿರುವ ಬ್ರಹ್ಮಲೋಕಕ್ಕೆ ಹೋಗಿ ಅಲ್ಲಿ ಸಾವಿರ ವರುಷಗಳಿದ್ದೆನು; ಹೀಗೆ ಇನ್ನೂ ಇರುವ ದಿವ್ಯಲೋಕಗಳಿಗೆ ಹೋಗಿ ಆಯಾ ಲೋಕಗಳಲ್ಲಿ ಸಾವಿರ ಸಾವಿರ ವರುಷಗಳು ಸಕಲ ಭೋಗಗಳನ್ನು ಪಡೆದು ಆಯಾಲೋಕಾಧಿಪತಿಗಳೊಡನೆ ಸರಿಯಾಗಿ ಮೆರೆದು ಸಕಲ ದೇವತೆಗಳಿಂದಲು ಪೂಜಿಸಲ್ಪಟ್ಟು ತಿರಿಗು ನಂದನವನಕ್ಕೆ ಬಂದು ಕಾಮರೂಪಧರನಾಗಿ ದಿವ್ಯಸ್ತ್ರೀಯರೊಡನೆ ಕೂಡಿ, ದಿವ್ಯ ಪರಿಮಳ ಪುಷ್ಪಗಳಿಂದಲು ಫಲಗಳಿಂದಲು ಕೂಡಿ ಅತಿ ಮನೋಹರವಾದ ಕಲ್ಪವೃಕ್ಷಗಳನ್ನೋಡುತ ಹತ್ತುಲಕ್ಷ ವರುಷಗಳು ಮನಸ್ಸುಬಂದ ರೀತಿಗೆ ಸುಖವಾಗಿದ್ದೆನು. ಆ ಬಳಿಕ ಕೆಲವುಕಾಲಕ್ಕೆ ಭಯಂಕರವಾದ ಆಕಾರವುಳ್ಳ ಒಬ್ಬ ದೇವದೂತನು ಬಂದು ಘಟ್ಟಿಯಾಗಿ ಶಾನೇಹೊತ್ತುಕೂಗಿ ನನ್ನನ್ನು ಕುರಿತು 'ಭೂಲೋಕದಲ್ಲಿ ಬೀಳು!' ಎಂದು ಮೂರುಸಾರಿ ಹೇಳಿದನು; ಇಷ್ಟುಮಾತ್ರವು ನಾನು ಬಲ್ಲೆ.

"ಕೇಳೈ ರಾಜಶ್ರೇಷ್ಠನೇ, ಆ ಬಳಿಕ ನನ್ನ ಪುಣ್ಯವು ನಷ್ಟವಾದ್ದರಿಂದ ಭೂಲೋಕಕ್ಕೆ ಬರುವ ಸಮಯದಲ್ಲಿ ಅಂತರಿಕ್ಷದಲ್ಲಿದ್ದ ಕೆಲವು ದೇವತೆಗಳು ನನ್ನನ್ನು ಕಂಡು ನನ್ನಲ್ಲಿದ್ದ ದಯಾವಿಶೇಷದಿಂದ 'ಪುಣ್ಯಕೀರ್ತಿ ವಿಧಾನವುಳ್ಳಂಥಾ ಈ ಯಯಾತಿರಾಯನು ಪುಣ್ಯಹೀನನಾಗಿ ಭೂ

ಲೋಕದಲ್ಲಿ ಬೀಳುತ್ತಾನಲ್ಲ—ಕಂಡಿರೆ !' ಎಂದು ಅನ್ಯೋನ್ಯ ಮಾತಾಡುತ್ತಿದ್ದರು. ನಾನು ಅವರನ್ನು ಕಂಡು 'ಎಲೈ ಮಹಾನುಭಾವರುಗಳಿರಾ, ನಾನು ಭೂಲೋಕಕ್ಕೆ ಹೋಗುವಲ್ಲಿ ಸಜ್ಜನರ ಸಹವಾಸವನ್ನು ಬಯಸಿ ಹೋಗುತಲಿದ್ದೇನೆ ; ಸಜ್ಜನರೆಲ್ಲಿದ್ದಾರೆ ತಿಳುಹಿಸಬೇಕು' ಎಂದು ಕೇಳಿದನು. ಅವರು ನೀವು ಯಾಗವನ್ನು ಮಾಡುವಂಥಾ ಈ ಪ್ರದೇಶವನ್ನು ತೋರಿಸಿದರು. ಅವರ ವಾಕ್ಯವನ್ನು ಕೇಳಿ ಅತಿತ್ವರಿತ ಗಮನದಿಂದ ಹೋಮದ್ರವ್ಯಗಳ ಪರಿಮಳದಿಂದ ಮನೋಹರುಷವಾಗಿ ಯಜ್ಞಶಾಲೆಯದಾರಿಯನ್ನು ತಿಳುಹಿಸುತ್ತಿರುವ ಹೋಮ ಧೂಮವನ್ನು ಕಂಡು ಸಂತೋಷಪಟ್ಟು ಇಲ್ಲಿಗೆ ಬಂದೆನು" ಎಂದು ನುಡಿದನು.

ಅಷ್ಟಕನು "ಎಲೈ ಯಯಾತಿರಾಯನೆ, ಈರೀತಿಯಿಂದ ನಂದನವನದಲ್ಲಿ ಕಾಮರೂಪಧರನಾಗಿ ಹತ್ತು ಲಕ್ಷ ಸಂವತ್ಸರಗಳಿದ್ದು ಏನು ನಿಮಿತ್ತವಾಗಿ ಆ ನಂದನವನವನ್ನು ಬಿಟ್ಟು ಭೂಲೋಕಕ್ಕೆ ಬಂದೆ?" ಎಂದು ಕೇಳಿದನು.

ಯಯಾತಿರಾಯನು "ಕೇಳೈ ಅಷ್ಟಕನೆ, ಬೀಗರು ದಾಯಾದಿಗಳು ಸ್ನೇಹಿತರು ಮೊದಲಾದವರು ಐಶ್ವರ್ಯ ಹೋದಮೇಲೆ ಆ ಪುರುಷನನ್ನು ಬಿಟ್ಟುಬಿಡುವ ತೆರದಿಂದ ದೇವತೆಗಳು ಪುಣ್ಯವು ನಷ್ಟವಾದಮೇಲೆ ಮನುಷ್ಯನನ್ನು ಬಿಟ್ಟು ಬಿಡುವರು" ಅಂದನು.

ಅಷ್ಟಕನು "ಕೇಳೈ ಯಯಾತಿರಾಯನೇ, ಅಂಥಾ ಸ್ವರ್ಗಕ್ಕೆ ಹೋದವರು ಪುಣ್ಯವು ಕೆಟ್ಟು ಯಾವ ರೀತಿಯಿಂದಿರುವರು ? ಯಾವ್ಯಾವ ಪುಣ್ಯವನ್ನು ಮಾಡಿದವರು ಯಾವ್ಯಾವ ಲೋಕಕ್ಕೆ ಹೋಗುವರು ? ಈ ಅರ್ಥಗಳನ್ನು ತಿಳಿಯಬೇಕೆಂದು ನನ್ನ ಮನಸ್ಸು ಬಯಸುತಲಿದೆ ; ನೀನರಿಯದಿರುವ ಅರ್ಥವು ಒಂದೂ ಇಲ್ಲ ; ತಿಳುಹಿಸಬೇಕು" ಅಂದನು.

ಯಯಾತಿಯು "ಕೇಳೈ ಅಷ್ಟಕನೇ, ಆ ರೀತಿಯನ್ನು ನಿನಗೆ ತಿಳುಹಿಸುತಲಿದ್ದೇನೆ : ಸ್ವರ್ಗಲೋಕದಲ್ಲಿರುವಂಥಾವರು ತಮ್ಮ ಪುಣ್ಯಗಳು ಮುಗಿದಮೇಲೆ ಬಹುಪ್ರಕಾರವಾಗಿ ದೀನ ವಚನಗಳೊಡನೆ ಕೂಡಿ ಭೂಲೋಕಕ್ಕೆ ಬಂದು ರಣಹದ್ದು ಹದ್ದು ನಾಯಿ ನರಿ ಮೊದಲಾದ ಜಂತುಗಳಿಗೆ ಆಹಾರವಾಗಿ ಭೂಲೋಕದಲ್ಲಿ ನರಕಸ್ವರೂಪವಾದ ಮನುಷ್ಯ

ಶರೀರವನ್ನೈದುವರು ; ಆದ್ದರಿಂದ ಈ ಶರೀರದಲ್ಲಿದ್ದುಕೊಂಡು ಅಪರಿಮಿತವಾದ ಪುಣ್ಯಗಳನ್ನು ಸಂಪಾದಿಸಬೇಕಲ್ಲದೆ ಪಾಪಕರ್ಮಗಳನ್ನು ಮಾಡಬಾರದು ; ಇನ್ನೇನು ಹೇಳಬೇಕು ? ” ಎಂದು ಕೇಳಿದನು.

ಅಷ್ಟಕನು “ ಎಲೈ ಯಯಾತಿರಾಯನೇ, ಭೂಮಿಯಲ್ಲಿ ನರಕಸ್ವರೂಪವಾದ ಶರೀರವನ್ನು ಹ್ಯಾಗೆ ಐದುವದು ? ಬಾಲ್ಯ ಯವ್ವನ ವಾರ್ಧಕಗಳೆಂಬ ವಯೋ ವಿಶೇಷಗಳಿಂದಲೂ ಸಮಸ್ತ ವಸ್ತುಗಳು ತನಗೆ ಬೇಕೆಂಬ ಮನೋರಥಗಳಿಂದಲೂ ಮಾಂಸಾದಿಗಳನ್ನು ಶೋಷಿಸುವಂಥಾ ಮಹಾ ವ್ಯಾಧಿಗಳಿಂದಲೂ ಪೀಡಿಸಲ್ಪಡುವದಕ್ಕೆ ಪಾತ್ರವಾಗಿರುವದೆಂದು ನೀನು ಹೇಳಿದ ಈ ಮನುಷ್ಯ ಶರೀರಕ್ಕಿಂತಲು ಪ್ರತ್ಯೇಕವಾಗಿ ಇನ್ಯಾವದೂ ತೋರದಿರುವದ್ದರಿಂದ ಶರೀರವೆ ಹೋದಮೇಲೆ ಶರೀರ ಸ್ವರೂಪವಾಗಿ ತೋರುವಂಥಾ ಜೀವನು ಪರಲೋಕಕ್ಕೆ ಹೋಗುವದು ಹ್ಯಾಗೆ ? ಬರುವದು ಹ್ಯಾಗೆ ? ಸಕಲ ಸೌಖ್ಯಗಳಿಗೂ ಆಕಾರವಾಗಿರುವ ಈ ಮನುಷ್ಯ ಶರೀರವು ಭೂಮಿಯಲ್ಲಿ ನರಕವಾಗುವ ರೀತಿಯು ಹ್ಯಾಗೆ ? ಇವಷ್ಟನ್ನು ನನಗೆ ತಿಳುಹಿಸಬೇಕು ” ಅಂದನು.

ಯಯಾತಿರಾಯನು “ ಕೇಳೈ ಅಷ್ಟಕನೇ, ದೇಹವು ನಷ್ಟವಾದರೆ ಜೀವಾತ್ಮನು ನಷ್ಟವಾಗುವದಿಲ್ಲ ; ದೇಹನಾಶಕ್ಕೆ ಆತ್ಮನಾಶವು ಒಡಂಬಟ್ಟರೆ ಮುಂದಿನ ಜನ್ಮದಲ್ಲಿ ತಾನೇ ಇಲ್ಲದಿರುವದ್ದರಿಂದ ತನಗೆ ಸುಖಾದಿಗಳಾಗುವದಕ್ಕೋಸ್ಕರ ಸತ್ಕರ್ಮಗಳನ್ನು ಮಾಡುವದು ದುಃಖವು ಬಾರದಿರುವ ರೀತಿಗೆ ದುಷ್ಕರ್ಮಗಳನ್ನು ಮಾಡದಿರುವದು—ಈ ಎರಡೂ ಇಲ್ಲದೆ ಹೋಗಬೇಕು ! ಸಕಲ ಜನರೂ ಹೀಗೆ ಆಚರಿಸುತ್ತಲಿದ್ದಾರೆಂಬ ಯುಕ್ತಿಯಿಂದಲೂ ತಾನು ಪೂರ್ವಜನ್ಮದಲ್ಲಿ ಮಾಡಿದ ಕರ್ಮದ ಫಲವನ್ನೀಗ ಅನುಭವಿಸುತ್ತಲಿದ್ದಾನೆಂಬ ಸರ್ವಾನುಭವದಿಂದಲೂ ದೇಹಕ್ಕಿಂತಲು ಅತಿರಿಕ್ತವಾದ ಆತ್ಮವುಂಟೆಂಬ ನಿಗಮಾಗಮ ಶ್ರುತಿ ಪುರಾಣೇತಿಹಾಸಗಳಿಂದಲೂ ದೇಹೇಂದ್ರಿಯಾದಿಗಳಿಗಿಂತಲು ಅತಿರಿಕ್ತವಾದ ಆತ್ಮವುಂಟೆಂಬುವದು ಸಿದ್ಧವಾದ್ದರಿಂದ—ಜೀವಾತ್ಮರು ಬ್ರಹ್ಮ ಸೃಷ್ಟಿಯಲ್ಲಿ ತಮ್ಮ ಪೂರ್ವಜನ್ಮದ ಕರ್ಮವಿಶೇಷದಿಂದ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಶರೀರವನ್ನು ಪರಿಗ್ರಹಿಸಿ ಭೂಮಿಯಲ್ಲಿ ಬಿದ್ದು ಸಕಲ ಜನರಿಗೂ ತಿಳಿಯುವಹಾಗೆ ಸಂಚರಿಸುತ್ತಲಿರುವರು ; ಇಂಥಾ ಕರ್ಮ ಭೂಮಿಯಲ್ಲಿ ಮನುಷ್ಯ ಶರೀರವ

ನ್ನೈದಿದರೂ ತಮಗೆ ದಿನದಿನಕ್ಕೂ ಕ್ಷಯವಾಗುವ ಆಯುಸ್ಸನ್ನು ವಿಚಾರಿಸದೆ ಪರಲೋಕಕ್ಕೆ ಹಿತವಾದ ಸತ್ಕರ್ಮಗಳನ್ನು ಮಾಡದೆ ಅಜ್ಞಾನದಿಂದ ಕಷ್ಟ ಕೋಟಲೆಗಳಿಗೆ ಶಿಕ್ಕಿ ದುಃಖಪಡುವದಕ್ಕೆ ಯೋಗ್ಯವಾಗಿ ಭೂಮಿಯಲ್ಲಿ ನರಕಸ್ವರೂಪವಾದ ಈ ಶರೀರವನ್ನು ಪಡೆಯುವರು ; ಜೀವಾತ್ಮರು ದೇಹಾವಸಾನದಲ್ಲಿ ಪುಣ್ಯಲೋಕಗಳಿಗೆ ಹೋಗಿ ಸ್ವರ್ಗಲೋಕದಲ್ಲಿ ಲಕ್ಷವು ನಲವತ್ತು ಸಾವಿರ ವರುಷಗಳು ಅನೇಕ ಭೋಗಗಳನ್ನನುಭವಿಸಿ ಪುಣ್ಯವು ಮುಗಿದ ಕೂಡಲೆ ಭೂಮಿಯಲ್ಲಿ ಬಿದ್ದು ನರಕ ಸ್ವರೂಪವಾದ ಮನುಷ್ಯ ಶರೀರವನ್ನೈದಿ ನಾನಾ ಪ್ರಕಾರವಾದ ಕರ್ಮಗಳನ್ನು ಮಾಡುತ್ತ ತೀಕ್ಷ್ಣವಾದ ಕೋರೆದಾಡೆಗಳಿಂದ ಕೂಡಿ ಭಯಂಕರವಾದ ಆಕಾರವುಳ್ಳಂಥಾ ನಾನಾ ಪ್ರಕಾರವಾದ ಭೂರಾಕ್ಷಸರೋಪಾದಿಯಲ್ಲಿರುವ ಹೆಂಡತಿ ಮಕ್ಕಳು ರೋಗಂಗಳು ಮೊದಲಾದವರಿಂದ ಪೀಡಿಸಲ್ಪಡುತ್ತಲಿರುವರು ” ಅಂದನು.

೧೭ ನೇ ಅಧ್ಯಾಯ.

ಆ ಬಳಿಕ ಅಷ್ಟಕನು ಯಯಾತಿರಾಯನನ್ನು ಕುರಿತು “ ಕೇಳೈ ಯಯಾತಿರಾಯನೆ, ಈ ಶರೀರಗಲ್ಲಿರುವಂಥಾ ಜೀವಾತ್ಮನು ಭೂರಾಕ್ಷಸರಾದ ಪುತ್ರದಾರಾದಿಗಳಿಂದ ಪೀಡಿತನಾಗಿ ದೇಹಾವಸಾನದಲ್ಲಿ ಊರ್ಧ್ವಲೋಕಕ್ಕೆ ಹೋಗಿ ಭೂಲೋಕದಲ್ಲಿ ಬೀಳುವ ಸಮಯದಲ್ಲಿ ಅಷ್ಟು ದೂರದಿಂದ ಬೀಳುವಲ್ಲಿ ಜರಿಯಿಂದ ಬೀಳುವವನೋಪಾದಿಯಲ್ಲಿ ತುಮುರು ತುಮುರಾಗದಿರುವದು ಹ್ಯಾಗೆ ? ಭೂಮಿ ಮೊದಲಾದ ಸ್ಥಳಗಳಲ್ಲಿ ಬೀಳದೇ ತಾಯಿ ಹೊಟ್ಟೆಯಲ್ಲಿ ಬೀಳುವದು ಹ್ಯಾಗೆ ? ಆ ಜೀವನು ಮೊದಲು ಶುಕ್ಲರೂಪವನ್ನೈದುವದು ಹ್ಯಾಗೆ ? ಆ ಗರ್ಭದಲ್ಲಿ ಇಂದ್ರಿಯವಂತನಾಗುವದು ಹ್ಯಾಗೆ ? ” ಎಂದು ಕೇಳಿದನು.

ಯಯಾತಿರಾಯನು “ ಕೇಳೈ ಅಷ್ಟಕನೇ, ದೇಹಿಯಾದವನು ಋತುಕಾಲದಲ್ಲಿ ಪುರುಷನಿಂದ ಬಿಡಲ್ಪಟ್ಟ ಶುಕ್ಲ ರೂಪದಿಂದ ಶೋಣಿತದೊಡನೇ ಬೆರದು ತಾಯಿಯ ಹೊಟ್ಟೆಯಲ್ಲಿ ಸೂಕ್ಷ್ಮರೂಪದಿಂದ ಗರ್ಭರೂಪವಾಗಿ ಇರುವನು ; ಈ ಜೀವನು ಶುಕ್ಲರೂಪವನ್ನೈದುವದಕ್ಕೆ ಕಾರಣವೇನೆಂದರೆ : ಊರ್ಧ್ವಲೋಕದಲ್ಲಿದ್ದು ಭೂಲೋಕಕ್ಕೆ ಬೀಳುವಾಗ ಜರಿ

ಯಿಂದ ಬೀಳುವ ರೀತಿಯಲ್ಲಿ ತಟ್ಟನೇ ಬೀಳುವದಿಲ್ಲ; ಮತ್ತು ಹ್ಯಾಗಂದರೆ—ಜೀವನು ವಾಯು ರೂಪವನ್ನು ಧರಿಸಿ, ಅಂತರಿಕ್ಷದಲ್ಲಿ ಮೇಘಸ್ವರೂಪನಾಗಿ ವರ್ಷಧಾರೆಯಿಂದ ಪೃಥ್ವಿಯನ್ನು ಪ್ರವೇಶಿಸಿ, ಔಷಧಿ ವನಸ್ಪತಿಗಳ ದೆಶೆಯಿಂದ ಅನ್ನ ರೂಪವಾಗಿ ಎರಡು ಪಾದಂಗಳುಳ್ಳ ಮನುಷ್ಯಾದಿಗಳಿಗೂ ನಾಲ್ಕು ಪಾದಂಗಳುಳ್ಳ ಪಶ್ವಾದಿಗಳಿಗೂ ಆಹಾರವಾಗಿ, ಪುರುಷ ಜಂತುವಿನ ಉದರದಲ್ಲಿ ಶುಕ್ಲರೂಪವನ್ನೈದಿ ಸ್ತ್ರೀ ಜಂತುವಿನ ಶೋಣಿತ ಸಂಬಂಧದಿಂದ ಗರ್ಭರೂಪನಾಗುವನು" ಅಂದನು.

ಅಷ್ಟಕನು "ಕೇಳೈ ಯಯಾತಿರಾಯನೆ, ಈ ಜೀವಾತ್ಮನು ತಾಯಿಯ ಉದರವನ್ನು ಪ್ರವೇಶಿಸುವಲ್ಲಿ ತನ್ನ ಇಚ್ಛೆಯಿಂದಲೇ ಪ್ರವೇಶಿಸುವನೊ ಮತ್ತೊಬ್ಬನ ಪ್ರೇರಣೆಯಿಂದ ಪ್ರವೇಶಿಸುವನೋ? ಮತ್ತು ಹಸ್ತ ಪಾದಂಗಳು ಮೊದಲಾದ ಅವಯವಂಗಳನ್ನು ಪಡೆಯುವದು ಹ್ಯಾಗೆ? ಕಣ್ಣು ಕಿವಿ ಮೊದಲಾದ ಇಂದ್ರಿಯಗಳನ್ನು ಪಡೆಯುವದು ಹ್ಯಾಗೆ? ವಿಜ್ಞಾನ ಶೀಲನಾದ್ದರಿಂದ ತತ್ವ ಸ್ವರೂಪವನ್ನು ತಿಳಿದಿರುವ ನೀನು ಈ ಅರ್ಥದಲ್ಲಿ ಸಂಶಯಗಳು ಸಡಲುವ ಹಾಗೆ ಹೇಳಬೇಕು" ಅಂದನು.

ಯಯಾತಿಯು "ಕೇಳೈ ಅಷ್ಟಕನೇ, ಋತು ಕಾಲದಲ್ಲಿ ಪುರುಷನಿಂದ ಸ್ಖಲಿತವಾದ ಶುಕ್ಲವನ್ನುವಾಯು ಪುರುಷನು ಶೋಣಿತದೊಡನೇ ಕೂಡಿಸಿ, ಗರ್ಭಾಶ್ರಯಕ್ಕೆಳದು, ತಾನು ಗರ್ಭ ಪೋಷಣ ಮಾತ್ರಕ್ಕೆ ಅಧಿಕಾರಿಯಾದ್ದರಿಂದ ಗರ್ಭವು ದಿನ ದಿನಕ್ಕೂ ಅಭಿವೃದ್ಧಿಯಾಗುವ ಹಾಗೆ ಪೋಷಿಸಿಕೊಂಡು ಬರುವನು; ಆ ಗರ್ಭದಿಂದ ಆಣಿಗಿಸಿಕೊಂಡ ಶರೀರವುಳ್ಳಂಥಾ ಪುರುಷನು ಭೂಮಿಯಲ್ಲಿ ಬೀಳುವ ಸಮಯದಲ್ಲಿ ಜ್ಞಾನೇಂದ್ರಿಯಗಳು ವುಂಟಾಗುವದ್ದರಿಂದ ಕಿವಿಗಳಿಂದ ಶಬ್ದಗಳನ್ನುಕೇಳುತ, ಕಣ್ಣುಗಳಿಂದ ರೂಪಗಳನ್ನು ಕಾಣುತ, ಮೂಗಿನಿಂದ ಪರಿಮಳಗಳನ್ನು ಆಘ್ರಾಣಿಸುತ, ನಾಲಿಗೆಯಿಂದ ರುಚಿಗಳನ್ನಾಸ್ವಾದಿಸುತ, ತ್ವಗೇಂದ್ರಿಯದಿಂದ ಶೀತೋಷ್ಣಂಗಳನ್ನುಗ್ರಹಿಸುತ, ಮನಸ್ಸಿನಿಂದ ಸುಖ ದುಃಖಾದಿಗಳನ್ನುಅನುಭವಿಸುತ್ತಿರುವನು; ಇಂಥಾ ಶರೀರೇಂದ್ರಿಯಾದಿ ಸಂಯೋಗವು ಪರಮೇಶ್ವರನಾದ ಮಹಾ ಪುರುಷನದೆಶೆಯಿಂದ ಕಲ್ಪಿತವಾಗಿರುವದು" ಅಂದನು.

ಅಷ್ಟಕನು "ಕೇಳೈ ಯಯಾತಿಯೇ, ಈ ಲೋಕದಲ್ಲಿ ಜೀವಾತ್ಮನಿಂದ ಬಿಡಲ್ಪಟ್ಟ ದೇಹವನ್ನು ಬೆಂಕಿಯಲ್ಲಿ ಸುಟ್ಟರೂ ಹಳ್ಳದಲ್ಲಿ ಹೋಳಿ

ದರೂ ನಾಯಿ ನರಿ ಮೊದಲಾದವು ತಿಂದುಹೋದರೂ ಸ್ಥೂಲ ಶರೀರದೊಡನೆ ಲಿಂಗ ಶರೀರವು ನಷ್ಟವಾಗಿ ಹೋಗುವತೆರದಿಂದ ಜನ್ಮಾಂತರದಲ್ಲಿ ಯಾವ ಉಪಾಯದಿಂದ ಶಬ್ದಾದಿ ವಿಷಯಂಗಳನ್ನು ತಿಳಿಯುವನು ?" ಎಂದು ಕೇಳಿದನು.

ಯಯಾತಿಯು "ಕೇಳ್ಳೈ ಅಷ್ಟಕನೆ, ದೇಹಾವಸಾನದಲ್ಲಿ ಗುರಕೇ ಹಾಕಿ ನಿದ್ರೆ ಹೋಗುವವನೋಪಾದಿಯಲ್ಲಿ ಗುರಗುರ ಧ್ವನಿಯನ್ನು ಮಾಡುತ್ತ ಸ್ಥೂಲದ್ದೇಶೆಯಿಂದ ಪ್ರಾಣಗಳನ್ನೂ ಮನೋಬುದ್ಧಿ ದಶೇಂದ್ರಿಯಂಗಳನ್ನೂ ತೊಲಗಿಸಿ ಲಿಂಗಶರೀರದೊಡನೆ ಕೂಡಿ ಜೀವನು ಸುಕೃತ ದುಷ್ಕೃತಗಳನ್ನು ಮುಂದಿಟ್ಟುಕೊಂಡು ಸುಕೃತ ದುಷ್ಕೃತಗಳಿಗೆ ಅನುಕೂಲವಾದ ಶರೀರವನ್ನು ವಾಯುರೂಪದಿಂದ ಪ್ರವೇಶಿಸಿ ಪುಣ್ಯವಂತನಾಗರೆ ಬ್ರಹ್ಮ ಕ್ಷತ್ರಿಯ ದೇಹಗಳನ್ನೈದುವನು ; ಪಾಪವಂತನಾದರೆ ಇರುವು, ಸೊಳ್ಳೆ, ಮಿಡಿಚೆ, ಹಕ್ಕಿ, ಹಂದಿ, ನಾಯಿ, ನರಿ ಮೊದಲಾದ ಶರೀರಗಳನ್ನೈದುವನು ; ಆದುಕಾರಣದಿಂದಲೇ 'ಬಹು ಯೋನಿಗಳಲ್ಲಿ ಹುಟ್ಟಿ ಮದುವೇಯಾಗಿ ಮಕ್ಕಳಂ ಪಡದೇನು ; ಧನವನ್ನು ಸಂಪಾದಿಸಿ ಯಾಗಾದಿ ಕರ್ಮಗಳನ್ನು ಮಾಡೇನು' ಎಂಬ ಬಹು ಕ್ಲೇಶಗಳನ್ನು ಪಡೆಯಬೇಕಾದ್ದರಿಂದ ಶ್ರುತಿ ಸ್ಮೃತ್ಯಾದಿಗಳಲ್ಲಿ ಹೇಳಲ್ಪಡುವ ಈ ಸಂಸಾರ ಭಾರವನ್ನು ವಹಿಸುವದಕ್ಕೆ ಇಚ್ಛೆಯಿಲ್ಲ, ಮತ್ತೇನಂದರೆ—ಭೂಲೋಕಕ್ಕೆ ಹೋಗಿ ಯಾವ ಕರ್ಮವನ್ನೂ ಮಾಡದೆ ಸ್ವಸ್ಥವಾಗಿರಬೇಕೆಂದು ನಿಶ್ಚೈಸಿದ್ದೇನೆ ; ನೀವು ಕೇಳಿದಷ್ಟಕ್ಕೂ ಉತ್ತರವನ್ನು ಹೇಳಿದೆ ; ಇನ್ನೂ ಏನು ಹೇಳಬೇಕು" ಅಂದನು.

ಅಷ್ಟಕನು "ಕೇಳ್ಳೈ ಯಯಾತಿರಾಯನೆ, ಸತ್ಕರ್ಮಗಳಿಂದಲೂ ತಪಸ್ಸಿನಿಂದಲೂ ವಿದ್ಯಾಮಹಿಮೆಯಿಂದಲೂ ಶಾಶ್ವತವಾದ ಲೋಕಂಗಳು ಲಭಿಸುವದು ಹ್ಯಾಗೆ ? ಆ ರೀತಿಯನ್ನು ನನಗೆ ಹೇಳಬೇಕು" ಎಂದು ಕೇಳಿದನು.

ಯಯಾತಿರಾಯನು "ಕೇಳ್ಳೈ ಅಷ್ಟಕನೆ, ತಪಸ್ಸು, ದಾನವು, ಬಾಹ್ಯೇಂದ್ರಿಯ ನಿಗ್ರಹವು, ಅಂತರಿಂದ್ರಿಯ ನಿಗ್ರಹವು, ನಿಷಿದ್ಧಕರ್ಮ ಪರಿತ್ಯಾಗವು, ನಿಷ್ಪಾಪವು, ಸರ್ವಭೂತದಯೆಯು, ಎಂಬ ಈ ಏಳು ಗುಣಗಳು ಸ್ವರ್ಗಸಾಧನವಾಗಿರುವವು ; ಈ ಏಳು ಗುಣಗಳು ಸ್ವರ್ಗಸಾಧನಗಳಾದ

ರೂ ಅಹಂಕಾರದೊಡನೆ ಕೂಡಿದರೆ ತಾಮಸಂಗಳಾಗಿ ಕೆಟ್ಟು ಸ್ವರ್ಗಸಾಧನಗಳಾಗದೆ ಹೋಗುವವು; ಮತ್ತು ಮನುಷ್ಯನು ವೇದಶಾಸ್ತ್ರಗಳನ್ನೋದಿದ ಅಹಂಕಾರದಿಂದ ಇತರ ಜನಗಳನ್ನು ತಿರಸ್ಕರಿಸಿ ಅವರ ಕೀರ್ತಿಯನ್ನು ಅಪಹರಿಸುವದಕ್ಕೆಳಸಿದರೆ ಆತನು ತನ್ನ ವಿದ್ಯೆಯ ಫಲವನ್ನು ಹೊಂದದೆ, ಪುಣ್ಯಲೋಕಗಳನ್ನು ಪಡೆಯದೆ, ಲೋಕನಿಂದಿತನಾಗಿ ಕೆಟ್ಟುಹೋಗುವನು; ಇದಲ್ಲದೆ ಅಗ್ನಿಹೋತ್ರವು, ಮೌನವ್ರತವು, ಅಧ್ಯಯನವು, ಯಜ್ಞವು, ಎಂಬ ನಾಲ್ಕು ಧರ್ಮಗಳು ಸಕಲ ಪಾಪಭಯಗಳನ್ನು ಪರಿಹರಿಸುವವು; ಈ ನಾಲ್ಕು ಧರ್ಮಗಳೇ ಅಹಂಕಾರದಿಂದ ಮಾಡಲ್ಪಟ್ಟರೆ ಫಲಿಸದೆ ಭಯಗಳನ್ನೇ ಹುಟ್ಟಿಸುವವಾದ್ದರಿಂದ ಮತ್ತೊಬ್ಬರು ತನ್ನನ್ನು ಬಹುಮಾನವನ್ನು ಮಾಡುತಲಿದ್ದಾರೆಂದು ಸಂತೋಷವಿಲ್ಲದೆ, ಅವಮಾನವನ್ನು ಮಾಡುತ್ತಲಿದ್ದಾರೆಂದು ಸಂತಾಪವನ್ನೈದದೆ, ಏಕರೂಪದಿಂದ ಇರುವ ಪುರುಷನು ಸಜ್ಜನರಿಗೆ ಪೂಜ್ಯನಾಗುವನು; ಇಂಥಾ ಬುದ್ಧಿ ವಿಶೇಷವು ಸಾಧುಜನರಿಗಲ್ಲದೆ ದುಷ್ಟಜನರಿಗೆ ಆಗಲಾರದು; ದಾನಗಳನ್ನು ಮಾಡುವಾಗಲು, ಯಜ್ಞಗಗಳನ್ನು ಮಾಡುವಾಗಲು, ವ್ರತಗಳನ್ನು ನಡಸುವಾಗಲು, ಅವಶ್ಯ ಕರ್ತವ್ಯವೆಂದು ಮಾಡಬೇಕೇ ಹೊರತಾಗಿ 'ಹೀಗೆ ಮಾಡುತ್ತೇನೆ! ಹಾಗೆ ಮಾಡುತ್ತೇನೆ!' ಎಂಬ ಡಂಭದಿಂದ ಮಾಡಬಾರದು; ತಮ್ಮ ತಮ್ಮ ಆಶ್ರಮಂಗಳಿಗೆ ಉಚಿತವಾದ ಕರ್ಮಗಳನ್ನು ಆಚರಿಸುವದು ವುತ್ತಮ ಧರ್ಮವೆಂದು ಮಹಾತ್ಮರಾದ ಋಷಿಗಳು ವಿರಚಿಸಿ ನಿರ್ಣಯವನ್ನು ಮಾಡಿರುವದರಿಂದ ಅಂಥಾ ಧರ್ಮಗಳನ್ನೆ ಆಚರಿಸುವಂಥಾ ಪುರುಷನು ಚಿತ್ತಶುದ್ಧಿಯಿಂದ ಜ್ಞಾನವನ್ನು ಪಡದು ಜೀವನ್ಮುಕ್ತನಾಗುವನು" ಎಂದು ನುಡಿದನು.

೧೮ ನೇ ಅಧ್ಯಾಯ.

ಆ ಬಳಿಕ ಅಷ್ಟಕನು ಯಯಾತಿಯಂ ಕುರಿತು ಇಂತೆಂದನು: "ಕೇಳೈ ಯಯಾತಿರಾಯನೆ, ಬ್ರಹ್ಮಚಾರಿಯು, ಗೃಹಸ್ಥನು, ವಾನಪ್ರಸ್ಥನು, ಸನ್ಯಾಸಿಯು, ಎಂಬ ನಾಲ್ಕು ಆಶ್ರಮದವರು ಯಾವಯಾವ ಧರ್ಮಗಳನ್ನು ಆಚರಿಸಿ ಕೃತಕೃತ್ಯರಾಗುವರು? ಈ ಅರ್ಥದಲ್ಲಿ ಮಹಾ

ತ್ರರು ಅನೇಕ ಮಾರ್ಗಗಳನ್ನು ಹೇಳುತಲಿದ್ದಾರೆ; ಅದನ್ನೆಲ್ಲಾ ನೀವು ನಿಶ್ಚೈಸಿ ಹೇಳಬೇಕು."

ಯಯಾತಿರಾಯನು "ಕೇಳೈ ಅಷ್ಟಕನೆ, ಈ ಆಶ್ರಮ ಧರ್ಮಗಳನ್ನು ನಿನಗೆ ವಿಶದವಾಗುವ ರೀತಿಗೆ ಹೇಳುತಲಿದ್ದೇನೆ:

"ಬ್ರಹ್ಮಚರ್ಯವ್ರತನಿಷ್ಟನಾದ ಪುರುಷನು ಗುರುವು ಕರದು ವುಪದೇಶವನ್ನು ಮಾಡುವ ಸಮಯದಲ್ಲಿ ಓದಿಕೊಳ್ಳುತ, ಗುರುಶಿಶ್ರೂಷೆಯಲ್ಲಿ ಹೇಳಿಶಿಕೊಳ್ಳದೆನೇ ಮಾಡಬೇಕಾದ ಕೆಲಸಗಳನ್ನು ತಾನೇ ತಿಳಿದು ಜಾಗ್ರತೆಯಿಂದಮಾಡುತ, ಪ್ರಾತಃಕಾಲದಲ್ಲಿ ಗುರುವು ಏಳುವದಕ್ಕೆ ಮೊದಲೇ ತಾನು ನಿದ್ರೆಯಿಂದೆದ್ದು ಗುರುವು ನಿದ್ರೇ ಹೋದಮೇಲೆ ನಿದ್ರೇ ಮಾಡುತ, ಯಾವಾಗಲು ಮೃದುಸ್ವಭಾವವೂ ಉಪಶಾಂತಿಯೂ ಧೈರ್ಯವೂ ವುಳ್ಳಂಥಾವನಾಗಿ ವೇದಾಭ್ಯಾಸವನ್ನು ಮಾಡುವದರಲ್ಲಿ ಆಲಶ್ಯವಿಲ್ಲದೆ ಇರುವಂಥಾವನು ಕೃತಕೃತ್ಯನಾಗುವನು.

"ಬ್ರಹ್ಮಚರ್ಯ ವ್ರತವು ಮುಗಿದಮೇಲೆ ಗೃಹಸ್ಥ ಧರ್ಮವನ್ನು ಆಶ್ರೈಸುವಂಥಾವನು ಸ್ವಧರ್ಮದಿಂದ ಧನವನ್ನು ಸಂಪಾದಿಸಿ, ಆ ಧನದಿಂದ ಯಜ್ಞವನ್ನುಮಾಡಿ ತನ್ನ ಶಕ್ತ್ಯಾನುಸಾರವಾಗಿ ಸತ್ಪಾತ್ರಂಗಳಲ್ಲಿ ದಾನವನ್ನು ಮಾಡುತ, ಅತಿಥಿಗಳನ್ನು ಪೂಜಿಸುತ, ಪರರ ದ್ರವ್ಯಗಳಿಗೆ ಆಸೆಪಡದೆ ಅವರು ಕೊಟ್ಟ ಮಾತ್ರವನ್ನೆ ತೆಗದುಕೊಂಡು ಸಂತೋಷಪಟ್ಟು ವಿಹಿತ ಕರ್ಮಗಳನ್ನೇ ಮಾಡುವಂಥಾವನು ಕೃತಕೃತ್ಯನಾಗುವನು.

"ಜೀವನಾರ್ಥವಾಗಿ ವುದ್ಯೋಗಗಳಿಗೆ ಹೋಗದೆ, ಮನೆಗಳಲ್ಲಿ ಇರುವದಕ್ಕೆ ಎಣಿಸದೆ, ಕಾಯಕ್ಲೇಶದಿಂದ ಲಭಿಸಿದ ಕಂದ ಮೂಲ ಫಲಾದಿಗಳಿಂದ ದಿನಗಳನ್ನು ಕಳೆಯುತ, ಪಾಪಕರ್ಮಗಳಿಗೆ ಹೋಗದೆ ಅವನ್ಯ ಫಲಗಳಿಂದಲೇ ಅತಿಥಿ ಪೂಜೆಗಳನ್ನು ಮಾಡುತ, ಪರರಿಗುಪದ್ರವನ್ನು ಮಾಡದೆ ಮೃಗಗಳೊಡನೆ ತಾನೊಂದು ಮೃಗವಾಗಿ ತಿರುಗುತಲಿರುವ ವಾನಪ್ರಸ್ಥನು ಪರಮಪಾವನನೆನಿಸಿಕೊಳ್ಳುವನು.

"ಜೀವನಾರ್ಥವಾಗಿ ವುದ್ಯೋಗಗಳಿಗೆ ಹೋಗದೆ, ಮನೆಗಳಲ್ಲಿರುವದಕ್ಕೆ ಎಣಿಸದೆ, ಜ್ಞಾನೇಂದ್ರಿಯ ಕರ್ಮೇಂದ್ರಿಯಗಳನ್ನು ಜಯಿಸಿ ಸಕಲ ಸಂಗಗಳನ್ನು ಬಿಟ್ಟು ಭಿಕ್ಷಾಸಮಯವು ಹೊರ್ತಾಗಿ ಮಿಕ್ಕ ಕಾಲಗ

ಳಲ್ಲಿ ಗ್ರಾಮವನ್ನು ಪ್ರವೇಶಿಸದೆ, ವಿಹಿತವಾದ ಆಹಾರಗಳಿಂದ ತೃಪ್ತಿಯ ನ್ನು ಪಡೆದು ಸಕಲ ದೇಶಂಗಳಲ್ಲಿಯೂ ಒಬ್ಬನೇ ಸಂಚರಿಸುತ, ಎಲ್ಲಾ ತಾ ವಿನಲ್ಲಿಯು ಮಮತೆಯನ್ನು ಬಿಟ್ಟು ದೇವಾಲಯವು ಮಠ ಮೊದಲಾದ ಸ್ಥಳಗಳಲ್ಲಿ ಇದ್ದುಕೊಂಡಿರುವ ಸನ್ಯಾಸಿಯು ಶಾಶ್ವಿತವಾದ ಲೋಕಗ ಳನ್ನು ಪಡೆಯುವನು.

"ಯಾವ ಸಮಯದಲ್ಲಿ ಸಕಲ ವಿಷಯ ಭೋಗಗಳಲ್ಲಿಯು ವೈ ರಾಗ್ಯ ಹುಟ್ಟುವದೋ, ಯಾವ ಮುಹೂರ್ತದಲ್ಲಿ ಸಕಲ ಪುಣ್ಯಲೋಕಗಳ ಭೋಗದಲ್ಲಿಯು ನಿಸ್ಪೃಹತ್ವವು ಹುಟ್ಟುವದೋ, ಅಂಥಾ ಸಮಯದಲ್ಲಿ ಅರಣ್ಯಕ್ಕೆ ಹೋಗಬೇಕು ; ಅರಣ್ಯದಲ್ಲಿ ಶರೀರವನ್ನು ಬಿಟ್ಟವನು ಪೂರ್ವ ದಲ್ಲಿ ಹತ್ತುತರದವರನ್ನೂ ಮುಂದೆ ಆಗುವಂಥಾ ಹತ್ತುತರದವರನ್ನೂ ಉ ದ್ಧರಿಸಿ ಅವರೊಡನೆ ತಾನು ಕೂಡಿ ಶಾಶ್ವಿತವಾದ ಪುಣ್ಯಲೋಕಗಳನ್ನು ಪಡೆಯುವನು" ಅಂದನು.

ಅಷ್ಟಕನು "ಕೇಳೈ ಯಯಾತಿರಾಯನೆ ವಾನಪ್ರಸ್ಥದಲ್ಲಿಯೂ ಸನ್ಯಾಸದಲ್ಲಿಯೂ ಇರುವಂಥಾ ಆಚಾರಗಳ ವಿಶೇಷಗಳನ್ನು ತಿಳುಹಿಸ ಬೇಕು" ಅಂದನು.

ಯಯಾತಿಯು "ಕೇಳೈ ಅಷ್ಟಕನೆ, ಅರಣ್ಯದಲ್ಲಿ ಇದ್ದು ಗ್ರಾ ಮಕ್ಕೆ ಬಾರದೆ ಇರುವಂಥಾವರು, ಗ್ರಾಮದಲ್ಲಿ ಇದ್ದು ಅರಣ್ಯಕ್ಕೆ ಬಾರದೆ ಇರುವಂಥಾವರು ಸಹ ಮುನಿಗಳೆನ್ನಿಸಿಕೊಳ್ಳುವರು" ಅಂದನು.

ಅಷ್ಟಕನು "ಕೇಳೈ ಯಯಾತಿರಾಯನೆ, ಅರಣ್ಯವಾಸಿಗಳಿಗೆ ಗ್ರಾ ಮವಿಮುಖತ್ವವೂ ಗ್ರಾಮವಾಸಿಗಳಿಗೆ ಅರಣ್ಯ ವಿಮುಖತ್ವವೂ ಹ್ಯಾಗೆ ಇ ರುವವು?" ಎಂದು ಕೇಳಿದನು.

ಯಯಾತಿಯು "ಕೇಳೈ ಅಷ್ಟಕನೆ, ಅರಣ್ಯದಲ್ಲಿರುವ ಮುನಿಯು ಗ್ರಾಮದಲ್ಲಿರುವ ವಸ್ತುಗಳನ್ನು ತೆಗದುಕೊಳ್ಳದೆ ಇದ್ದರೆ ಅದು ಗ್ರಾಮ ವಿಮುಖತ್ವವೆನ್ನಿಸಿಕೊಳ್ಳುವದು ; ಅಗ್ನಿಹೋತ್ರವನ್ನೂ ವಂಶವನ್ನೂ ವೇ ದಶಾಖೆಗಳನ್ನೂ ಬಿಟ್ಟು, ಕೌಪೀನವನ್ನೂ ನಾರಶೀರೆಗಳನ್ನೂ ವುಟ್ಟು, ತನಗೆ ಅಭೀಷ್ಟವಾದ ವಸ್ತುಗಳನ್ನು ಬಯಸದೆ, ಪ್ರಾಣಧಾರಣೆ ಮಾತ್ರ ಕ್ಕೆ ಆಹಾರವನ್ನು ತೆಗದುಕೊಂಡು ಗ್ರಾಮದಲ್ಲಿರುವವನು ಅರಣ್ಯ ವಿಮು

ತನೆನ್ನಿಸಿಕೊಳ್ಳುವನು. ಸಕಲ ಕಾಮಂಗಳನ್ನು ಬಿಟ್ಟು ಜಿತೇಂದ್ರಿಯನಾಗಿ ಮೌನವ್ರತವನ್ನು ಹಿಡಿದಂಥಾವನು ಸಿದ್ಧವ್ರತನೆನ್ನಿಸಿಕೊಳ್ಳುವನು. ದಂತಧಾನವನ್ನು ಮಾಡಿ, ಉಗುರುಗಳನ್ನು ತೆಗದು ಹಾಕಿ, ಕಾಲತ್ರಯದಲ್ಲಿಯೂ ಸ್ನಾನವನ್ನು ಮಾಡಿ, ತನ್ನಾಶ್ರಮಕ್ಕೆ ವುಚಿತವಾದ ವಿಶೇಷವನ್ನು ಧರಿಸಿ, ಕರ್ಮಬಂಧಕ್ಕೆ ಸಿಕ್ಕದೆ ಜ್ಞಾನಯೋಗನಿಷ್ಟನಾಗಿರುವ ಯತೀಶ್ವರನು ಸಕಲ ಲೋಕಪೂಜ್ಯನಾಗುವನು. ತಪಸ್ಸಿನ ಕ್ಲೇಶದಿಂದ ಮಾಂಸ ಶೋಣಿತಂಗಳು ಬಣಗಿ ಶರೀರ ಕೃಶವಾಗಲು ಶೀತೋಷ್ಣಾದಿದ್ವಂದ್ವಂಗಳನ್ನು ಸಹಿಸಿದಂಥಾವನು ಮುನಿ ವ್ರತನಿಷ್ಟನಾಗಿ ಉಭಯ ಲೋಕಗಳನ್ನೂ ಜಯಿಸುವನು ; ಇಂಥಾ ಮುನೀಶ್ವರನು ಕೈಗಳಿಂದ ತೆಗದುಕೊಳ್ಳದೇ ಗೋವಿನಹಾಗೆ ಮುಖದಿಂದಲೇ ಆಹಾರವನ್ನು ತಕೊಂಡರೆ ಆತನಿಗೆ ಆಗುವ ಪುಣ್ಯಲೋಕಗಳು ಅಕ್ಷಯಗಳಾಗುವವು. ಇನ್ನು ಸಮಸ್ತ ಲೋಕಗಳಿಗೂ ಸಾಧಾರಣವಾದ ಧರ್ಮಗಳನ್ನು ಹೇಳುತಲಿದ್ದೇನೆ ಕೇಳು : ಕೋಪವು, ಲೋಭವು, ಈರ್ಷ್ಯ ಅಸೂಯವು, ಪರದ್ರವ್ಯಾಪಹಾರವು, ಗರ್ವವು, ಡಂಭವು, ಚಾಡಿಯು, ಮೋಹವು, ಶೋಕವು, ಅಹಂಕಾರವು, ಮಮಕಾರವು, ಎಂಬ ಆತ್ಮದೋಷಗಳನ್ನು ಪರಿಹರಿಸಿದ ಮಹಾತ್ಮನು ಸಕಲ ಧರ್ಮಗಳನ್ನು ತಿಳಿದಂಥಾವನು ಎನಿಸಿಕೊಳ್ಳುವನು " ಅಂದನು.

ಅಷ್ಟಕನು " ಕೇಳೈ ಯಯಾತಿರಾಯನೆ, ಅಧ್ಯಯನಪರನಾದ ಬ್ರಹ್ಮಚಾರಿಯು, ಗೃಹಸ್ಥನು, ವಾನಪ್ರಸ್ಥನು, ಯತೀಶ್ವರನು ಎಂಬ ನಾಲ್ಕು ಆಶ್ರಮದವರು ಎಷ್ಟು ಮಾತ್ರವನ್ನು ಭಕ್ಷಿಸಿದರೆ ಅಧರ್ಮವು ಬರಲಾರದು ? ಆ ಪ್ರಕಾರವನ್ನು ತಿಳುಹಿಸಬೇಕು " ಅಂದನು.

ಯಯಾತಿಯು " ಯತೀಶ್ವರನಿಗೆ ಎಂಟು ಕವಳಂಗಳು, ವಾನಪ್ರಸ್ಥನಿಗೆ ಹದಿನಾರು ಕವಳಂಗಳು, ಗೃಹಸ್ಥನಿಗೆ ಮುವ್ವತ್ತೆರಡು ಕವಳಂಗಳು, ಬ್ರಹ್ಮಚಾರಿಗೆ ಅಪರಿಮಿತವಾದ ಕವಳಂಗಳು— ಈ ಪ್ರಕಾರವಾಗಿ ವಿಹಿತವಾದ ಕವಳಂಗಳು ಶುಭವಾಗಿ ಇರುವವು " ಎಂದು ಹೇಳಿದನು.

ಅಷ್ಟಕನು " ಕೇಳೈ ಯಯಾತಿಮಹಾರಾಯನೆ, ವನದಲ್ಲಿದ್ದು ಗ್ರಾಮಕ್ಕೆ ವಿಮುಖನಾಗಿ ಇರುವಂಥಾವನು, ಗ್ರಾಮದಲ್ಲಿದ್ದು ವನಕ್ಕೆ ವಿಮುಖನಾಗಿರುವಂಥಾವನು—ಈ ಈರ್ವರು ಸೂರ್ಯ ಚಂದ್ರರೋಪಾದಿಯಲ್ಲಿ

ಸರ್ವದಾ ಸಂಚರಿಸುತ್ತಲೇ ಇರುವರು ; ಇವರೊಳಗೆ ಯಾರು ದೇವತೆಗೆ ಳೊಡನೆ ಸಮತ್ವವನ್ನೈದುವರು ? " ಎಂದು ಕೇಳಿದನು.

ಯಯಾತಿರಾಯನು "ಕಾಮಿಗಳಾದ ಗೃಹಸ್ಥರೊಡನೆ ಕೂಡದೆ ನಿಯಮಪರನಾಗಿ ಗ್ರಾಮದಲ್ಲಿರುವ ಯತೀಂದ್ರನು ಮೊದಲು ಹೇಳಿದಂಥಾ ಇಬ್ಬರೊಳಗೆ ಮುಖ್ಯನಾಗಿರುವನು ; ತನ್ನ ಪ್ರಯತ್ನಗಳಿಂದ ಐದುವದ ಕ್ಕೆ ಅಶಕ್ಯವಾದ ದೀರ್ಘಾಯುಷ್ಯವನ್ನು ದೈವಯೋಗದಿಂದ ಐದಿದವನು ಸುಕೃತಕರ್ಮಂಗಳನ್ನಾಚರಿಸುವದರಲ್ಲಿ ಪ್ರಮಾದದಿಂದ ವಿಷಯ ಭೋಗಂ ಗಳನ್ನು ಅನುಭವಿಸಿ ಯೋಗಭ್ರಷ್ಟನಾದರೆ ಅದಕ್ಕೆ ಪಶ್ಚಾತಾಪವನ್ನೈದಿ ತಿರಿಗಿ ಯೋಗವನ್ನು ಮಾಡುವನು ; ಯಾವ ಪುರುಷನು ದೇಹೇಂದ್ರಿಯಾ ದಿಗಳಿಗಿಂತಲು ಅತಿರಿಕ್ತವಾದ ಆತ್ಮಾನುಸಂಧಾನವನ್ನು ಮಾಡುವನೋ ಅವ ನು ಸಮಾಧಿನಿಷ್ಟನಾಗಿರುವ ಸಮಯಗಲ್ಲಿ ಪ್ರಮಾದ ವಶದಿಂದ ಪಾಪಕ ರ್ಮಂಗಳು ಪ್ರಾಪ್ತವಾದರೂ ಆ ಪಾಪಫಲವನ್ನು ಪಡೆಯದೆ ಸುಖವ ನ್ನೈದುವನು ; ಯಾವ ಕರ್ಮಗಳು ಸಕಲ ಜನರಿಗೂ ಹಿಂಸಕರವಾಗಿರು ವವೊ ಆ ಕರ್ಮಗಳನ್ನು ತನ್ನ ಜೀವನಾರ್ಥವಾಗಿ ಮಾಡಿದರೆ ಸಾಧು ಜನ ನಿಂದಿತವಾಗಿರುವದರಿಂದ ಎಷ್ಟು ಧನಹೀನನಾದರೂ ಆ ದುಷ್ಕರ್ಮಗಳನ್ನು ಮಾಡುವ ಸಮಯದಲ್ಲಿ ಫಲಗಳನ್ನು ಬಯಸದೆ ಈಶ್ವರಾರ್ಪಣ ಬುದ್ಧಿ ಯಿಂದ ಮಾಡುವದೆ ರುಜುತ್ವವು, ಸಮಾಧಿಯು, ಸತ್ಕರ್ಮವು ಎನಿಸಿಕೊಳ್ಳು ವದು " ಅಂದನು.

೯ ನೇ ಅಧ್ಯಾಯ.

ಆ ಬಳಿಕ ಅಷ್ಟಕನು ಯಯಾತಿರಾಯನನ್ನು ನೋಡಿ "ಕೇಳೈ ಯಯಾತಿಯೇ, ಈಪ್ರಕಾರದಲ್ಲಿ ನೋಡುವದಕ್ಕೆ ಯೋಗ್ಯವಾಗಿರುವ ರೂ ಪವನ್ನೂ ಯವ್ವನವನ್ನೂ ತೇಜೋವಿಶೇಷವನ್ನೂ ದಿವ್ಯ ಮಾಲ್ಯಾಂಬರ ಗಳನ್ನೂ ಧರಿಸಿ ಸಕಲ ಲೋಕ ಮನೋಹರನಾಗಿರುವ ನೀನು ಯಾರಿಂದ ಕಳುಹಿಸಲ್ಪಟ್ಟು ಎಲ್ಲಿಗೆ ಹೋಗುತಿದ್ದೀ ? ನೀನು ಎಲ್ಲಿರುವದು ? " ಎಂದು ಕೇಳಿದನು.

ಯಯಾತಿಯು "ಕೇಳೈ ಅಷ್ಟಕನೇ, ನಾನು ಸಕಲ ಧರ್ಮಗಳ ನ್ನು ತಿಳಿದು ಪ್ರಶಸ್ತವಾದ ಬುದ್ಧಿ ವಿಶೇಷದಿಂದ ಸಕಲ ಸತ್ಕರ್ಮಂಗಳ

ನ್ನಾಚರಿಸಿ ಸ್ವರ್ಗಕ್ಕೆ ಹೋಗಿ, ಅಲ್ಲಿ ಬಹುಕಾಲವಿದ್ದು, ಪುಣ್ಯವು ಮುಗಿಯಲು ಅಂತರಿಕ್ಷದ್ದೆಸೆಯಿಂದ ಭೂಲೋಕಕ್ಕೆ ಬೀಳುತ್ತಲಿದ್ದೇನೆ ; ದೇವೇಂದ್ರನ ವರಪ್ರಸಾದದಿಂದ ನಿಮ್ಮಂಥಾ ಸಜ್ಜನರ ಸಮಾಗಮವು ಲಭಿಸಿತು ; ಇನ್ನುಮೇಲೆ ಭೌಮ ನರಕಕ್ಕೆ ಹೋಗುತಲಿದ್ದೇನೆ; ಲೋಕಪಾಲಕರು ತ್ವರೇ ಮಾಡುತ್ತಲಿದ್ದಾರೆ ; ನೀನು ಕೇಳುವದಕ್ಕೆ ಉತ್ತರವನ್ನು ಹೇಳುವದಕ್ಕಾಗಿ ಇಷ್ಟೊತ್ತು ಇರಬೇಕಾಯಿತು " ಅಂದನು.

ಅಷ್ಟಕನು " ಕೇಳೈ ಯಯಾತಿರಾಯನೆ, ಅಂತರಿಕ್ಷದಲ್ಲಾದರೂ ಸ್ವರ್ಗದಲ್ಲಾದರೂ ನನ್ನ ಸತ್ಕರ್ಮಗಳಿಗೆ ಫಲರೂಪವಾಗಿರುವ ಪುಣ್ಯಲೋಕಗಳಿದ್ದರೆ ತಿಳುಹಿಸು; ನೀನಲ್ಲಿದ್ದದ್ದರಿಂದ ಆ ವೃತ್ತಾಂತಗಳಷ್ಟನ್ನು ತಿಳಿದಿರುವೆಯಲ್ಲ! ಆ ವೃತ್ತಾಂತಗಳನ್ನು ಹೇಳುವ ಪರಿಯಂತರವು ನೀನು ಬೀಳಬ್ಯಾಡ! " ಅಂದನು.

ಯಯಾತಿಯು " ಕೇಳೈ ಅಷ್ಟಕನೇ, ನಿನಗಿರುವ ಪುಣ್ಯಲೋಕಗಳ ಮಹಿಮೆಯನ್ನೇನೆಂದು ಹೇಳಲಿ! ಭೂಲೋಕದಲ್ಲಿರುವ ಧಾನ್ಯಗಳು, ಹಸುವುಗಳು, ಕುದುರೆಗಳು, ಅರಣ್ಯದಲ್ಲಿ ಹುಟ್ಟುವ ಆನೆ ಮೊದಲಾದ ಪಶುವುಗಳು, ಪರ್ವತಂಗಳು ಎಷ್ಟುಂಟೊ ಅಷ್ಟು ಪುಣ್ಯಲೋಕಗಳು ನಿನಗುಂಟು " ಎಂದು ನುಡಿದನು.

ಅಷ್ಟಕನು " ಕೇಳೈ ಯಯಾತಿಯೇ, ಅಂತರಿಕ್ಷದಲ್ಲಾದರೂ ಸ್ವರ್ಗದಲ್ಲಾದರೂ ನನಗೆ ಪುಣ್ಯಲೋಕಗಳೆಷ್ಟುಂಟೊ ಆ ಪುಣ್ಯಲೋಕಗಳಷ್ಟನ್ನೂ ನಿನಗೆ ಕೊಟ್ಟೆನಾದ್ದರಿಂದ ಭೌಮ ನರಕದಲ್ಲಿ ಬೀಳದೇ ನೀನು ಯಥಾಪ್ರಕಾರವಾಗಿ ತಿರಿಗೂ ಸ್ವರ್ಗಕ್ಕೆ ಹೋಗು " ಅಂದನು.

ಯಯಾತಿಯು " ಕೇಳೈ ಅಷ್ಟಕನೆ, ನಾನು ಕ್ಷತ್ರಿಯ ವಂಶದಲ್ಲಿ ಹುಟ್ಟಿ, ಸಕಲ ವಸ್ತುಗಳನ್ನು ಬ್ರಾಹ್ಮರಿಗೆ ದಾನ ಕೊಟ್ಟು, ನನಗೆ ಸಮಾನನಾದ ಕ್ಷತ್ರಿಯನಿಲ್ಲವೆನ್ನಿಸಿಕೊಂಡು, ಈಗ ನಿನ್ನ ದೆಸೆಯಿಂದ ಪುಣ್ಯಲೋಕ ಪರಿಗ್ರಹಮಾಡುವದು ನನಗೆ ಉಚಿತವಲ್ಲ ; ಕ್ಷತ್ರಿಯನಾದವನು ಒಬ್ಬನಿಗೆ ಕೊಡುವದೇ ಹೊರ್ತಾಗಿ ತಾನು ತೆಗೆದುಕೊಳ್ಳುವನೇ ! ಬ್ರಾಹ್ಮಣನು ಪರಿಗ್ರಹಿಸುವನೇ ಹೊರ್ತಾಗಿ ಕ್ಷತ್ರಿಯನು ಪರಿಗ್ರಹಿಸುವದಿಲ್ಲ ; ನಾನು ಕ್ಷತ್ರಿಯನು ; ಪರಿಗ್ರಹಿಸುವದಕ್ಕ್ಯಾಗೆ ಒಡಂಬಡುವೆನು ! ಕ್ಷತ್ರಿ

ಯನು ದಾನವನ್ನು ತಕ್ಕೊಳ್ಳುವದನುಚಿತವಾಗ್ಗರಿಂದ ಪಡೆಯಬೇಕಾದ ಪುಣ್ಯಗಳಿಗೆ ಕಾರಣವಾದ ಕರ್ಮಗಳನ್ನು ಭೂಲೋಕದಲ್ಲಿ ತಿರಗು ಮಾಡುವೆನಲ್ಲದೆ ನಿನ್ನ ದೆಶೆಯಿಂದ ನಾನು ತೆಗದುಕೊಳ್ಳುವದಿಲ್ಲ" ಅಂದನು.

ಅಷ್ಟಕನ ಸಂಗಡ ಇದ್ದವರಲ್ಲಿ ಪ್ರತರ್ದನನೆಂಬವನು ಯಯಾತಿಯನ್ನು ಕಂಡು ಇಂತೆಂದನು: "ಕೇಳೈ ಯಯಾತಿಯೇ, ನಾನು ಕಾಶೀರಾಜನಾದ ಪ್ರತರ್ದನನು; ನನಗೆ ಸ್ವರ್ಗದಲ್ಲಾದರು ಅಂತರಿಕ್ಷದಲ್ಲಾದರು ಪುಣ್ಯ ಲೋಕಗಳಿದ್ದರೇ ತಿಳಿಸು; ನೀನು ತಿಳಿಯದಿರುವಂಥಾದ್ದೊಂದೂ ಇಲ್ಲ" ಎಂಗು ಕೇಳಿದನು.

ಯಯಾತಿರಾಯನು "ಕೇಳೈ ಪ್ರತರ್ದನನೆ, ಜೇನುತುಪ್ಪ, ತುಪ್ಪ, ಹಾಲು, ಮೊಸರು, ಮೊದಲಾದ ವಸ್ತುಗಳ ಪ್ರವಾಹದಿಂದ ಕೂಡಿ ಯಾವಾಗಲು ಸೌಖ್ಯವನ್ನೇ ಕಲ್ಪಿಸುವಂಥಾ ನಲವತ್ತೊಂಭತ್ತು ಲೋಕಂಗಳು ಪ್ರತ್ಯೇಕ ಪ್ರತ್ಯೇಕವಾಗಿ ನಿನ್ನನ್ನೆದುರಾಗಿ ನೋಡುತ್ತಲಿವೆ" ಅಂದನು.

ಪ್ರತರ್ದನನು "ನನಗಿರುವ ಸಮಸ್ತ ಲೋಕಗಳನ್ನು ನಿನಗೆ ಕೊಟ್ಟೆನು; ನೀನು ಭೂಲೋಕದಲ್ಲಿ ಬೀಳದೆ ಪುಣ್ಯಲೋಕಗಳಿಗೆ ಹೋಗು" ಅಂದನು.

ಯಯಾತಿಯು "ತನಗೆ ಸಮಾನನಾಗಿರುವ ಕ್ಷತ್ರಿಯನ ದೆಶೆಯಿಂದ ಕ್ಷತ್ರಿಯನು ಸುಕೃತವನ್ನು ತೆಗದುಕೊಳ್ಳಬಾರದು; ದೈವಸಂಕಲ್ಪದಿಂದ ಒಂದು ಆಪತ್ತು ಬಂದರೂ ವಿವೇಕಿಯಾದವನು ಪರಿಗ್ರಹಕ್ಕೆ ಒಡಂಬಡನು; ಸಕಲ ಧರ್ಮಗಳನ್ನು ತಿಳಿದಿರುವಂಥಾ ಕ್ಷತ್ರಿಯನು ಇಂಥಾ ದೈನ್ಯಕ್ಕೆ ಯಾತಕ್ಕೆ ಒಡಂಬಡುವನು! ಧರ್ಮಾಧರ್ಮಗಳನ್ನು ಕಾರ್ಯಾಕಾರ್ಯಗಳನ್ನು ಸಾವಧಾನವಾಗಿ ವಿಚಾರಿಸಿ ನಡೆಯುವಂಥಾ ಸತ್ಯಸಂಧನನು ತನ್ನ ಮಹಿಮೆಯಿಂದ ಸುಖಗಳನ್ನನುಭವಿಸುವನು; ಧರ್ಮಾರ್ಥ ಕಾಮಂಗಳು ಏಕಕಾಲದಲ್ಲಿ ಬರುವ ಸಮಯದಲ್ಲಿ ಯಾವದನ್ನು ಪರಿಗ್ರಹಿಸಬೇಕೆಂದು ಸಂಶಯ ಬಂದಲ್ಲಿ—ಧರ್ಮಕ್ಕೆ ವಿರುದ್ಧವಾದ ಅರ್ಥ ಕಾಮಗಳನ್ನು ಬಿಟ್ಟು ಧರ್ಮವನ್ನೇ ಪರಿಗ್ರಹಿಸಬೇಕು; ಅಂಥಾ ಧರ್ಮವು ಅರ್ಥ ಕಾಮಂಗಳಿಗೆ ವಿರುದ್ಧವಲ್ಲದಿದ್ದರೆ ಆ ಅರ್ಥ ಕಾಮಗಳನ್ನು ಮೊದಲು ಪರಿಗ್ರಹಿಸಿ ಆ ಬಳಿಕ ಧರ್ಮವನ್ನು ಪರಿಗ್ರಹಿಸಬೇಕು" ಅಂದನು.

ಆ ಬಳಿಕ ಅಷ್ಟಕನ ಕೂಟಸ್ಥನಾದ ವಸುಮನಸ್ಸೆಂಬವನು ಯ ಯಾತಿಯೊಡನೆ ಇಂತೆಂದನು: "ನಾನು ಇಕ್ಷ್ವಾಕುವಂಶದಲ್ಲಿ ಹುಟ್ಟಿದ ವಸುಮನಸ್ಸೆಂಬವನು; ಅಂತರಿಕ್ಷದಲ್ಲಾದರು ಸ್ವರ್ಗದಲ್ಲಾದರು ನನಗೆ ಪು ಣ್ಯಲೋಕಗಳು ಉಂಟಾದರೆ ತಿಳುಹಿಸು; ನೀನು ತಿಳಿಯದಿರುವ ಧರ್ಮ ಒಂದೂ ಇಲ್ಲವಲ್ಲ!"

ಯಯಾತಿಯು "ಕೇಳೈ ವಸುಮನಸ್ಸನೇ, ಭೂಮಿಯು ಅಂತರಿ ಕ್ಷವು ದಿಕ್ಕುಗಳು ಎಷ್ಟು ವಿಸ್ತಾರವಾಗಿರುವವೋ—ಸೂರ್ಯನು ತನ್ನ ಕಿ ರಣಗಳನ್ನು ಎಷ್ಟು ದೂರದಲ್ಲಿ ಪ್ರಕಾಶಿಸುವಹಾಗೆ ಮಾಡುವನೊ—ಅಷ್ಟು ವಿಸ್ತಾರದಲ್ಲಿಯೂ ಅಕ್ಷಯವಾಗ ಲೋಕಂಗಳು ನಿನಗುಂಟಾಗಿ ಸ್ವರ್ಗಕ್ಕೆ ಎದುರಾಗಿ ಬಂದು ನೋಡುತ್ತಲಿವೆ" ಅಂದನು.

ವಸುಮನಸ್ಸು "ಅಂಥಾ ಪುಣ್ಯಲೋಕಗಳನ್ನು ನಿನಗೆ ಕೊಟ್ಟೆ ನು; ಭೂಲೋಕದಲ್ಲಿ ಬೀಳದೆ ತಿರಿಗಿ ಸ್ವರ್ಗಕ್ಕೆ ಹೋಗು 'ನಾನು ಕ್ಷ ತ್ರಿಯನು; ಪರಿಗ್ರಹಿಸುವದು ಹ್ಯಾಗೆ?' ಅನ್ನುವದಾದರೆ ಈ ವನದಲ್ಲಿ ರುವ ಒಂದು ತೃಣವನ್ನಾದರು ಕ್ರಯವಾಗಿಕೊಟ್ಟು ಕೊಂಡುಕೊಳ್ಳಬ ಹುದು" ಅಂದನು.

ಯಯಾತಿಯು "ಇಂಥಾ ಸ್ವಲ್ಪಕ್ರಯದಿಂದ ಬಾಲಕರನ್ನು ವಂಚಿ ಸುವ ರೀತಿಯಲ್ಲಿ ನಿನ್ನನ್ನು ವಂಚಿಸಿ, ಮೊದಲು ಯಾರು ಮಾಡದಿರುವಂಥಾ ಅಧರ್ಮವನ್ನು ಅರ್ಥಕಾಂಕ್ಷೆಯಿಂದ ಹ್ಯಾಗೆ ಆಚರಿಸುವೆನು?" ಅಂದನು.

ವಸುಮನಸ್ಸು "ಕೇಳೈ ಯಯಾತಿರಾಯನೆ, ನಿನಗೆ ಕೊಟ್ಟಂಥಾ ಪುಣ್ಯಲೋಕಗಳನ್ನು ನಾನು ತಿರಿಗಿ ಕೊಳ್ಳುವದು ಹ್ಯಾಗೆ? ಕ್ರಯದಿಂದ ತೆಗದುಕೊಳ್ಳುವದು ನಿನಗೆ ಸಮ್ಮತವಾಗದೆ ಇದ್ದರೆ ನಾನು ಸುಮ್ಮನೆಯಾದ ರೂ ಕೊಡುವೆನೇ ಹೊರ್ತಾಗಿ ತಿರಿಗು ತೆಗದುಕೊಳ್ಳುವದಿಲ್ಲ" ಅಂದನು.

ಯಯಾತಿಯು "ಕೇಳೈ ವಸುಮನಸ್ಸನೇ, ನೀನುಕೊಡುವ ಪು ಣ್ಯಲೋಕಗಳು ಅಪಾರವಾಗಿ ಅಪರಿಮಿತವಾಗಿರುವವು; ನೀನು ಇಂದ್ರನಿ ಗೆ ಸಮಾನನಾಗಿರುವಂಥಾವನು; ನೀನು ಕೊಡುವಂಥಾ ಪುಣ್ಯಲೋಕಗಳ ನ್ನನುಭವಿಸುವದು ನನಗೆ ಲಾಭವಾಗಿ ತೋರಲಿಲ್ಲ" ಅಂದನು.

ಈ ಪ್ರಕಾರವಾಗಿ ಹೇಳಿದ ಯಯಾತಿಯೊಡನೆ ಮತ್ತು ಅಲ್ಲಿದ್ದ ಶಿಬಿ ಯೆಂಬವನಿಂತೆಂದನು; "ಕೇಳೈ ಯಯಾತಿಯೇ, ನಾನು ಶೀನರ ದೇಶಾಧಿ

ಪತಿಯಾದ ಶಿಬಿ ಎಂಬವನು ; ಅಂತರಿಕ್ಷದಲ್ಲಾದರು ಸ್ವರ್ಗದಲ್ಲಾದರು ಪುಣ್ಯಲೋಕಗಳು ನನಗಿದ್ದರೆ ತಿಳುಹಿಸು ; ನೀನರಿಯದಿರುವದೊಂದೂ ಇಲ್ಲ."

ಯಯಾತಿಯು ಕೇಳ್ಳೈ ಶಿಬಿಯೇ, ತಮಗೆ ತಾವೇ ಪ್ರಕಾಶಿಸುವಂಥಾವಾಗಿ ನೃತ್ಯಗೀತಾದಿ ಭೋಗಗಳೊಡನೆ ಕೂಡಿ ಸ್ವರ್ಗಲೋಕದಲ್ಲಿ ನಿನಗಿರುವಂಥಾ ಪುಣ್ಯಲೋಕಗಳು ಅವಾಙ್ಮನಸಗೋಚರಗಳಾಗಿರುವವು" ಅಂದನು.

ಶಿಬಿರಾಯನು "ಕೇಳ್ಳೈ ಯಯಾತಿಯೇ, ಅಂಥಾ ನನ್ನ ಪುಣ್ಯಲೋಕಗಳನ್ನು ನಿನಗೆ ಕೊಟ್ಟೆನು ; ನೀನು ತಿರಿಗು ಸ್ವರ್ಗಲೋಕಕ್ಕೆ ಹೋಗು" ಅಂದನು.

ಯಯಾತಿಯು "ನೀನು ಕೊಡುವಂಥಾ ಪುಣ್ಯಲೋಕಗಳು ಅಪರಿಮಿತಗಳು ; ನೀನು ಇಂದ್ರನಿಗೆ ಸಮಾನನಾಗಿರುವಂಥಾವನು ; ನೀನು ಕೊಡುವಂಥಾ ಪುಣ್ಯಲೋಕಂಗಳನ್ನನುಭವಿಸುವದು ನನಗೆ ಲಾಭವಾಗಿ ತೋರಲಿಲ್ಲ" ಅಂದನು.

ಅಷ್ಟಕನು "ಕೇಳ್ಳೈ ಯಯಾತಿಯೇ, ನಾವು ಒಬ್ಬೊಬ್ಬರಾಗಿ ಕೊಟ್ಟರೇ ನೀನು ತೆಗದುಕೊಳ್ಳುವದಿಲ್ಲ ; ನಮಗಿರುವ ಪುಣ್ಯಲೋಕಂಗಳಷ್ಟನ್ನು ನಿನಗೆ ಕೊಡುತಲಿದ್ದೇವೆ ; ಈ ಅರ್ಥಕ್ಕೆ ಒಡಂಬಡದಿದ್ದರೆ ನಮ್ಮ ವಾಗ್ದತ್ತವಾದ ಅರ್ಥವನ್ನು ಕೊಡದಿರುವ ಪಾಪದಿಂದ ನಾವು ದುರ್ಗತಿಯನ್ನೈದುವೆವಾದ್ದರಿಂದ ಅವಶ್ಯವು ನೀನು ಪುಣ್ಯಲೋಕಂಗಳನ್ನಂಗೀಕರಿಸಬೇಕು" ಎಂದು ಪ್ರಾರ್ಥಿಸಿದನು.

ಯಯಾತಿಯು "ಕೇಳಿರೈ ರಾಜಋಷಿಗಳಿರಾ, ಯಾರ್ಯಾರು ಯಾವ್ಯಾವ ಪ್ರಕಾರದಿಂದ ಏನೇನು ಕೊಟ್ಟದ್ದಾಗಿ ಹೇಳಿದರೂ ಆ ಅರ್ಥವು ನನಗೆ ಅಭಿಮತವಲ್ಲ ; ನೀವು ಅವಶ್ಯವಾಗಿ ಕೊಡಬೇಕೆಂದು ಮನಸ್ಸಿನಲ್ಲಿ ಕೋರಿದರೆ ಸತ್ಯವೂ ಸಕಲ ಭೂತದಯೆಯೂ ಉಳ್ಳ ಬ್ರಾಹ್ಮಣನಿಗೆ ಕೊಡತಕ್ಕಂಥಾದ್ದು ; ಇಷ್ಟೇ ಹೊರ್ತಾಗಿ ಯಾವಾಗಲು ಮೊದಲಿಲ್ಲದಿರುವಂಥಾ ದಾನಕ್ಕೆ ನಾನು ಒಪ್ಪಲಾರೆನು" ಅಂದನು.

ಅಷ್ಟಕನು "ಉನ್ನತವಾಗಿ ಚಿನ್ನದ ಮಯವಾಗಿ ಅಗ್ನಿಜ್ವಾಲೆಗೆ ಸಮಾನವಾದ ಐದು ರಥಂಗಳು ಅಂತರಿಕ್ಷದಲ್ಲಿ ಕಾಣಿಸುತ್ತಲಿವೆ ; ಅವು ಯಾರವು ?" ಎಂದು ಕೇಳಿದನು.

ಯಯಾತಿಯು "ಕೇಳೈ ಅಷ್ಟಕನೇ, ಚಿನ್ನದಮಯವಾದ ಈ ಐದುರಥಂಗಳು ನಿಮ್ಮ ಅಧೀನವಾಗಿ ಬರುತ್ತಲಿವೆ" ಅಂದನು.

ಈಪ್ರಕಾರವಾಗಿ ಯಯಾತಿಯೂ ಅಷ್ಟಕಾದಿಗಳೂ ಪರಸ್ಪರವು ಮಾತನಾಡುವ ಸಮಯದಲ್ಲಿ ಅಷ್ಟಕಾದಿಗಳು ಮಾಡುತಿದ್ದ ಬ್ರಹ್ಮದೇವನಿಂದ ಸೃಜಿಸಲ್ಪಟ್ಟಂಥಾ ಅಶ್ವಮೇಧವೆಂಬ ಮಹಾಯಜ್ಞದಲ್ಲಿ ಪಶುವಾಗಿದ್ದ ಕುದರೆಯ ಅಂಗಗಳನ್ನು ಕ್ರಮವಾಗಿ ಖಂಡಿಸಿ ಹೋತ, ಅಧ್ವರ್ಯುವು, ಉದ್ಗಾತನು, ಬ್ರಹ್ಮ ಎಂಬ ನಾಲ್ಕುಮಂದಿಯೂ ಮಿಕ್ಕ ಋತ್ವಿಕ್ಕುಗಳೊಡನೇ ಕೂಡಿ ಅಂಗಹೋಮವನ್ನು ಮಾಡಿದರು. ಆ ಯಜ್ಞದಲ್ಲಿ ವಪಾಹೋಮವನ್ನು ಮಾಡುವ ಸಮಯಗಲ್ಲಿ ಪರಮಪಾವನವಾದ ವಪಾಧೂಮದ ಪರಿಮಳವನ್ನು ಆಘ್ರಾಣಿಸಿ ಅಲ್ಲಿರುವ ಸಮಸ್ತ ಜನರು ಅಕ್ಷಣದಲ್ಲೇ ಸಮಸ್ತ ಪಾಪಗಳ ದೆಶೆಯಿಂದ ತೊಲಗಿದರು.

ಆ ಸಮಯದಲ್ಲಿ ಮೃಗಂಗಳು ಮಾಡುವಂಥಾ ಆಹಾರವೂ ಮೃಗಂಗಳು ಸಂಚರಿಸುವ ಹಾಗೆ ಸಂಚಾರವೂ ಉಳ್ಳವಳಾಗಿ ಮೃಗವ್ರತವನ್ನು ಮುಪ್ಪಿನಲ್ಲಾಚರಿಸಿದಂಥಾ ಯಯಾತಿರಾಯನ ಮಗಳಾದ ಮಾಧವೀಯು ಅನೇಕವಾದ ಮೃಗಂಗಳೊಡನೆ ಕೂಡಿ ಅಷ್ಟಕಾದಿಗಳ ಯಜ್ಞಶಾಲೆಯನ್ನೈದಿ, ವಪಾಧೂಮ ಗಂಧವನ್ನು ಆಘ್ರಾಣಿಸಿ, ಮೃಗಂಗಳೊಡನೆಕೂಡಿ ಆ ಯಜ್ಞಶಾಲೆಯಲ್ಲಿ ಸಂಚರಿಸುತ, ಮಹಾನುಭಾವರಾದ ತನ್ನ ಮಕ್ಕಳನ್ನು ಕಂಡು ಪರಮ ಸಂತೋಷವನ್ನುಪಟ್ಟು ಭೂಮಿಯಲ್ಲಿ ಹೆಜ್ಜೆಯನ್ನಿಕ್ಕದೆ ಅಂತರಿಕ್ಷದಲ್ಲಿರುವ ತಂದೆಯಾದ ಯಯಾತಿಯನ್ನು ಕಂಡು ನಮಸ್ಕರಿಸಿದಳು.

ಅದನ್ನು ಕಂಡು ವಸುಮನಸ್ಸೆಂಬವನು ಪರಮ ತಪಸ್ವಿಯಾದ ಮಾಧವೀಯನ್ನು ಕುರಿತು "ಎಲೈ ತಾಯೇ, ಈ ಮಹಾನುಭಾವನು ಯಾರೆಂದು ನಮಸ್ಕರಿಸಿದೆ ? ಈತನು ದೇವತೆಯೋ ರಾಜಕುಮಾರನೋ? ನೀನು ತಿಳಿದಿದ್ದರೆ ನಮಗೆ ತಿಳುಹಿಸಬೇಕು" ಎಂದು ಕೇಳಿದನು.

ಮಾಧವಿಯು ತನ್ನ ಕುಮಾರರನ್ನು ಕುರಿತು "ಎಲೈ ಮಕ್ಕಳಿರಾ, ಈತನು ನಹುಷನ ಮಗನಾದ ಯಯಾತಿರಾಯನು ; ನನಗೆ ತಂದೆಯು ; ನಿಮಗೆ ಮುತ್ತಪ್ಪನಾಗಬೇಕು ; ಈತನು ನನಗೆ ಒಡಹುಟ್ಟಿದ ಪೂರುವಿಗೆ ಪಟ್ಟವನ್ನು ಕಟ್ಟಿ ಸ್ವರ್ಗಕ್ಕೆ ಹೋದನು ; ಈಗ ಏನು ನಿಮಿತ್ತದಿಂದ ಇಲ್ಲಿಗೆ ಬಂದು ಇದ್ದಾನೋ ಅರಿಯೆನು" ಎಂದು ನುಡಿದಳು.

ಅಷ್ಟಕಾದಿಗಳು " ಎಲೈ ತಾಯೆ, ಈ ಮಹಾನುಭಾವನು ಪುಣ್ಯ ಮುಗಿಯಲು ಪುಣ್ಯಲೋಕದ್ದೆಸೆಯಿಂದ ಇಲ್ಲಿಗೆ ಬಂದನು " ಅಂದರು.

ಮಾಧವಿಯು ಕುಮಾರರ ವಾಕ್ಯವನ್ನು ಕೇಳಿ ಮನಸ್ಸಿನಲ್ಲಿ ತಲ್ಲಣಿಸಿ ದೌಹಿತ್ರರೊಡನೆ ಕೂಡಿರುವ ಯಯಾತಿಯನ್ನು ಕಂಡು " ನನ್ನ ತಪಸ್ಸಿನಿಂದ ಸಂಪಾದಿಸಲ್ಪಟ್ಟಂಥಾ ಪುಣ್ಯಲೋಕಗಳನ್ನು ನೀನನುಭವಿಸು; ಲೋಕದಲ್ಲಿ ಮಕ್ಕಳು ನ್ಯಾಯದಿಂದ ಸಂಪಾದಿಸಿದಂಥಾ ಧನವು ತಂದೆಗಳ ಅಧೀನವೆಂದು ಮಹಾಋಷಿಗಳು ಹೇಳುವದರಿಂದ ನಾನು ಮಾಡಿದ ಪುಣ್ಯಗಳಿಂದ ಪುಣ್ಯಲೋಕಗಳನ್ನು ಕೈಕೊಂಡು ತಿರಿಗೂ ಸ್ವರ್ಗಕ್ಕೆ ಹೋಗು " ಅಂದಳು.

ಯಯಾತಿಯು " ಕೇಳು ಮಗಳೇ, ಇಂಥಾ ಧರ್ಮಫಲವು ಶುಭವಾಗಿ ಆಗತಕ್ಕಂಥಾದ್ದು ; ನೀನು ಮಗಳಾಗಿ ನಿನ್ನ ದೆಸೆಯಿಂದ ದೌಹಿತ್ರರಾದ ಇವರಿಂದ ಈ ದುರ್ದೆಶೆಯನ್ನು ದಾಟಿದೆನು ; ಆದ್ದರಿಂದ ಈ ಹೊತ್ತು ಮೊದಲು ದೌಹಿತ್ರ ಸಂಬಂಧವು ಪಿತೃ ಯಜ್ಞಗಳಲ್ಲಿ ಪರಮಪಾವನರಾದ ಪಿತೃದೇವತೆಗಳಿಗೆ ಪ್ರೀತಿಯನ್ನು ಮಾಡುವಂಥಾದ್ದಾಗಲಿ ! ಪಿತೃಯಜ್ಞಗಳಲ್ಲಿ ದೌಹಿತ್ರನು ಕುತಪಕಾಲವು ತಿಲೆಗಳು ಎಂಬ ಈ ಮೂರು ವಸ್ತುಗಳು ಪರಮ ಪವಿತ್ರವಾಗಿರುವವು ; ಆ ಕಾಲದಲ್ಲಿ ಭೋಜನವನ್ನು ಮಾಡುವಂಥಾವರೂ ಬಡಿಸುವಂಥಾವರೂ ಅನ್ನ ಸೂಕ್ತಗಳು ಮೊದಲಾದ ಮಂತ್ರಗಳನ್ನು ಪಠಿಸುವಂಥಾವರೂ ಪರಿಶುದ್ಧರಾಗಿರಬೇಕು ; ದಿವಸಕ್ಕೆ ಎಂಟನೇ ಭಾಗವೆನ್ನಿಶಿಕೊಂಡು ಸೂರ್ಯನು ಮಂದಗತಿಯಾಗಿ ಕಾಣಿಸುವಂಥಾ ಸಮಯವು ಕುತಪಕಾಲವೆನ್ನಿಶಿಕೊಳ್ಳುವದು ; ಅಂಥಾ ಕುತಪಕಾಲದಲ್ಲಿ ಪಿತೃದೇವತೆಗಳಿಗೆ ಕೊಟ್ಟಂಥಾ ಪದಾರ್ಥಗಳು ಅಕ್ಷಯವಾದ ಫಲಗಳನ್ನು ಕೊಡುವವು ; ಪಿತೃಯಜ್ಞಗಳಲ್ಲಿ ತಿಲೆಗಳು ಪಿಶಾಚಗಳನ್ನೂ ದರ್ಭೆಗಳು ರಾಕ್ಷಸರನ್ನೂ ದೂರವಾಗೋಡಿಸುವವು ; ಪರಮ ಪಾವನನಾದ ಶ್ರೋತ್ರಿಯನು ಪಙ್ಕ್ತಿಗೆ ಪವಿತ್ರತ್ವವನ್ನು ಕಲ್ಪಿಸುವನು ; ಅಂಥಾ ಪಿತೃಯಜ್ಞದಲ್ಲಿ ಯತೀಶ್ವರನು ಊಟಮಾಡಿದರೆ ಅಕ್ಷಯವಾದ ಫಲವಾಗುವದು ; ಶ್ರೋತ್ರಿಯನೂ, ವ್ರತ ಪರಾಯಣನೂ, ಪರಮಪಾವನನೂ, ವಿಜ್ಞಾನಶೀಲನೂ ಸತ್ಪಾತ್ರನೂ ಆದ ಬ್ರಾಹ್ಮಣನು ಯಾವಕಾಲದಲ್ಲಿ ಶಿಕ್ಕುವನೋ ಆ ಕಾಲವೇ

ಪುಣ್ಯವೆನಿಸಿಕೊಳ್ಳುವದು ; ಅಂಥಾ ಕಾಲದಲ್ಲಿ ಶ್ರಾದ್ಧವಂ ಮಾಡುವಂಥಾವನು ಮುಖ್ಯ ಕಾಲದಲ್ಲಿ ಶ್ರಾದ್ಧವನ್ನು ಮಾಡಿದಂಥಾವನಾಗುವನು" ಎಂದು ನುಡಿದನು.

೨೦ನೇ ಅಧ್ಯಾಯ.

ಆ ಬಳಿಕ ಯಯಾತಿರಾಯನು ಅಷ್ಟಕಾದಿಗಳಂ ಕಂಡು " ನೀವಿನ್ನುಮೇಲೆ ವಿಳಂಬವನ್ನು ಮಾಡುವದಕ್ಕೆ ಕಾರಣವಿಲ್ಲ ; ಯಜ್ಞವು ಮುಗಿಯಿತು ; ಇನ್ನುಮೇಲೆ ಬಂದು ಮಹಾಕಾರ್ಯವುಂಟು ; ಅವಭೃತ ಸ್ನಾನವನ್ನು ಮಾಡೀ" ಅಂದನು.

ಅಷ್ಟಕನು " ಕೇಳೈ ಯಯಾತಿಯೇ, ನೀನು ರಥವನ್ನೇರಿ ಮೊದಲೇ ಗಗನಮಾರ್ಗದಲ್ಲಿ ನಡಿ ; ನಾವು ಉಚಿತವಾದ ಕಾಲದಲ್ಲಿ ಅಲ್ಲಿಗೆ ಬರುತ್ತೇವೆ" ಅಂದನು.

ಯಯಾತಿಯು " ನಾವಷ್ಟುಮಂದಿಯೂ ಸ್ವರ್ಗಕ್ಕೆ ಹೋಗಬೇಕು ; ಆಕಾಶ ಮಂಡಲದಲ್ಲಿ ಅತಿ ನಿರ್ಮಲವಾದ ಮಾರ್ಗವು ತೋರುತ್ತಲಿಧೆ" ಅಂದನು.

" ಆಗೇಹಾಗಲಿ" ಎಂದು ಅಷ್ಟಕನು ಶಿಬಿಯು ಪ್ರತರ್ದನನು ವಸುಮನಸ್ಸು ಎಂಬ ನಾಲ್ಕುಮಂದಿಯು ಅತಿ ತ್ವರಿತದಿಂದ ಅವಭೃತ ಸ್ನಾನವನ್ನು ಮಾಡಿ ದಿವ್ಯರಥಂಗಳನ್ನೇರಿ ತಮ್ಮ ಕಾಂತಿ ವಿಶೇಷಗಳಿಂದ ಭೂಮಿಯನ್ನೂ ಅಂತರಿಕ್ಷವನ್ನೂ ಆವರಿಸುತ ಗಗನಮಾರ್ಗದಲ್ಲಿ ನಡೆದರು.

ಆ ಬಳಿಕ ಅಷ್ಟಕನು ಯಯಾತಿಯನ್ನು ಕಂಡು " ಪುಣ್ಯಲೋಕಗಳನ್ನು ಪಡೆಯುವದರಲ್ಲಿ ಶ್ರೇಷ್ಠನಾಗಿ ಇಂದ್ರನಿಗೆ ಪರಮಮಿತ್ರನಾದ ನನ್ನನ್ನು ಬಿಟ್ಟು ಶಿಬಿರಾಯನು ಯಾವನಿಮಿತ್ತದಿಂದ ನಮ್ಮನ್ನುಹಿಂದಕ್ಕೆ ಬಿಟ್ಟು ಮುಂದೆ ನಡೆಯುತ್ತಾನೆ" ಎಂದು ಕೇಳಿದನು.

ಯಯಾತಿಯು " ಕೇಳೈ ಅಷ್ಟಕನೇ ಶಿಬಿರಾಯನು ತಾನು ಸಂಪಾದಿಸಿರುವ ಧನವಷ್ಟನ್ನು ಸತ್ಪಾತ್ರರು ಬಂದು ಯಾಚಿಸಿದಲ್ಲಿ ತೃಣವಾಗೆಣಿಸಿಕೊಂಡು ಕೊಡುವನೇ ಹೊರ್ತಾಗಿ ಸಂದೇಹಪಡನು ; ಇದಲ್ಲದೆ ದಾನವು, ತಪಸ್ಸು, ಸತ್ಯವು, ನಿಷಿದ್ಧ ಕರ್ಮಗಳನ್ನು ಬಿಡುವದು, ಐಶ್ವ

ಕ್ಯವು, ಕ್ಷಮೆಯು, ಸಾಧುತ್ವವು, ಶೀತೋಷ್ಣದ್ವಂದಗಳನ್ನು ಸಹಿಸುವದು, ಅಲಕ್ಷ್ಯವಿಲ್ಲದಿರುವದು, ಸಕಲ ಭೂತಗಳಲ್ಲಿಯೂ ದಯೆಯು—ಇವಷ್ಟೂ ಶಿಬಿರಾಯನಲ್ಲಿರುವದ್ದರಿಂದ ಈತನು ರಥದಲ್ಲಿ ಮೊದಲೇ ಹೋಗುತ್ತಿದ್ದಾನೆ” ಅಂದನು.

ಅಷ್ಟಕನು “ಕೇಳೈ ಯಯಾತಿರಾಯನೇ, ಇಂದ್ರ ಸಮಾನನಾಗಿರುವ ನಿನಗೆ ಈ ಧರ್ಮ ಸೂಕ್ಷ್ಮ ಪರಿಜ್ಞಾನವು ತಂದೆಯಾದ ನಹುಷನ ಪ್ರಭಾವದಿಂದಾಯಿತೋ—ಕುಮಾರನಾದ ಪೂರುವಿನ ಪ್ರಭಾವದಿಂದಾಯಿತೋ—ಯಾವರೀತಿಯಿಂದ ಬಂತು? ಯಾಕೆಂದರೆ; ಇಂಥಾ ಧರ್ಮ ರಹಸ್ಯವು ನಿನಗೊಬ್ಬನಿಗೆ ಹೊರ್ತಾಗಿ ಮತ್ತೊಬ್ಬನಿಗೆ ಹೇಳುವದಕ್ಕೆ ಅಳವಲ್ಲೆಂದು ತೋರುತ್ತಲಿದೆ” ಅಂದನು.

ಯಯಾತಿಯು “ನಾನು ಮಹಾನುಭಾವನಾದ ನಹುಷನ ಮಗನಾದ್ದರಿಂದಲೂ ಧಾರ್ಮಿಕ ಶ್ರೇಷ್ಠನಾದ ಪೂರುವಿನ ತಂದೆಯಾದ್ದರಿಂದಲೂ ನಿಮಗೆ ಮಾತಾಮಹನಾದ್ದರಿಂದಲೂ ಇಂಥಾ ರಹಸ್ಯ ಧರ್ಮಗಳನ್ನು ತಿಳಿದು ದೌಹಿತ್ರರಾದ ನಿಮಗೆ ತಿಳುಹಿಸಿದೆನು; ನಾನು ಮೊದಲು ಸಮಸ್ತವಾದ ಭೂಮಂಡಲವನ್ನು ಜಯಿಸಿ ದಿಗ್ವಿಜಯದಿಂದ ಬಂದ ಧನವನ್ನು ಸಂಖ್ಯೆಯಿಲ್ಲದೆ ಬ್ರಾಹ್ಮಣರಿಗೆ ಕೊಟ್ಟು ಶತಾಶ್ವಮೇಧಗಳನ್ನು ಮಾಡಿದೆನು; ಆದ್ದರಿಂದ ದೇವತೆಗಳು ನನ್ನನ್ನು ಯಜ್ಞನೆಂದು ಹೇಳುವರು; ಅಂಥಾ ಅಶ್ವಮೇಧಗಳಲ್ಲಿ ಭೂಮಂಡಲವಷ್ಟು ವಾಹನಗಳು, ಭೂಷಣಗಳು, ಗೋಗಣಂಗಳು, ಅನೇಕ ಸುವರ್ಣಗಳು, ಬಹುವಿಧ ಧನಂಗಳು, ಧಾನ್ಯಗಳು, ನೂರರ್ಬುದಂಗಳ ಆನೆಗಳು—ಇವಷ್ಟನ್ನು ಸತ್ಪಾತ್ರದಲ್ಲಿ ಕೊಟ್ಟೆನು. ಭೂಮಿಯೂ ಅಂತರಿಕ್ಷವೂ ಸತ್ಯದಲ್ಲೇ ನಿಂತಿರುವವು; ಅಗ್ನಿದೇವನು ಮನುಷ್ಯಲೋಕದಲ್ಲಿ ಸತ್ಯದಿಂದಲೇ ಪ್ರಜ್ವಲಿಸುತ್ತಲಿರುವನು; ದೇವತೆಗಳೂ ಮುನಿಗಳೂ ಸತ್ಯದಿಂದಲೇ ಪೂಜ್ಯರಾಗಿರುವರು; ಸಾಧುಜನಂಗಳು ಸತ್ಯವನ್ನೇ ಪೂಜಿಸಿ ಆ ಸತ್ಯದಿಂದಲೇ ಪೂಜ್ಯರಾಗುವರು; ಆದ್ದರಿಂದ ನಾನು ಅಸತ್ಯವಾಡುವದಿಲ್ಲ; ಸತ್ಕರ್ಮಗಳಿಂದ ಪುಣ್ಯಲೋಕಗಳನ್ನು ಸಂಪಾದಿಸಿರುವ ನನ್ನ ಕಥಾ ವೃತ್ತಾಂತವನ್ನು ಅಸೂಯೆಯಿಲ್ಲದೆ ಬ್ರಾಹ್ಮಣರಿಗೆ ಯಾವಪುರುಷನು ಕೇಳಿಸುತ್ತಲಿರುವನೋ ಆತನು ನಮ್ಮ ಪುಣ್ಯಲೋಕಗಳನ್ನೈದುವನು” ಎಂದು ನುಡಿದು ಮಹಾತ್ಮನಾಗಿ ಪರಮಾದ

ರ್ಯವುಳ್ಳ ಯಯಾತಿಮಹಾರಾಯನು ಅಧೋಗತಿಯಲ್ಲಿ ಬೀಳದೆ ಅಷ್ಟಕಾದಿ ದೌಹಿತ್ರರ ದೆಸೆಯಿಂದ ಅವರೊಡನೆ ಕೂಡಿ ಮಗುಚಿ ಸ್ವರ್ಗಕ್ಕೆ ಹೋದನು.

ಈಪ್ರಕಾರವಾಗಿ ಯಯಾತಿಯು ಬಹು ದಕ್ಷಿಣೆಗಳುಳ್ಳ ಯಜ್ಞಗಳನ್ನು ಮಾಡಿದ ದೌಹಿತ್ರರಾದ ಶಿಬಿ ಮೊದಲಾದ ರಾಜರು ಕೊಟ್ಟ ಸುಕೃತಗಳಿಂದ ಸ್ವರ್ಗ ಪದವನ್ನು ಪಡೆದು ಸುಗಂಧಯುಕ್ತವಾದ ಪುಷ್ಪವೃಷ್ಟಿಯೂ ಗಂಧರ್ವರ ಗಾನವೂ ಅಪ್ಸರಸ್ತ್ರೀಯರ ನಾಟ್ಯವೂ ದಿವ್ಯದುಂದುಭಿ ಧ್ವನಿಯೂ ಸಿದ್ಧಚಾರಣರ ಸ್ತೋತ್ರವೂ ಹೆಗ್ಗಳವಾಗಲು ಅತ್ಯಂತ ಕಾಂತಿಯುಕ್ತನಾಗಿ ದಿವ್ಯವೈಭವದಿಂದ ಪ್ರಕಾಶಿಸುತ್ತ ಸ್ವರ್ಗಸೌಖ್ಯವನ್ನು ಅನುಭವಿಸುತ್ತಿದ್ದನು. ಬ್ರಹ್ಮದೇವನು ಆತನನ್ನು ನೋಡಿ ಹಿತವಚನಗಳಿಂದ ಸಂತೋಷಪಡಿಸುತ್ತ "ಲೋಕದಲ್ಲಿ ಸಕಲಧರ್ಮಗಳನ್ನೂ ಸಂಪಾದಿಸಿ ಸತ್ಕರ್ಮಗಳಿಂದ ಪರಿಶುದ್ಧನಾಗಿ ಅಕ್ಷಯವಾದ ಕೀರ್ತಿಯನ್ನು ಪಡೆದಿರುವ ರಾಜಋಷಿಯಾದ ನಿನ್ನ ಮಹಿಮೆಯನ್ನು ತಿಳಿಯದೇ ಸ್ವರ್ಗದಲ್ಲಿರುವವರು ತಾಮಸ ಸ್ವಭಾವದಿಂದ ನಿನ್ನನ್ನು ಭೂಮಿಗೆ ತಳ್ಳಿದರು; ಹಾಗಾದರೂ ನೀನು ದೌಹಿತ್ರರಿಂದ ರಕ್ಷಿತನಾಗಿ ಉತ್ತಮವಾಗಿರುವ ಪುಣ್ಯಪದವನ್ನು ಸೇರಿದೆ!" ಎಂದು ಹೊಗಳಿದನು.

ಯಯಾತಿಯು "ಎಲೈ ಬ್ರಹ್ಮದೇವನೆ, ಅನೇಕ ಸಂವತ್ಸರಗಳು ಧರ್ಮದಿಂದ ಪ್ರಜಾಪರಿಪಾಲನವನ್ನು ಮಾಡಿ ಅಧಿಕವಾಗಿ ದಾನಗಳನ್ನೂ ಯಾಗಗಳನ್ನೂ ಮಾಡಿ ಸಂಪಾದಿಸಿದ ಪುಣ್ಯವು ಅಲ್ಪಕಾಲದಲ್ಲೇ ನಷ್ಟವಾಗಿ ನಾನು ಭೂಮಿಯಲ್ಲಿ ಬೀಳುವದಕ್ಕೆ ಕಾರಣವೇನು? ಈ ಸಂಶಯವನ್ನು ಪರಿಹರಿಸುವದಕ್ಕೆ ನೀನೇ ಸಮರ್ಥನಾದವನು" ಅಂದನು.

ಚತುರ್ಮುಖನು "ಎಲೈ ರಾಜಶ್ರೇಷ್ಠನೆ, ನೀನು ಬಹುಕಾಲ ಧರ್ಮದಿಂದ ರಾಜ್ಯಪರಿಪಾಲನೆಮಾಡಿ ಅನೇಕ ಯಜ್ಞಗಳನ್ನೂ ದಾನಗಳನ್ನೂ ಮಾಡಿದಾಗ್ಯೂ ಸ್ವರ್ಗವನ್ನುಹೊಂದಿ ದುರಭಿಮಾನವನ್ನು ಪಡೆದವನಾದ್ದರಿಂದ ಸ್ವರ್ಗದಲ್ಲಿರುವವರು ನಿನ್ನನ್ನು ತಿರಸ್ಕರಿಸಿದರು; ಆ ದೋಷದಿಂದ ನಿನ್ನ ಪುಣ್ಯಫಲವೆಲ್ಲವೂ ನಷ್ಟವಾಗಿ ಹೋಯಿತು, ಆದ್ದರಿಂದ ನೀನು ಸ್ವರ್ಗದದೆಸೆಯಿಂದ ಭೂಮಿಯಲ್ಲಿ ಬೀಳುವವನಾದೆ; ಅದಕಾರಣ

ದುರಭಿಮಾನವೂ ಹಿಂಸೆಯೂ ಬಲವೂ ವಂಚನೆಯೂ ಸ್ವರ್ಗವನ್ನು ಸಾಧಿಸಿಕೊಡಲಾರವು ; ಇನ್ನು ಮೇಲಾದರೂ ನೀನು ಉತ್ತಮ ಮಧ್ಯಮ ಅಧಮರಾದ ಜನರೊಳಗೆ ಒಬ್ಬನಿಗಾದರೂ ಅವಮಾನವನ್ನು ಮಾಡದೆ ದುರಭಿಮಾನವನ್ನು ಬಿಟ್ಟು ಸಮಚಿತ್ತನಾಗಿದ್ದರೆ ನಿನಗೆ ಸಮಾನನಾಗವನು ಒಬ್ಬನೂ ಇಲ್ಲ ; ಪುಣ್ಯಪದದಿಂದ ಚ್ಯುತನಾಗಿ ತಿರಿಗೂ ಸ್ವರ್ಗವನ್ನು ಪಡೆದ ನಿನ್ನ ಚರಿತ್ರರೂಪವಾದ ಈ ಯಿತಿಹಾಸವನ್ನು ಯಾರು ಓದುವರೋ ಯಾರು ಕೇಳುವರೋ ಅವರೆಲ್ಲರೂ ವಿಷಮವಾದ ದುರ್ಗತಿಗಳನ್ನು ಹೊಂದದೆ ಸೌಖ್ಯಗಳನ್ನು ಅನುಭವಿಸುವದಕ್ಕೆ ಸಂದೇಹವಿಲ್ಲ" ಎಂದು ನುಡಿದನು.

ಇಂತು ಕರ್ಣಾಟಕಭಾಷೆಯಲ್ಲಿ ಶ್ರೀಮಹೀಶೂರ ಪುರವರಾಧೀಶ ಚಾಮರಾಜ ತನುಜ ಶ್ರೀಮತ್ಕೃಷ್ಣರಾಜ ವಿರಚಿತವಾದ ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಯಯಾತಿರಾಯುನ ಚರಿತ್ರ ನಿರೂಪಣಕ್ಕೆ ಮಂಗಳಮಸ್ತು.

ನೋಟು—ಮೈಸೂರು ಶ್ರೀಮನ್ಮಹಾರಾಣೀಯವರ ಬಾಲಿಕಾ ಪಾಠಶಾಲೆಗಾಗಿ ಮುದ್ರಿಸಿರುವ ಪುಸ್ತಕಗಳೂ ಮತ್ತು ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತದ ಪರ್ವಗಳೂ ನಮ್ಮಲ್ಲಿಯೂ ದೊರೆಯುತ್ತವೆ.

ಎಂ. ರುದ್ರಪ್ಪ ಅನಡ ಸನ್,
ಪ್ರೊಪ್ರೈಟರಸ ಶ್ರೀಚಾಮುಂಡೇಶ್ವರಿ ಪ್ರಸ,
ಲಾಲ್‌ಬಾಗ್ ರೋಡ್ ಬೆಂಗಳೂರು.

ಯಂ. ರುದ್ರಪ್ಪ
ಅಂಡ್ ಸನ್.